ವಿರಾಟ್ ಅಭ್ಯಾಸ

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ದೆಹಲಿ ತಂಡದಲ್ಲಿ ಆಡುತ್ತಿರುವ ವಿರಾಟ್ ಕೊಹ್ಲಿ ಅವರು ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಮಂಗಳವಾರ ಅಭ್ಯಾಸ ನಡೆಸಿದರು



ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 85,524 | ನಿಫ್ಟಿ 26,177 | $/₹ 89.63 | ಚಿನ್ನ (Std. 10g) ₹1,42,700 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,23,100 (ಬೆಂಗಳೂರು)

3.67 ಕೋಟಿ ಹೆಸರು ಹೊರಕ್ಕೆ

11 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಮತದಾರರ ಕರಡು ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಚುನಾವಣಾ ಆಯೋಗವು 11 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ನಡೆಸಿ, 3.67 ಕೋಟಿ ಮತದಾರರನ್ನು ಕೈಬಿಟ್ಟಿದೆ.

ಎರಡನೇ ಹಂತದಲ್ಲಿ ಎಸ್‌ಐಆರ್ ಪ್ರಕ್ರಿಯೆ ಕೈಗೊಂಡ ಮಧ್ಯಪ್ರದೇಶ, ಛತ್ತೀಸಗಢ, ಕೇರಳ ಹಾಗೂ ಅಂಡಮಾನ್ ಮತ್ತು ನಿಕೋಬಾರ್‌ನ ಕರಡು ಮತದಾರರ ಪಟ್ಟಿ ಮಂಗಳವಾರ ಪ್ರಕಟವಾಗಿದೆ. ಪಶ್ಚಿಮ ಬಂಗಾಳ, ರಾಜಸ್ಥಾನ, ಗೋವಾ, ಪುದುಚೇರಿ, ಲಕ್ಷದ್ವೀಪ, ಗುಜರಾತ್ ಮತ್ತು ತಮಿಳುನಾಡಿನ ಕರಡು ಪಟ್ಟಿಗಳನ್ನು ಆಯೋಗವು ಕಳೆದ ಹತ್ತು ದಿನಗಳಲ್ಲಿ ಬಿಡುಗಡೆ ಮಾಡಿದೆ.

ಇದರೊಂದಿಗೆ ಉತ್ತರ ಪ್ರದೇಶ ಹೊರತುಪಡಿಸಿ ಎರಡನೇ ಹಂತದಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಸಿದ ಎಂಟು ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳ ಕರಡು ಮತದಾರರ ಪಟ್ಟಿಯನ್ನು ಬಿಡುಗಡೆ ಮಾಡಿದಂತಾಗಿದೆ. ಉತ್ತರ ಪ್ರದೇಶದ ಕರಡು ಪಟ್ಟಿಯನ್ನು ಡಿಸೆಂಬರ್ 31ಕ್ಕೆ ಪ್ರಕಟಿಸಲಾಗುವುದು.

ಕರಡು ಮತದಾರರ ಪಟ್ಟಿಯಲ್ಲಿ ಸ್ಥಾನ ಪಡೆಯದೇ ಇರುವ ಅರ್ಹ ಮತದಾರರು ಅರ್ಜಿಗಳನ್ನು ಭರ್ತಿ ಮಾಡಿ, ದಾಖಲೆಗಳನ್ನು ಸಲ್ಲಿಸುವ ಮೂಲಕ ಅಂತಿಮ ಪಟ್ಟಿಯಲ್ಲಿ ಸ್ಥಾನ ಪಡೆಯುವ ಅವಕಾಶ ವಿದೆ ಎಂದು ಆಯೋಗ ಹೇಳಿದೆ. ಕರಡು ಪಟ್ಟಿ ಬಗ್ಗೆ ಆಕ್ಷೇಪಣೆ ಸಲ್ಲಿಕೆಗೆ ಜನವರಿ 22ರ ಗಡುವು ನೀಡಲಾಗಿದೆ.

ಅಂಕಿ ಅಂಶಗಳು

35.52 ಕೋಟಿ
11 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್‌ಗೆ ಮುನ್ನ ಇದ್ದ ಒಟ್ಟು ಮತದಾರರು


31.85 ಕೋಟಿ
ಕರಡು ಪಟ್ಟಿಯಲ್ಲಿರುವ ಮತದಾರರು

3.67 ಕೋಟಿ
ಕೈಬಿಟ್ಟ ಮತದಾರರ ಸಂಖ್ಯೆ

11 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೈಬಿಟ್ಟ ಮತದಾರರ ವಿವರ

ಎಸ್‌ಐಆರ್ 2ನೇ ಹಂತ

- ಮಧ್ಯಪ್ರದೇಶ, ಛತ್ತೀಸಗಢ, ಕೇರಳ, ಅಂಡಮಾನ್ ಮತ್ತು ನಿಕೋಬಾರ್, ಪಶ್ಚಿಮ ಬಂಗಾಳ, ರಾಜಸ್ಥಾನ, ಗೋವಾ, ಪುದುಚೇರಿ, ಲಕ್ಷದ್ವೀಪ, ಗುಜರಾತ್ ಮತ್ತು ತಮಿಳುನಾಡಿನ ಮತದಾರರ ಕರಡು ಪಟ್ಟಿ ಪ್ರಕಟ
- ಉತ್ತರ ಪ್ರದೇಶದ ಕರಡು ಮತದಾರರ ಪಟ್ಟಿ ಡಿ.31ಕ್ಕೆ ಪ್ರಕಟಗೊಳ್ಳಲಿದೆ



ಮೊದಲ ಹಂತದ ಎಸ್‌ಐಆರ್ ಈ ವರ್ಷದ ಆರಂಭದಲ್ಲಿ ಬಿಹಾರದಲ್ಲಿ ನಡೆದಿತ್ತು. ಅಲ್ಲಿ 7.89 ಕೋಟಿ ಮತದಾರರ ಪೈಕಿ ಸುಮಾರು 65 ಲಕ್ಷ ಮತದಾರರನ್ನು ಕರಡು ಪಟ್ಟಿಯಿಂದ ಕೈಬಿಡಲಾಗಿತ್ತು. ಆ ಬಳಿಕ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸುವ ಅವಧಿಯಲ್ಲಿ ಸುಮಾರು ಮೂರು ಲಕ್ಷ ಮತದಾರರನ್ನು ಮತ್ತೆ ಪಟ್ಟಿಗೆ ಸೇರಿಸಲಾಗಿದೆ.

ಎರಡನೇ ಹಂತದ ಎಸ್‌ಐಆರ್ ನಡೆದ 11 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಹಿಂದಿನ ಪಟ್ಟಿಯಲ್ಲಿ 35.52 ಕೋಟಿ ಮತದಾರರು ಇದ್ದರು. ಅದರಲ್ಲಿ 31.85 ಕೋಟಿ ಮತದಾರರು ಕರಡು ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಆಯೋಗವು ಕೈಬಿಟ್ಟಿರುವ 3.67 ಕೋಟಿ ಮತದಾರರಲ್ಲಿ 99.81 ಲಕ್ಷ ಮಂದಿ 'ಮೃತಪಟ್ಟವರು' ಎಂದು ಹೇಳಿದೆ. 2.47 ಕೋಟಿ ಮತದಾರರು ಶಾಶ್ವತವಾಗಿ ವಲಸೆ ಹೋಗಿದ್ದಾರೆ. ಒಂದಕ್ಕಿಂತ ಹೆಚ್ಚು ಕಡೆ ನೋಂದಾಯಿಸಿದ್ದಾರೆ ಎಂಬ ಕಾರಣಕ್ಕೆ 18.60 ಲಕ್ಷ ಮತದಾರರನ್ನು ಕೈಬಿಡಲಾಗಿದೆ.

ಬಾಂಗ್ಲಾ ಹೈಕಮಿಷನ್‌ಗೆ ನುಗ್ಗಲು ಯತ್ನ

ನವದೆಹಲಿ (ಪಿಟಿಐ): ಬಾಂಗ್ಲಾ ದೇಶದಲ್ಲಿ ಹಿಂದೂ ಧರ್ಮದ ದೀಪು ಚಂದ್ರದಾಸ್ ಎಂಬ ವ್ಯಕ್ತಿಯ ಹತ್ಯೆ ಖಂಡಿಸಿ ದೆಹಲಿಯಲ್ಲಿರುವ ಆ ದೇಶದ ಹೈಕಮಿಷನ್ ಕಚೇರಿಯ ಮುಂದೆ ಮಂಗಳವಾರ ಭಾರಿ ಆಕ್ರೋಶ ವ್ಯಕ್ತವಾಗಿದೆ. ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ಸಾವಿರಾರು ಕಾರ್ಯಕರ್ತರು ಹೈಕಮಿಷನ್ ಕಚೇರಿಗೆ ನುಗ್ಗಲು ಯತ್ನಿಸಿದ್ದಾರೆ. ಬ್ಯಾರಿಕೇಡ್‌ಗಳನ್ನು ಮುರಿದು ಹಾಕಿದ್ದಾರೆ ಮತ್ತು ತಡೆಯಲು ಬಂದ ಪೊಲೀಸರ ಜೊತೆಗೆ ಸಂಘರ್ಷಕ್ಕೆ ಇಳಿದಿದ್ದಾರೆ.

ಕೇಸರಿ ಧ್ವಜ ಹಿಡಿದು ಬಾಂಗ್ಲಾದೇಶದ ವಿರುದ್ಧ ಘೋಷಣೆ ಕೂಗುತ್ತಿದ್ದ ಕಾರ್ಯಕರ್ತರು ಬ್ಯಾರಿಕೇಡ್‌ಗಳನ್ನು ಹತ್ತಿ ಒಳನುಗ್ಗಲು ಯತ್ನಿಸಿದ ವೇಳೆ ಪೊಲೀಸರ ಜೊತೆಗೆ ಮಾತಿನ ಚಕಮಕಿ ನಡೆಸಿದರು. ಪ್ರತಿಭಟನಕಾರರು ಹೆಚ್ಚಾಗಿದ್ದರಿಂದ ಪೊಲೀಸರು ಪರಿಸ್ಥಿತಿ ನಿಯಂತ್ರಿಸಲು ಹೆಣಗಾಡಿದರು.

ಪ್ರತಿಭಟನೆ ನಡೆಸುವುದಾಗಿ ಹಿಂದೂ ಸಂಘಟನೆಗಳು ಮುಂಚಿತವಾಗಿಯೇ ಘೋಷಿಸಿದ್ದರಿಂದ ಮಂಗಳವಾರ ಬೆಳಿಗ್ಗೆಯಿಂದಲೇ ಹೈ ಕಮಿಷನ್ ಕಚೇರಿ ಮುಂದೆ ಬಿಗಿಭದ್ರತೆ ಏರ್ಪಡಿಸಲಾಗಿತ್ತು. ಹಲವು ಸುತ್ತಿನ ಬ್ಯಾರಿಕೇಡ್‌ಗಳನ್ನು ಅಳವಡಿಸಿ, ಪೊಲೀಸರು ಹಾಗೂ ಅರೆಸೇನಾ ಪಡೆಗಳನ್ನು ನಿಯೋಜಿಸಲಾಗಿತ್ತು. ಒಳನುಗ್ಗುವುದನ್ನು ತಡೆಯಲು ದೆಹಲಿ ನಗರ ಸಾರಿಗೆ ಬಸ್‌ಗಳನ್ನು ರಸ್ತೆಗೆ ಅಡ್ಡಲಾಗಿ ನಿಲ್ಲಿಸಲಾಗಿತ್ತು.

'ಪ್ರತಿಭಟನಾ ಸ್ಥಳದಲ್ಲಿ 1,500ಕ್ಕೂ ಅಧಿಕ ಮಂದಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಹೈ ಕಮಿಷನ್ ಕಚೇರಿಯಿಂದ 800 ಮೀಟರ್ ದೂರದಲ್ಲಿಯೇ ಪ್ರತಿಭಟನಕಾರರನ್ನು ತಡೆಯಲಾಯಿತು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಇನ್ನಷ್ಟು ಸುದ್ದಿಗಳು 7

ಚಿನ್ನಸ್ವಾಮಿಯಲ್ಲಿ ಹಜಾರೆ ಟ್ರೋಫಿ ಪಂದ್ಯಕ್ಕೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಿಗದಿಯಾಗಿದ್ದ ವಿಜಯ್ ಹಜಾರೆ ಟ್ರೋಫಿಯ ಏಕದಿನ ಕ್ರಿಕೆಟ್ ಟೂರ್ನಿಯ ದೆಹಲಿ ಹಾಗೂ ಆಂಧ್ರಪ್ರದೇಶ ನಡುವಿನ ಪಂದ್ಯಕ್ಕೆ ಅನುಮತಿ ನೀಡಲು ಪೊಲೀಸರು ನಿರಾಕರಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, 'ಜಿಬಿಎ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಅಗ್ನಿಶಾಮಕ ದಳ, ಬೆಸ್ಕಾಂ, ಲೋಕೋಪಯೋಗಿ ಇಲಾಖೆ, ಆರೋಗ್ಯ ಇಲಾಖೆ ಹಿರಿಯ ಅಧಿಕಾರಿಗಳ ಜತೆ ಕ್ರೀಡಾಂಗಣ ಪರಿಶೀಲಿಸಲಾಗಿತ್ತು. ಈ ಸಂಬಂಧ ಪೊಲೀಸ್ ಇಲಾಖೆಯಿಂದಲೂ ತಂಡದ ಮುಖ್ಯಸ್ಥರಿಗೆ ವರದಿ ನೀಡಲಾಗಿತ್ತು. ಅಂತಿಮವಾಗಿ ಸಮಿತಿಯು ಪಂದ್ಯಾವಳಿ ನಡೆಸಲು ಅನುಮತಿ ನಿರಾಕರಿಸಿದೆ. ಹೆಚ್ಚಿನ ಮಾಹಿತಿ ನೀಡಲು ಸಾಧ್ಯವಿಲ್ಲ' ಎಂದು ಹೇಳಿದರು. 14

1.44 ಲಕ್ಷ ಮೃತರ ಖಾತೆಗಳಿಗೆ ₹68 ಲಕ್ಷ ಜಮೆ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಗೃಹಲಕ್ಷ್ಮೀ ಮತ್ತಿತರ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಲ್ಲಿ 1,44,056 ಮಂದಿ ಮೃತಪಟ್ಟ ಬಳಿಕವೂ ಅವರ ಖಾತೆಗೆ ಸುಮಾರು ₹68 ಲಕ್ಷ ಜಮೆ ಆಗಿದೆ' ಎಂದು ಕರ್ನಾಟಕ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಇಲ್ಲಿ ತಿಳಿಸಿದರು.

ದಕ್ಷಿಣಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕುರಿತ ಕಾರ್ಯಾಗಾರ, ಪ್ರಗತಿ ಪರಿಶೀಲನಾ ಸಭೆ ಹಾಗೂ ನಶೆಮುಕ್ತ ಕರ್ನಾಟಕ ಅಭಿಯಾನವನ್ನು ಇಲ್ಲಿ ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

'ನೇರ ನಗದು ಪಾವತಿ ವ್ಯವಸ್ಥೆ ಇರುವುದರಿಂದ ಫಲಾನುಭವಿಗಳು ಮೃತಪಟ್ಟ ಬಳಿಕವೂ ಅವರ ಖಾತೆಗೆ ಹಣ ಜಮೆ ಆಗಿದೆ. ಆ ಹಣ ಜನರದ್ದು. ಹಾಗಾಗಿ ಅದನ್ನು ಹಿಂಪಡೆಯಲು ಪ್ರಯತ್ನ ನಡೆದಿದೆ' ಎಂದರು.

'ಯೋಜನೆಯ ಫಲ ಪೋಲು ತಪ್ಪಿಸಬೇಕಾದ ಹೊಣೆಯೂ ಸಮಿತಿಗಳ ಮೇಲಿದೆ' ಎಂದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಬಿಕ್ಲು ಕೊಲೆ ಪ್ರಕರಣ: ಬೈರತಿ ಬಸವರಾಜಗೆ ಸಂಕಷ್ಟ

ಜಾಮೀನು ಕೋರಿದ್ದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ



ಬೈರತಿ ಬಸವರಾಜ

ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದ ಐದನೇ ಆರೋಪಿ, ಕೆ.ಆರ್. ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ ಸಲ್ಲಿಸಿದ್ದ ಮಧ್ಯಂತರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ.

ಈ ಕುರಿತ ಅರ್ಜಿಯನ್ನು 'ಶಾಸಕರು–ಸಂಸದರ ವಿರುದ್ಧ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ಮ್ಯಾಜಿಸ್ಟ್ರೇಟ್ ಕೋರ್ಟ್‌ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಅವರು ಮಂಗಳವಾರ ವಜಾಗೊಳಿಸಿ ಆದೇಶಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್ ನಿನ್ನೆಯಷ್ಟೇ ನ್ಯಾಯಾಲಯಕ್ಕೆ (ಡಿ.21) 4,236 ಪುಟಗಳ ಬೃಹತ್ ದೋಷಾರೋಪ ಪಟ್ಟಿ ಸಲ್ಲಿಸಿದೆ. ಸದ್ಯದ ದೋಷಾರೋಪ ಪಟ್ಟಿಯಿಂದ ಬೈರತಿ ಅವರ ಹೆಸರನ್ನು ಹೊರಗಿಡಲಾಗಿದೆ.

ಪ್ರಕರಣವೇನು?: ಭಾರತಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿನ ಮಿನಿ ಅವೆನ್ಯೂ ರಸ್ತೆಯಲ್ಲಿರುವ ಸೇಫ್ ಮೆಡಿಕಲ್ ಸ್ಟೋರ್ ಮುಂಭಾಗ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವುನನ್ನು 2025ರ ಜುಲೈ 15ರಂದು 8ರಿಂದ 9 ಜನರಿದ್ದ ಗುಂಪು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿತ್ತು. ನಾಪತ್ತೆಯಾಗಿರುವ ಬೈರತಿ ಬಸವರಾಜ ಅವರಿಗಾಗಿ ಸಿಐಡಿ ಅಧಿಕಾರಿಗಳು ಹುಡುಕಾಟ ನಡೆಸುತ್ತಿದ್ದಾರೆ.

'ಡಿಕೆಶಿ ಗಮನಹರಿಸಿದ್ದರೆ ಹೆಚ್ಚು ಸ್ಥಾನ ಗೆಲುವು'

ಬೆಂಗಳೂರು: 'ಮತಪಟ್ಟಿ ಲೋಪಗಳ ಬಗ್ಗೆ ಡಿ.ಕೆ. ಶಿವಕುಮಾರ್ ಗಮನ ಹರಿಸಿದ್ದರೆ ಇನ್ನೂ 8–10 ಕ್ಷೇತ್ರಗಳಲ್ಲಿ ಗೆಲ್ಲಬಹುದಿತ್ತು' ಎಂದು ರಾಹುಲ್ ಗಾಂಧಿಗೆ ಬರೆದ ಪತ್ರದಲ್ಲಿ ಶಾಸಕ ಕೆ.ಎನ್. ರಾಜಣ್ಣ ಹೇಳಿದ್ದಾರೆ. 8

ಕಾಂಗ್ರೆಸ್ ಹೋರಾಟ

ನವದೆಹಲಿ: 'ವಿಬಿ–ಜಿ ರಾಮ್ ಜಿ' ಮಸೂದೆಗೆ ವಿರೋಧ ವ್ಯಕ್ತಪಡಿಸಿರುವ ಕರ್ನಾಟಕದ ಸರ್ಕಾರ, ಕೇಂದ್ರದ ವಿರುದ್ಧದ ಹೋರಾಟ ರೂಪಿಸುವ ಬಗ್ಗೆ ಗ್ರಾಮೀಣಾಭಿವೃದ್ಧಿ ತಜ್ಞರೊಂದಿಗೆ ಸಮಾಲೋಚನೆ ನಡೆಸಿದೆ. 4B

ಸೂರ್ಯೋದಯ: 6:38 ಸೂರ್ಯಾಸ್ತ : 5:59 ಚಂದ್ರೋದಯ: ಬೆ. 9:11 ಚಂದ್ರಾಸ್ತ: ರಾ. 8:53 | ಮಂಗಳವಾರದ ಉಷ್ಣಾಂಶ : ಗರಿಷ್ಠ 26° ಕನಿಷ್ಠ 15°
ಬುಧವಾರದ ಉಷ್ಣಾಂಶ 26° ಗರಿಷ್ಠ | 15° ಕನಿಷ್ಠ | ಗುರುವಾರ 27° : 16° | ಶುಕ್ರವಾರ 28° : 16° | ಶನಿವಾರ 28° : 16°
ಬುಧವಾರ ● ಡಿಸೆಂಬರ್ 24, 2025
ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ

ಪ್ರಕರಣಕ್ಕೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿರುವ (ಕೆಐಎಎಲ್) ರಾಮೇಶ್ವರಂ ಕೆಫೆಯಲ್ಲಿ ಕಲುಷಿತ ಆಹಾರ ಪೂರೈಸಿದ ಆರೋಪದಡಿ ಕೆಫೆಯ ಪ್ರಮುಖರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

‘ನಮ್ಮ ವಿರುದ್ಧ ಕೆಐಎಎಲ್ ದಾಖಲಾಗಿರುವ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ರಾಮೇಶ್ವರಂ ಕೆಫೆಯ ಬಿ.ಎಲ್.ಸುಮಂತ್, ಕೆಫೆಯ ಮಾತೃ ಸಂಸ್ಥೆ ಅಲ್ಟ್ರಾನ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕರಾದ ದಿವ್ಯಾ ಮತ್ತು ರಾಘವೇಂದ್ರ ರಾವ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರಿದ್ದ ಏಕಸದಸ್ಯ ಪೀಠ ಆದೇಶಿಸಿದೆ.

‘ಅರ್ಜಿದಾರರಿಗೆ ಕಿರುಕುಳ ನೀಡುವ ಮತ್ತು ಬ್ಲ್ಯಾಕ್ ಮೇಲ್ ಮಾಡುವ ಉದ್ದೇಶದಿಂದ ಮತ್ತು ಪ್ರತೀಕಾರದ ಭಾಗವಾಗಿ ಈ ದೂರು ಸಲ್ಲಿಸಲಾಗಿದೆ. ದೂರಿನ ಅಂಶಗಳಿಗೂ ಅಪರಾಧಕ್ಕೂ ಯಾವುದೇ ಸಂಬಂಧವಿಲ್ಲ. ವಿಸ್ತೃತವಾಗಿ ಪ್ರಕರಣದ ವಿಚಾರಣೆ ನಡೆಸಬೇಕಿದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ ಕೆಐಎಎಲ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ತಡೆ ನೀಡಿ ಆದೇಶಿಸಿದೆ.

ಪಾಲಿಕೆಗಳಿಂದ ಅನುದಾನಕ್ಕೆ ಬೇಡಿಕೆ

ಪಶ್ಚಿಮ ನಗರ ಪಾಲಿಕೆಯಲ್ಲಿ ಅತಿ ಕಡಿಮೆ ತೆರಿಗೆ ಸಂಗ್ರಹ; ಹೆಚ್ಚಿನ ಹಣಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸಂಪನ್ಮೂಲ ಕ್ರೋಡೀಕರಣ, ತೆರಿಗೆ ಸಂಗ್ರಹದಲ್ಲಿ ವ್ಯತ್ಯಾಸ
- 26 ಪೇಯಿಂಗ್ ಗೆಸ್ಟ್‌ಗಳಿಗೆ ಬೀಗ

ಬೆಂಗಳೂರು: ಐದು ನಗರ ಪಾಲಿಕೆಗಳ ತೆರಿಗೆ ಸಂಗ್ರಹ, ಸಂಪನ್ಮೂಲ ಕ್ರೋಡೀಕರಣದಲ್ಲಿ ಭಾರಿ ವ್ಯತ್ಯಾಸವಿದ್ದು, ಕಾಮಗಾರಿಗಳ ನಿರ್ವಹಣೆಗೆ ಹೆಚ್ಚಿನ ಅನುದಾನ ನೀಡುವಂತೆ ಬೇಡಿಕೆ ಇರಿಸಿವೆ.

‘ತೆರಿಗೆ ಸಂಗ್ರಹದಲ್ಲಿ ನಗರ ಪಾಲಿಕೆಯಿಂದ ನಗರ ಪಾಲಿಕೆಗೆ ವ್ಯತ್ಯಾಸ ಇರುವುದು ನಿಜ. ತೆರಿಗೆ ಸಂಗ್ರಹಕ್ಕೆ ಹೆಚ್ಚು ಒತ್ತು ನೀಡಲಾಗಿದ್ದರೂ, ಕೆಲವು ನಗರ ಪಾಲಿಕೆಗಳ ಆದಾಯ ಕಡಿಮೆ ಇದೆ. ಪಶ್ಚಿಮ ನಗರ ಪಾಲಿಕೆಯಲ್ಲಿ ಅತಿ ಕಡಿಮೆ ತೆರಿಗೆ ಸಂಗ್ರಹವಾಗುತ್ತಿದೆ’ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

‘ಕಡಿಮೆ ಆದಾಯವಿರುವ ಪಶ್ಚಿಮ ನಗರ ಪಾಲಿಕೆ ಸೇರಿದಂತೆ ಐದೂ ನಗರ ಪಾಲಿಕೆಗಳು ಹೆಚ್ಚಿನ ಅನುದಾನ ನೀಡಬೇಕೆಂದು ಬೇಡಿಕೆ ಇರಿಸಿವೆ. ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದಿದ್ದು, ಅಲ್ಲಿನ ತೀರ್ಮಾನದಂತೆ ಮುಂದುವರಿಯಲಾಗುವುದು’ ಎಂದು ಮಾಹಿತಿ ನೀಡಿದರು.

‘ಬಿಬಿಎಂಪಿ ಬದಲು ಐದು ನಗರ ಪಾಲಿಕೆಗಳನ್ನು ರಚಿಸಿರುವುದೇ ಇದಕ್ಕೆ ಕಾರಣ ಎಂದು ಹೇಳುವುದಿಲ್ಲ. ಸ್ಥಳೀಯ ಮಟ್ಟದ ಸೌಲಭ್ಯಗಳನ್ನು ಜನರಿಗೆ ಕ್ಷಿಪ್ರವಾಗಿ ತಲುಪಿಸಲು ನಗರ ಪಾಲಿಕೆಗಳನ್ನು ರಚಿಸಲಾಗಿದೆ. ಕೆಲವು ಭಾಗಗಳಲ್ಲಿ ತೆರಿಗೆ– ಸಂಪನ್ಮೂಲ ಸಂಗ್ರಹದಲ್ಲಿ ಸಮಸ್ಯೆ ಆಗಿರುವುದು ನಿಜ. ತೆರಿಗೆ ಸಂಗ್ರಹಕ್ಕೆ ಹೆಚ್ಚಿನ ಒತ್ತು ನೀಡಲು ಸೂಚಿಸಲಾಗಿದೆ’ ಎಂದರು.

26 ಪಿಜಿಗಳಿಗೆ ಬೀಗ: ಮಾರ್ಗಸೂಚಿಗಳನ್ನು ಪಾಲಿಸದ, ತೆರಿಗೆ ಪಾವತಿಸದ 26 ಪೇಯಿಂಗ್ ಗೆಸ್ಟ್‌ಗಳಿಗೆ (ಪಿಜಿ) ಬೀಗ ಹಾಕಲಾಗಿದೆ. ಪೂರ್ವ ಹಾಗೂ ದಕ್ಷಿಣ ನಗರ ಪಾಲಿಕೆಗಳಲ್ಲಿ ಪಿಜಿಗಳು ಹೆಚ್ಚಾಗಿವೆ. ಉತ್ತರದಲ್ಲಿ ಕಡಿಮೆ ಸಂಖ್ಯೆಯಲ್ಲಿವೆ. ನಿಯಮ ಪಾಲಿಸದಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಗಾಳಿ ಗುಣಮಟ್ಟ ಅಳೆಯಲು ಇನ್ನಷ್ಟು ಸೆನ್ಸರ್



ನಗರದಲ್ಲಿ ಗಾಳಿ ಗುಣಮಟ್ಟ ಕಡಿಮೆಯಾಗುತ್ತಿರುವ ಬಗ್ಗೆ ವರದಿಯಾಗಿದ್ದು, ಈ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿಯ ಜೊತೆ ಮಾತುಕತೆ ಮಾಡಲಾಗಿದೆ. ನಗರದಲ್ಲಿ ಇನ್ನೂ 10 ಸ್ಥಳಗಳಲ್ಲಿ ‘ಸೆನ್ಸರ್’ ಅಳವಡಿಸಿ, ಗುಣಮಟ್ಟದ ದತ್ತಾಂಶವನ್ನು ಸಂಗ್ರಹಿಸಲಾಗುತ್ತದೆ. ಮಾಲಿನ್ಯ ಕಡಿಮೆ ಮಾಡಲು ಗಿಡ–ಮರಗಳನ್ನು ಬೆಳಸುವುದು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಮಹೇಶ್ವರ್ ರಾವ್ ಹೇಳಿದರು.

ಇನ್ನೆರಡು ತಿಂಗಳು ಕಳೆದರೆ ಬಿಸಿಲು ಹೆಚ್ಚಾಗುತ್ತದೆ. ಈ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಚರ್ಚಿಸಲಾಗಿದೆ. ಕೆಲವು ಪ್ರದೇಶಗಳಲ್ಲಿ ನೆರಳು ಕಲ್ಪಿಸುವ ವ್ಯವಸ್ಥೆ ಮಾಡಲಾಗುತ್ತದೆ. ಕುಳಿತು ದಣಿವಾರಿಸಿಕೊಳ್ಳಲು ತಂಪಾದ ಜಾಗಗಳನ್ನು ನಿರ್ಮಿಸಿ ಆಸನದ ವ್ಯವಸ್ಥೆ ಮಾಡಲು ಆಲೋಚಿಸಲಾಗಿದೆ ಎಂದು ತಿಳಿಸಿದರು.

ಟೋಯಿಂಗ್‌ಗೆ ಪಾಲಿಕೆಯಿಂದಲೇ ವಾಹನ



ನಗರದ ಪ್ರಮುಖ ರಸ್ತೆಗಳಲ್ಲಿ ಎಲ್ಲೆಂದರಲ್ಲಿ ಪಾರ್ಕಿಂಗ್ ಮಾಡುವ ವಾಹನಗಳನ್ನು ತೆರವುಗೊಳಿಸಲು ಸಂಚಾರ ವಿಭಾಗದ ಪೊಲೀಸರಿಗೆ ನಗರ ಪಾಲಿಕೆಗಳ ವತಿಯಿಂದ ಟೋಯಿಂಗ್ ವಾಹನ ನೀಡಲು ನಿರ್ಧರಿಸಲಾಗಿದೆ. ಐದೂ ನಗರ ಪಾಲಿಕೆಗಳಲ್ಲಿ ಬಾಡಿಗೆ ಆಧಾರದಲ್ಲಿ ಟೋಯಿಂಗ್ ವಾಹನಗಳನ್ನು ಪಡೆದುಕೊಂಡು, ಅವುಗಳನ್ನು ಸಂಚಾರ ಪೊಲೀಸರಿಗೆ ನೀಡಲು ಟೆಂಡರ್ ಆಹ್ವಾನಿಸಲಾಗಿದೆ.

‘ಪೂರ್ವ ನಗರ ಪಾಲಿಕೆಯ ಪ್ರಮುಖ ರಸ್ತೆಗಳಲ್ಲಿ ಎಲ್ಲೆಂದರಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಲಾಗುತ್ತಿದೆ. ಇವುಗಳನ್ನು ತೆರವುಗೊಳಿಸಲು ನಗರ ಪಾಲಿಕೆಯ ಪ್ರತಿ ವಲಯಕ್ಕೆ ಒಂದು ಟೋಯಿಂಗ್ ವಾಹನವನ್ನು ಸಂಚಾರ ಪೊಲೀಸ್ ಇಲಾಖೆಗೆ ನೀಡಲಾಗುವುದು’ ಆಯುಕ್ತ ಡಿ.ಎಸ್.ರಮೇಶ್ ತಿಳಿಸಿದರು.

‘ಪ್ರಮುಖ ರಸ್ತೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಿದ್ದು, ಹೊಸದಾಗಿ ಡಾಂಬರೀಕರಣ ಮಾಡಲಿರುವ ರಸ್ತೆಗಳ ಮಾಹಿತಿಯನ್ನು ಪೊಲೀಸ್ ಇಲಾಖೆಗೆ ಒದಗಿಸಲಾಗುತ್ತದೆ. ಡಾಂಬರೀಕರಣ ಮಾಡಿದ ನಂತರ ಕನಿಷ್ಠ 24 ಗಂಟೆಯವರೆಗೆ ಯಾವುದೇ ವಾಹನಗಳು ಓಡಾಟ ನಡೆಸದಂತೆ ನಿರ್ಬಂಧಿಸಲು ಸೂಚಿಸಲಾಗಿದೆ’ ಎಂದು ವಿವಿಧ ಇಲಾಖೆಗಳ ಸಮನ್ವಯ ಸಭೆಯ ನಂತರ ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ರಾಷ್ಟ್ರ ಮಟ್ಟದ ಟೇಕ್ವಾಂಡೊ ಚಾಂಪಿಯನ್‌ಶಿಪ್‌ಗೆ ಚಾಲನೆ

ಯಲಹಂಕ: ಕರ್ನಾಟಕ ಅಮೆಚೂರು ಟೇಕ್ವಾಂಡೊ ಅಸೋಸಿಯೇಷನ್ ಆಶ್ರಯದಲ್ಲಿ ‘28ನೇ ರಾಷ್ಟ್ರೀಯ ಮಟ್ಟದ ಟೆಕ್ವಾಂಡೊ ಚಾಂಪಿಯನ್‌ಶಿಪ್’ ಪಂದ್ಯಾವಳಿಗೆ ಅಖಿಲ ಭಾರತ ಟೆಕ್ವಾಂಡೊ ಅಸೋಸಿಯೇಷನ್ ಅಧ್ಯಕ್ಷ ಮಾರುತಿ ಪ್ರಸಾದ್ ಚಾಲನೆ ನೀಡಿದರು.

‘ಹೆಣ್ಣಾಗಲಿ ಅಥವಾ ಗಂಡಾಗಲಿ ಟೇಕ್ವಾಂಡೊ ಕ್ರೀಡೆಯನ್ನು ಕಲಿತಿದ್ದರೆ, ಒಬ್ಬರೇ ಇದ್ದಾಗ ಯಾರಾದರೂ ಅನಿರೀಕ್ಷಿತವಾಗಿ ದಾಳಿ ಮಾಡಿದ ಸಂದರ್ಭದಲ್ಲಿ ಸ್ವಯಂರಕ್ಷಣೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ’ ಎಂದು ಕರ್ನಾಟಕ ಅಮೆಚೂರು ಟೇಕ್ವಾಂಡೊ ಅಸೋಸಿಯೇಷನ್ ಅಧ್ಯಕ್ಷ ಸುಬ್ಬರಾಯ.ಎ ಹೇಳಿದರು.

ಮಕ್ಕಳೂ ಸೇರಿದಂತೆ ಯುವಕರಲ್ಲಿ ಈ ಕ್ರೀಡೆಯ ಬಗ್ಗೆ ಆಸಕ್ತಿ ಮೂಡಿಸಿ, ಪ್ರೇರಣೆ ಪಡೆಯಲಿ ಎಂಬ ಉದ್ದೇಶದಿಂದ ಈ ಪಂದ್ಯಾವಳಿಯನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಕರ್ನಾಟಕ, ಒಡಿಶಾ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಕೇರಳ, ಪುದುಚೇರಿ, ಮಧ್ಯಪ್ರದೇಶಗಳಿಂದ ಟೇಕ್ವಾಂಡೊ ಪಟುಗಳು ಈ ಪಂದ್ಯಾವಳಿಯಲ್ಲಿ ಪಾಲ್ಗೊಂಡಿದ್ದಾರೆ. 10 ವರ್ಷದಿಂದ 60 ವರ್ಷದ ವಯೋಮಾನದವರಿಗಾಗಿ ವಿವಿಧ ವಿಭಾಗಗಳಲ್ಲಿ ಪಂದ್ಯಾವಳಿಗಳು ನಡೆಯಲಿದ್ದು, ವಿಜೇತ ತಂಡಗಳಿಗೆ ಪಾರಿತೋಷಕ ಹಾಗೂ ಬಹುಮಾನಗಳನ್ನು ವಿತರಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

ದ್ವೇಷ ಭಾಷಣ ಮಸೂದೆ: ಪ್ರತಿಭಟನೆ



ಬೆಂಗಳೂರು: ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಮಸೂದೆಯ ಮೂಲಕ ವಾಕ್ ಸ್ವಾತಂತ್ರ್ಯ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು ಬಿಜೆಪಿ ನಾಯಕರು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿಯ ಬೆಂಗಳೂರು ಉತ್ತರ, ದಕ್ಷಿಣ ಮತ್ತು ಕೇಂದ್ರ ಜಿಲ್ಲಾ ಘಟಕಗಳ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಮುಂದೆ ಆಯೋಜಿಸಿದ್ದ ಪ್ರತಿಭಟನೆ ವೇಳೆ ಸುದ್ದಿಗಾರರ ಜತೆ ಮಾತನಾಡಿದರು.

ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಮತ್ತು ಶಾಸಕ ಸಿ.ಕೆ.ರಾಮಮೂರ್ತಿ ಮಾತನಾಡಿ, ‘ರಾಜಕೀಯ ವಿರೋಧಿಗಳನ್ನು ಜೈಲಿಗೆ ತಳ್ಳುವ ಉದ್ದೇಶದಿಂದ ರಾಜ್ಯ ಸರ್ಕಾರ ಈ ಕರಾಳ ಕಾನೂನು ರೂಪಿಸಲು ಮುಂದಾಗಿದೆ. ಈ ಮಸೂದೆಗೆ ಒಪ್ಪಿಗೆ ನೀಡಬಾರದು ಎಂದು ರಾಜ್ಯಪಾಲರು ಮತ್ತು ರಾಷ್ಟ್ರಪತಿಗಳಿಗೆ ಮನವಿ ಮಾಡುತ್ತೇವೆ’ ಎಂದರು.

ಉತ್ತರ ಜಿಲ್ಲಾ ಘಟಕ ಅಧ್ಯಕ್ಷ ಎಸ್.ಹರೀಶ್ ಮಾತನಾಡಿ, ‘ವಾಕ್ ಸ್ವಾತಂತ್ರ್ಯ ದಮನ ಮಾಡುವುದಕ್ಕಾಗಿ ಈ ಕಾಯ್ದೆ ಜಾರಿ ಮಾಡಲು ಸರ್ಕಾರ ಮುಂದಾಗಿದೆ. ನ್ಯಾಯಾಂಗದ ಅಧಿಕಾರವನ್ನು ಉಲ್ಲಂಘಿಸಿ ಡಿವೈಎಸ್ಪಿ ಮೇಲ್ಪಟ್ಟ ಅಧಿಕಾರಿಗಳು ಯಾರನ್ನು ಬೇಕಾದರೂ ಏಕಾಏಕಿ ಜೈಲಿಗೆ ಹಾಕುವ ಅಧಿಕಾರ ಹೊಂದಲಿದ್ದಾರೆ. ರಾಜ್ಯದಲ್ಲಿ ತುರ್ತುಪರಿಸ್ಥಿತಿಯನ್ನು ಹೇರಲು ಮುಂದಾಗಿದ್ದಾರೆ’ ಎಂದು ಟೀಕಿಸಿದರು.

ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ಆಳ್ವಿಕೆ ಇರುವ ರಾಜ್ಯಗಳಲ್ಲಿ ಇದೇ ಮಾದರಿಯ ಕಾನೂನಿನ ಮೂಲಕ ವ್ಯಕ್ತಿ ಸ್ವಾತಂತ್ರ್ಯ ಕಿತ್ತುಕೊಳ್ಳುವುದನ್ನು ಖಂಡಿಸುತ್ತೇವೆ ಎಂದರು.

ಅಧ್ಯಕ್ಷರಾಗಿ ಜಯಪ್ಪ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವಾಣಿಜ್ಯ ಸಂಘಟನೆಯ ಅಧ್ಯಕ್ಷರಾಗಿ ಎಂ. ಜಯಪ್ಪ ಆಯ್ಕೆಯಾಗಿದ್ದಾರೆ.

ಎಂ. ಜಯಪ್ಪ ಅವರು ಭಾರತೀಯ ವಾಣಿಜ್ಯ ಸಂಘಟನೆಯಲ್ಲಿ ಕಾರ್ಯನಿರ್ವಾಹಕ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ವಾಣಿಜ್ಯ ಮತ್ತು ನಿರ್ವಹಣಾ ಶಿಕ್ಷಣಕ್ಕೆ ಹೊಸ ದಿಕ್ಕು ಸಿಗುವ ಭರವಸೆ ಇದೆ ಎಂದು ಸಂಘಟನಾ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗ್ರೇಟರ್ ಬೆಂಗಳೂರು ಪ್ರಾಧಿಕಾರ ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಆವರಣದಲ್ಲಿ ಕಂದಾಯ ವಿಭಾಗದ ಅಧಿಕಾರಿ– ನೌಕರರು ಮಂಗಳವಾರ ಸಭೆ ನಡೆಸಿದರು

‘ವಿಶೇಷ ಆಯುಕ್ತರಿಂದ ಹಿಂಸೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತರು ನಗರ ಪಾಲಿಕೆಗಳ ಕಂದಾಯ ವಿಭಾಗದ ಅಧಿಕಾರಿ– ಸಿಬ್ಬಂದಿಗೆ ಮಾನಸಿಕ ಹಿಂಸೆ ನೀಡಿ, ಅವಾಚ್ಯ ಪದಗಳಿಂದ ನಿಂದಿಸುತ್ತಿದ್ದಾರೆ. ಅವರು ಕ್ಷಮೆ ಕೇಳುವವರೆಗೂ ವಿಡಿಯೊ ಸಂವಾದಕ್ಕೆ ಹಾಜರಾಗುವುದು ಬೇಡ’ ಎಂದು ಅಧಿಕಾರಿ/ನೌಕರರು ತೀರ್ಮಾನಿಸಿದ್ದಾರೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮಂಗಳವಾರ ನಡೆದ ಸಭೆಯಲ್ಲಿ ಈ ಕುರಿತು ಸರ್ವಾನುಮತದ ತೀರ್ಮಾನ ಕೈಗೊಳ್ಳಲಾಗಿದೆ.

‘ಪಾಲಿಕೆಯ ಉಪ ಆಯುಕ್ತರು, ಕಂದಾಯ ಅಧಿಕಾರಿ, ಸಹ ಕಂದಾಯ ಅಧಿಕಾರಿ, ಮೌಲ್ಯಮಾಪಕರು, ಕಂದಾಯ ಪರಿವೀಕ್ಷಕರು, ಕಂದಾಯ ವಸೂಲಿಗಾರರಿಗೆ ವಿಶೇಷ ಆಯುಕ್ತರು, ಪ್ರತಿ ದಿನ ವಿಡಿಯೊ ಸಂವಾದ ಸಭೆಯಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಮಾನಸಿಕ ಕಿರುಕುಳ, ಮಾನಸಿಕ ಹಿಂಸೆ ನೀಡಿ, ಬೆದರಿಕೆ ಹಾಕಿ, ತೇಜೋವಧೆ ಮಾಡಿ, ಮಾನಹಾನಿ ಮಾಡುತ್ತಿದ್ದಾರೆ. ಇದರಿಂದ ಅಧಿಕಾರಿ/ನೌಕರರ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ. ಆದ್ದರಿಂದ ಇನ್ನು ಮುಂದೆ ಕಂದಾಯ ಅಧಿಕಾರಿಗಳು ಮತ್ತು ಸಹ ಕಂದಾಯ ಅಧಿಕಾರಿಗಳು, ವಿಶೇಷ ಆಯುಕ್ತರು ನಡೆಸುವ ವಿಡಿಯೊ ಸಂವಾದ ಸಭೆಯಲ್ಲಿ ಪಾಲ್ಗೊಳ್ಳಬಾರದು. ಅವರು ಕ್ಷಮೆಯಾಚಿಸದಿದ್ದಲ್ಲಿ, ಸಂಘದ ವತಿಯಿಂದ ಸಭೆ ಸೇರಿ ಮುಂದಿನ ತೀರ್ಮಾನ ಕೈಗೊಳ್ಳಲು ನಿರ್ಧರಿಸಲಾಗಿದೆ’ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

‘ಉಪ ಆಯುಕ್ತ ಡಿ.ಕೆ.ಬಾಬು ಮತ್ತು ಕಂದಾಯ ಅಧಿಕಾರಿ ವರಲಕ್ಷ್ಮಿ ಅವರನ್ನು ಕಾನೂನುಬಾಹಿರವಾಗಿ ಅಮಾನತು ಮಾಡಲು ಪ್ರಸ್ತಾವ ಸಲ್ಲಿಸಲಾಗಿದೆ. ಇದನ್ನು ಕೂಡಲೇ ವಾಪಸ್ ಪಡೆಯಬೇಕು ಎಂದು ಒತ್ತಾಯಿಸಲಾಯಿತು’ ಎಂದರು.

ಚರ್ಚಿಸಿ ಕ್ರಮ: ಮಹೇಶ್ವರ್ ರಾವ್

‘ನಗರ ಪಾಲಿಕೆಗಳ ಕಂದಾಯ ವಿಭಾಗದ ಅಧಿಕಾರಿ– ನೌಕರರು ಪ್ರತಿಭಟಿಸುತ್ತಿದ್ದು, ಅವರೊಂದಿಗೆ ಮಂಗಳವಾರ ಮಾತುಕತೆ ನಡೆಸಲಾಗಿದೆ. ಎಲ್ಲವನ್ನೂ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಸುದ್ದಿಗಾರರಿಗೆ ತಿಳಿಸಿದರು.

‘ನಗರ ಪಾಲಿಕೆಗಳ ಕಂದಾಯ ವಿಭಾಗದ ಸಿಬ್ಬಂದಿ ಹೆಚ್ಚಿನ ಒತ್ತಡದಲ್ಲಿ ಕೆಲಸ ಮಾಡುತ್ತಿರುವುದು ನಿಜ. ಇಬ್ಬರು ಅಧಿಕಾರಿಗಳನ್ನು ಅಮಾನತು ವಾಪಸ್ ಪಡೆಯುವಂತೆ ಅವರು ಪ್ರತಿಭಟನೆ ಮಾಡುತ್ತಿದ್ದಾರೆ. ಸಂಘದ ಸದಸ್ಯರೊಂದಿಗೆ ಮಾತುಕತೆ ನಡೆಸಲಾಗಿದೆ. ಖಾತಾ ವಿತರಣೆಯಲ್ಲಿ ಯಾವ ರೀತಿಯಲ್ಲಿ ಲೋಪವಾಗಿದೆ ಎಂಬುದನ್ನು ಪರಿಶೀಲಿಸಲಾಗುತ್ತದೆ. ಅದಕ್ಕಾಗಿ ಮೌಲ್ಯಮಾಪನವನ್ನೂ ಮಾಡಲಾಗುತ್ತದೆ. ಕೆಲವು ಬಾರಿ ನಾವು ಕಠಿಣವಾಗಿ ನಡೆದುಕೊಂಡಿರುತ್ತೇವೆ. ತಪ್ಪಾಗಿದ್ದರೆ ಅದನ್ನು ಸರಿಪಡಿಸಲಾಗುತ್ತದೆ’ ಎಂದರು.

ಬೆಂಗಳೂರು–ಮಡಗಾಂವ್ ವಂದೇ ಭಾರತ್: ಎಚ್‌ಡಿಕೆ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಧಾನಿ ಬೆಂಗಳೂರು ಹಾಗೂ ರಾಜ್ಯದ ಕರಾವಳಿ ಪ್ರದೇಶಗಳ ನಡುವೆ ಪ್ರಯಾಣವನ್ನು ಮತ್ತಷ್ಟು ಸುಲಭಗೊಳಿಸಲು ಬೆಂಗಳೂರು–ಮಡಗಾಂವ್ ನಡುವೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸೇವೆ ಆರಂಭಿಸುವಂತೆ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಮನವಿ ಮಾಡಿದ್ದಾರೆ.

ಈ ಸಂಬಂಧ ರೈಲ್ವೆ ಸಚಿವರಿಗೆ ಪತ್ರ ಬರೆದಿರುವ ಕುಮಾರಸ್ವಾಮಿ, ಬೆಂಗಳೂರು ನಗರದಿಂದ ಹಾಸನ-ಮಂಗಳೂರು ಜಂಕ್ಷನ್- ಉಡುಪಿ ಮತ್ತು ಕಾರವಾರ ಮಾರ್ಗವಾಗಿ ಗೋವಾದ ಮಡಗಾಂವ್‌ವರೆಗೆ ವಂದೇ ಭಾರತ್ ರೈಲು ಸೇವೆ ಆರಂಭಿಸುವಂತೆ ಕೋರಿದ್ದಾರೆ.

ಪಶ್ಚಿಮಘಟ್ಟ ಪ್ರದೇಶ ಸೇರಿದಂತೆ ಈ ಮಾರ್ಗದಲ್ಲಿ ವಿದ್ಯುದೀಕರಣ ಕಾರ್ಯ ಯಶಸ್ವಿಯಾಗಿ ಪೂರ್ಣಗೊಂಡಿರುವುದರಿಂದ ವೇಗದ ರೈಲು ಸೇವೆ ಆರಂಭಿಸಲು ಇದೀಗ ಸರ್ವ ರೀತಿಯ ಅನುಕೂಲಕರ ಮೂಲಸೌಲಭ್ಯಗಳಿವೆ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಹಾಸನ, ಮಂಗಳೂರು ಜಂಕ್ಷನ್, ಉಡುಪಿ, ಕಾರವಾರ ಮಾರ್ಗವಾಗಿ ಗೋವಾದ ಮಡಗಾಂವ್‌ಗೆ ಸಂಪರ್ಕ ಕಲ್ಪಿಸುವ ವಂದೇ ಭಾರತ್ ರೈಲು ಸೇವೆಯಿಂದ ಪ್ರವಾಸೋದ್ಯಮಕ್ಕೆ ಹೆಚ್ಚು ಅನುಕೂಲ ಆಗಲಿದೆ ಎಂದು ಪತ್ರದಲ್ಲಿ ಹೇಳಿದ್ದಾರೆ.

ನಗರದಲ್ಲಿ ಇಂದು

‘ರಾಜಾರಾಮ್ ಮೋಹನ್ ರಾಯ್ ಅವರ ಚಿಂತನೆಗಳ ಪ್ರಸ್ತುತತೆ’ ವಿಷಯದ ಬಗ್ಗೆ ದತ್ತಿ ಉಪನ್ಯಾಸ: ಜೆ.ಬಿ. ಜನಾರ್ದನ, ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ, ಉಪಸ್ಥಿತಿ: ವೂಡೇ ಪಿ. ಕೃಷ್ಣ, ಡಬ್ಲ್ಯು.ಡಿ. ಅಶೋಕ್, ಆಯೋಜನೆ: ಗಾಂಧಿ ಶಾಂತಿ ಪ್ರತಿಷ್ಠಾನ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಬಾಪೂ ಸಭಾಂಗಣ, ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಳಿಗ್ಗೆ 10.30

ಪ್ರಲಕ್ಷ ಆಸ್ಪತ್ರೆ ಉದ್ಘಾಟನೆ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ನಿರ್ಮಲಾನಂದನಾಥ ಸ್ವಾಮೀಜಿ, ವಿನಯ್ ಗುರೂಜಿ, ಉದ್ಘಾಟನೆ: ಜಿ. ಪರಮೇಶ್ವರ, ರಾಮಲಿಂಗಾರೆಡ್ಡಿ, ಆರ್. ಅಶೋಕ್, ಎಂ.ಕೃಷ್ಣಪ್ಪ, ಸ್ಥಳ: ಪ್ರಲಕ್ಷ ಆಸ್ಪತ್ರೆ, ಉತ್ತರಹಳ್ಳಿ ಮುಖ್ಯರಸ್ತೆ, ಪದ್ಮನಾಭನಗರ, ಬೆಳಿಗ್ಗೆ 10.30

ಶಾಮನೂರು ಶಿವಶಂಕರಪ್ಪ ಅವರಿಗೆ ನುಡಿ ನಮನ: ಸಾನ್ನಿಧ್ಯ: ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಅಧ್ಯಕ್ಷತೆ: ಈಶ್ವರ ಖಂಡ್ರೆ, ಆಯೋಜನೆ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಸ್ಥಳ: ತರಳಬಾಳು ಕೇಂದ್ರ ಸಭಾಂಗಣ, 3ನೇ ಮುಖ್ಯರಸ್ತೆ, 2ನೇ ಬ್ಲಾಕ್, ಆರ್.ಟಿ.ನಗರ ಬೆಳಿಗ್ಗೆ 11

‘ಪರಮೇಶಿ ಪ್ರೇಮ ಪ್ರಸಂಗ’ ನಾಟಕ ಪ್ರದರ್ಶನ: ನಿರ್ದೇಶನ: ಶ್ರೀನಿವಾಸ ಪ್ರಭು, ತಂಡ: ರಂಗವಲ್ಲಿ ಮೈಸೂರು, ಸ್ಥಳ: ರಂಗಶಂಕರ, ಜೆ.ಪಿ.ನಗರ, ಸಂಜೆ 7.30

ಮೆಂಟೋರಾ ಐಎಎಸ್ ಉದ್ಘಾಟನೆ: ಪ್ರಿಯಕೃಷ್ಣ, ಅತಿಥಿ: ಎಂ.ಕೃಷ್ಣಪ್ಪ, ಉಪಸ್ಥಿತಿ: ಪ್ರದೀಪ್ ಕೃಷ್ಣ, ಧರ್ಮೇಂದ್ರ ಕುಮಾರ್, ಸ್ಥಳ: ಮೆಂಟೋರಾ ಐಎಎಸ್, ನಂ. 120, ಚಂದ್ರಾಲೇಔಟ್ 1ನೇ ಹಂತ, ಬೆಳಿಗ್ಗೆ 11

‘ಭಾವ ಝೇಂಕಾರ’ ಭಾವಗೀತೆಗಳ ಕಲರವ: ‘ಭಾವ ಗಾರುಡಿಗ’ ಪುರಸ್ಕಾರ: ಮೃತ್ಯುಂಜಯ ದೊಡ್ಡವಾಡ, ಪ್ರದಾನ: ಸಿ. ಸೋಮಶೇಖರ್, ‘ಭಾವಕೋಗಿಲೆ’ ಪುಸ್ತಕ ಬಿಡುಗಡೆ: ಬಿ.ಆರ್. ಲಕ್ಷ್ಮಣರಾವ್, ‘ಬಿಂಕಾ ಬಿಡ ಬಿನ್ನಾಣಗಿತ್ತಿ’ ದೃಶ್ಯಗೀತೆ ಬಿಡುಗಡೆ: ಶುಭಾ ಧನಂಜಯ್, ಆಯೋಜನೆ: ಸ್ನೇಹ ಬಳಗ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಶಾಲಾ ವಾರ್ಷಿಕೋತ್ಸವ: ಅತಿಥಿಗಳು: ಸಿ.ಎನ್. ಅಶ್ವತ್ಥನಾರಾಯಣ, ಗುರುರಾಜ ಕರಜಗಿ, ರವಿ ಕುಮಾರ್ ರಾಜು, ಸಂಗೀತಾ ಕಟ್ಟಿ, ಆಯೋಜನೆ ಹಾಗೂ ಸ್ಥಳ: ವಿದ್ಯಾ ಸಂಸ್ಕೃತಿ ಸ್ಕೂಲ್, ವೈಯಾಲಿಕಾವಲ್, ಸಂಜೆ 6

ಮಿನಿ ರಂಗಮಂದಿರದ ಶಿಲಾನ್ಯಾಸ ಹಾಗೂ ಭೂಮಿ ಪೂಜೆ: ಉದ್ಘಾಟನೆ: ಡಾ.ಸಿ.ಎನ್. ಮಂಜುನಾಥ್, ಮುನಿರತ್ನ, ಚಿತ್ತರಂಜನ್ ತ್ರಿಪಾಠಿ, ಉಪಸ್ಥಿತಿ: ಅರುಣ ಕುಮಾರ್ ಮಲ್ಲಿಕ್, ವೀಣಾ ಶರ್ಮ ಭೂಸನೂರಮಠ, ಆಯೋಜನೆ ಹಾಗೂ ಸ್ಥಳ: ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಪಹಲ್ಗಾಮ್ ದಾಳಿ ಬೆಂಬಲಿಸಿದವರ ವಿರುದ್ಧ ಏನು ಕ್ರಮ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಹಲ್ಗಾಮ್ ದಾಳಿ ನಡೆದಾಗ ಅದನ್ನು ಬೆಂಬಲಿಸಿ ಸಾಮಾಜಿಕ ಜಾಲತಾಣದಲ್ಲಿ ಸಾವಿರಾರು ಟ್ವೀಟ್‌ಗಳು ಹರಿದಾಡಿದ್ದವು. ಆಗ, ನೀವು ಯಾವ ಕ್ರಮ ಕೈಗೊಂಡಿದ್ದಿರಿ’ ಎಂದು ರಾಜ್ಯ ಸರ್ಕಾರವನ್ನು ಮೌಖಿಕವಾಗಿ ಪ್ರಶ್ನಿಸಿರುವ ಹೈಕೋರ್ಟ್, ಚಕ್ರವರ್ತಿ ಸೂಲಿಬೆಲೆ ವಿರುದ್ಧದ ಕೋಮು ದ್ವೇಷ ಆರೋಪದ ಪ್ರಕರಣವೊಂದಕ್ಕೆ ತಡೆ ನೀಡಿದೆ.

‘ನನ್ನ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಚಕ್ರವರ್ತಿ ಸೂಲಿಬೆಲೆ ಸಲ್ಲಿಸಿರುವ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ರಜಾಕಾಲೀನ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಸೂಲಿಬೆಲೆ ಪರ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ವಾದ ಆಲಿಸಿದ ನ್ಯಾಯಪೀಠ, ‘ಪಾಕಿಸ್ತಾನ್ ಜಿಂದಾಬಾದ್’ ಎಂದವರ ವಿರುದ್ಧದ ಪ್ರಕರಣವನ್ನೇ ವಜಾ ಮಾಡಲಾಗಿದೆ. ಈ ಪ್ರಕರಣದಲ್ಲಿ ಕೋಮು ದ್ವೇಷ ಏನಿದೆ ಎಂಬುದೇ ನನಗೆ ಅರ್ಥವಾಗುತ್ತಿಲ್ಲ’ ಎಂದು ಆಶ್ಚರ್ಯ ವ್ಯಕ್ತಪಡಿಸಿತು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ ಮುಂದಿನ ವಿಚಾರಣೆವರೆಗೂ ಪ್ರಕರಣಕ್ಕೆ ತಡೆ ನೀಡಿತು. ಪ್ರತಿವಾದಿ ರಾಜ್ಯ ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸಲು ಸೂಚಿಸಿ, ‘ಸರ್ಕಾರ ಮಧ್ಯಂತರ ತಡೆ ತೆರವು ಕೋರುವ ಸ್ವಾತಂತ್ರ್ಯ ಹೊಂದಿದೆ’ ಎಂದು ಆದೇಶಿಸಿತು.

भारतीय गुणवत्ता परिषद्
QUALITY COUNCIL® OF INDIA
QCI Creating an Ecosystem for Quality

Honouring the legacy of our beloved former Prime Minister, Bharat Ratna Late Shri Atal Bihari Vajpayee, aligned with the **Hon'ble Prime Minister Shri Narendra Modi**'s vision of Viksit Bharat 2047, and under the guidance of Shri Piyush Goyal, Hon'ble Minister of Commerce and Industry, on the eve of **Sushasan Divas**,

Quality Council of India is Raising the Benchmark for Growth

Introducing Next-Gen Reforms



QCI's Commitment

In the last few years, QCI has been trying to transform India's quality ecosystem, making accreditation faster, smarter, and more accessible, with reforms that have delivered:

Clean Air Priority
New accreditation scheme for calibration of air quality monitoring equipment

Digital Ease
NABL Portal revamp with **23,000+** test options and **2,500+** equipment types for smooth, hassle-free processing

Rewarding Excellence with Ease
Labs with **10+ years** of strong performance get simple desktop surveillance

ZED Made Faster, Digital
ZED Bronze Certification in **24 hours** and end-to-end online process for ZED Certification

Fast Recognition
48-hour recognition for Soil Health Card Labs and MELT Scheme Labs

Longer Accreditation for Labs
Labs now get **4-year** accreditation instead of **2 years**

Our Humble Attempts: Listening to Stakeholders, Driving Change

QCI's Bold Reforms for Viksit Bharat

Building on the progress of our quality journey, we now accelerate the trajectory, driving the next wave of transformation.

The Big Leap Forward

Powering the Quality Engine

Unveiling the Q Mark - *Desh ka Haq*
Know your lab, hospital, and MSME through the QR-coded Mark of Quality. Full Disclosure, No Fake Certificates

From Inspection to Trust
Less paper. Less time. Fewer inspections. Higher trust. A low-friction ecosystem

Expanding Assessor Pool across Boards and Divisions
Lowering entry barriers to bring young experts to reach the last mile

Quality Setu
A secure ticket-based system for time-bound grievance and feedback resolution

One-Stop Accreditation Platform
Launching a single, paperless modular platform to replace multiple accreditation portals

Industry & MSMEs

NDIE — National Division for Industry Excellence

Empowering India's Economic Backbone-Our 6 Crore⁺ MSMEs

QCI-Industry Partnership
QCI to mentor & support Tier-2 & Tier-3 suppliers to achieve ZED and Lean certification

Making Indian products ready for global standards
1,00,000 MSMEs and **SHGs (ODOP)** to be trained in quality, packaging and branding in 2026

Shop floor Best Practices Playbook for MSMEs
Empowering every small business to get accustomed to global quality practices, strengthening everyday shop floor performance

Reducing Fees for ZED and Lean Certification
Ensuring access affordability, quality and recognition to India's last mile entrepreneur

Industry & Labs

NABL — National Accreditation Board for Testing and Calibration Laboratories

Endeavouring to make India the Testing Capital of the World

Introducing Model Scope for Medical Testing Laboratories
Ensuring uniformity in accredited scope of medical laboratories

Technical Skilling for Laboratory Personnel
5,000 lab personnel to be trained in technical skills in 2026 to build a stronger, safer national testing ecosystem

Self-declaration for Authorized Signatories
Approval of proposed signatory for NABL assessor within **48 hours**

Allowing 48-hour Scope Extension
Removing long waits for laboratories to expand services-approval for similar product/method/test/analyte under existing scope

Zero Additional Fee
Eliminating additional fee for product-based accreditation when test parameters are already covered

Healthcare

NABH — National Accreditation Board for Hospitals and Healthcare Providers

Driving Patient Safety First, in Every Hospital, Every Pincode

Direct, trusted guidance through NABH's MITRA programme-no middlemen
Trained, verified mentors officially empanelled to guide hospitals, especially in smaller towns

Relaxed Occupancy Norm
Opening accreditation to hospitals at **20% occupancy**

Graded Penalties
Shifting from blanket bans to graded penalties with guidance and course correction

Gunvatta Pathshala
Role-based skilling for doctors, nurses, and technicians in patient safety and accreditation

Desktop Surveillance for Consistent Performers
AI-assisted form filling and desk-based monitoring to reduce on-site inspections for consistently performing hospitals

NABCB — National Accreditation Board for Certification Bodies

Ensuring Local Products Reach Global Markets

Introducing Accredited Certification for Indigenously Manufactured Products
Ensuring seamless acceptance of Indian Products across Global Supply Chain

Quality Passport for Indian Products & Services
Globally aligned NABCB accredited Certifications for Faster Market Access

Quality in New-Age Tech Areas
Fast track accreditation of Certification Bodies for Drones and Cybersecurity Sectors

As we soar towards our national vision, we remain firmly grounded in our purpose.

Scan to Know more

QCI BOARDS: NABCB, NABH, NABL, NABET, NBQP

QCI DIVISIONS: PADD (Project Analysis and Documentation Division), PPID (Project Planning & Implementation Division), NDIE, Strategy & Policy Division

QCI INITIATIVES

*This pictorial representation of map of India does not purport to be the political map of India and is not in conformity with the map of India as published by Survey of India

ಕುತೂಹಲಕ್ಕೆ ಪ್ರವೇಶಿಸಿ ಚಿರತೆ ಬೋನಿಗೆ ಬಿದ್ದ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ತಾಲ್ಲೂಕಿನ ಗಂಗವಾಡಿ ಗ್ರಾಮದಲ್ಲಿ ಚಿರತೆ ಸೆರೆ ಹಿಡಿಯಲು ಇರಿಸಿದ್ದ ಬೋನಿಗೆ ವ್ಯಕ್ತಿಯೊಬ್ಬರು ಸಿಲುಕಿ ಮೂರು ತಾಸು ಪರದಾಡಿದ ಘಟನೆ ಮಂಗಳವಾರ ನಡೆದಿದೆ.

ಗಂಗವಾಡಿ,ಆಸುಪಾಸಿನ ಗ್ರಾಮಗಳಲ್ಲಿ ಚಿರತೆ ಹಾವಳಿ ಹೆಚ್ಚಿದ್ದು, ಅರಣ್ಯ ಇಲಾಖೆಯು ಸ್ವಯಂಚಾಲಿತ ಲಾಕ್‌ಇದ್ದ ಬೋನು ಇರಿಸಿತ್ತು. ಕಿಟ್ಟಿ ಎಂಬವರು ಕುತೂಹಲಕ್ಕಾಗಿ ಪ್ರವೇಶಿಸಿದ್ದು, ಬೋನಿಗೆ ಸಿಕ್ಕಿಬಿದ್ದಿದ್ದಾರೆ. ನಿರ್ಜನ ಪ್ರದೇಶವಾಗಿದ್ದರಿಂದ ಕೂಗಿ ಕೊಂಡರೂ ತಕ್ಷಣಕ್ಕೆ ಸಹಾಯ ಸಿಕ್ಕಿಲ್ಲ. ಬಾಗಿಲು ತೆರೆಯಲು ನಡೆಸಿದ ಪ್ರಯತ್ನ ವಿಫಲವಾಗಿ ಮೂರು ತಾಸುಬಂಧಿಯಾಗಿದ್ದರು. ಅಕ್ಕಪಕ್ಕದ ಜಮೀನಿನ ರೈತರು ಬಂದು ಗಮನಿಸಿದ ಬಳಿಕ ಬೋನಿನಿಂದ ಅವರನ್ನು ಬಂಧಮುಕ್ತಗೊಳಿಸಲಾಯಿತು.

‘ಮತೀಯ ಶಕ್ತಿಗಳು ಅಪಾಯಕಾರಿ’

ಸಿಪಿಐ ಶತಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ಹನುಮಂತಯ್ಯ ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ಮತೀಯ ಶಕ್ತಿಗಳು ಪ್ರಬಲವಾಗಿ ಬೆಳೆದಿದ್ದು, ಜಾತ್ಯತೀತ ಪರಿಕಲ್ಪನೆಗೆ ಧಕ್ಕೆ ತರುವ ಪ್ರಯತ್ನ ನಿರಂತರವಾಗಿ ನಡೆಯುತ್ತಿದೆ. ಸಮಾನಮನಸ್ಕ ಪಕ್ಷಗಳ ಜತೆಯಲ್ಲಿ ಸಂಘಟನೆಗಳು ಒಗ್ಗಟ್ಟಾಗದೇ ಇದ್ದರೆ ದೇಶದ ಭವಿಷ್ಯಕ್ಕೆ ಧಕ್ಕೆಯಾಗಬಹುದು’ ಎಂದು ರಾಜ್ಯಸಭೆಯ ಮಾಜಿ ಸದಸ್ಯ ಎಲ್.ಹನುಮಂತಯ್ಯ ಆತಂಕ ವ್ಯಕ್ತಪಡಿಸಿದರು.

ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ನಗರದ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ‘ಸಿಪಿಐ ಶತಮಾನೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ‘ಕಾಂಗ್ರೆಸ್ ಮಾತ್ರವಲ್ಲದೇ ಕಮ್ಯುನಿಸ್ಟರು, ದಲಿತ, ರೈತ ಚಳವಳಿಗಳ ಸಂಗಾತಿಗಳು, ಪ್ರಾದೇಶಿಕ ಪಕ್ಷಗಳು ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಧ್ರುವೀಕರಣಕ್ಕೆ ಒತ್ತು ನೀಡಬೇಕು’ ಎಂದು ಸಲಹೆ ನೀಡಿದರು.

ಸಿಪಿಐ ರಾಷ್ಟ್ರೀಯ ಕಾರ್ಯದರ್ಶಿ ಪ್ರಕಾಶ್ ಬಾಬು ಮಾತನಾಡಿ, ‘ಬಿಜೆಪಿಯು ಅಧಿಕಾರ ಬಳಸಿಕೊಂಡು ಎಲ್ಲಾ ಕ್ಷೇತ್ರದಲ್ಲೂ ಲೂಟಿ ಹೊಡೆಯುತ್ತಿದೆ. ಬಿಜೆಪಿ ಆಸ್ತಿಯೇ ₹7000 ಕೋಟಿಯಷ್ಟಿದೆ. ಕಾಂಗ್ರೆಸ್ ಕೆಲವು ಕ್ಷೇತ್ರಗಳಲ್ಲಿ ಖಾಸಗೀಕರಣ ತಂದರೆ, ಬಿಜೆಪಿ ಅದನ್ನು ಮುಂದುವರಿಸಿದೆ. ಬಡವರ ಬಲ ಹೆಚ್ಚಿಸಿದ್ದ ನರೇಗಾ ಹೆಸರು, ನಿಯಮ ಬದಲಿಸಿ, ಅದರ ಆಶಯವನ್ನೇ ಹಾಳು ಮಾಡಿದೆ’ ಎಂದು ಟೀಕಿಸಿದರು.

ಸಿಪಿಎಂ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್ ಮಾತನಾಡಿ, ‘ಆರ್‌ಎಸ್‌ಎಸ್, ಡಿಜಿಟಲ್ ಮಾಧ್ಯಮವನ್ನು ಬಳಸಿಕೊಂಡು ಜನರಲ್ಲಿ ತನ್ನ ವಿಚಾರಗಳನ್ನು ಬಿತ್ತುತ್ತಿದೆ. ಹಿಂದಿನ ಬಿಜೆಪಿ ಸರ್ಕಾರ ಕರ್ನಾಟಕದಲ್ಲಿ ಜಾರಿಗೆ ತಂದ ಭೂ ಸುಧಾರಣಾ ಕಾಯ್ದೆ 2020ಕ್ಕೆ ತಿದ್ದುಪಡಿ ತರಲು ಸಿದ್ದರಾಮಯ್ಯ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಭೂಸ್ವಾಧೀನ ನೀತಿಯ ಮೂಲಕ ಜನರನ್ನು ಹೆದರಿಸಲಾಗುತ್ತಿದೆ’ ಎಂದರು.

ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಉಮಾ ಮಾತನಾಡಿ, ‘ರಾಜ್ಯದಲ್ಲಿ ಕರ್ನಾಟಕ ಪಬ್ಲಿಕ್ ಮ್ಯಾಗ್ನೆಟ್ ಶಾಲೆ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ. ಹೊಸ ಕೆಪಿಎಸ್ ಶಾಲೆ ಆರಂಭಿಸುವ ಬದಲು ಈಗಿರುವ ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯ ಒದಗಿಸಿ ಮಕ್ಕಳು ಬರುವ ಹಾಗೆ ಮಾಡಿ’ ಎಂದು ಹೇಳಿದರು.

ಸಿಪಿಐ ಮುಖಂಡ ಎಂ.ದೀಪಕ್ ಅಧ್ಯಕ್ಷತೆ ವಹಿಸಿದ್ದರು. ಸಿಪಿಐ(ಎಂಎಲ್) ರಾಜ್ಯ ಕಾರ್ಯದರ್ಶಿ ಕ್ಲಿಫ್ಟನ್ ಡಿ.ರೊಜಾರಿಯೊ, ಫಾರ್ವಡ್ ಬ್ಲಾಕ್ ರಾಜ್ಯ ಕಾರ್ಯದರ್ಶಿ ಜಿ.ಆರ್. ಶಿವಶಂಕರ, ಮುಖಂಡ ಪಿ.ವಿ.ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.



ಬೆಂಗಳೂರಿನಲ್ಲಿ ಮಂಗಳವಾರ ನಡೆದ ಸಿಪಿಐ ಶತಮಾನೋತ್ಸವದ ಸಮಾರೋಪ ಸಮಾರಂಭದಲ್ಲಿ ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಉಮಾ, ಸಿಪಿಎಂ ರಾಜ್ಯ ಕಾರ್ಯದರ್ಶಿ ಕೆ. ಪ್ರಕಾಶ್, ಸಿಪಿಐ ರಾಷ್ಟ್ರೀಯ ಕಾರ್ಯದರ್ಶಿ ಪ್ರಕಾಶ್ ಬಾಬು, ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ ಸಿಪಿಐ ಮುಖಂಡ ದೀಪಕ್ ಎಂ., ಸಿಪಿಐ ಮುಖಂಡ ಸಿದ್ಧನಗೌಡ ಪಾಟೀಲ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಸಮತಾ ರಾಜ್ಯದ ಕನಸುಗಳೊಂದಿಗೆ ಪಕ್ಷದ ಶತಮಾನೋತ್ಸವ ಆರಂಭಗೊಂಡಿತ್ತು. ಇದರ ಭಾಗವಾಗಿ ಒಂದು ತಿಂಗಳು ಕರ್ನಾಟಕದಲ್ಲಿ ಜಾಗೃತಿ ಮೂಡಿಸಲಾಗಿದೆ

ಸಾತಿ ಸುಂದರೇಶ್ ಸಿಪಿಐ ರಾಜ್ಯಕಾರ್ಯದರ್ಶಿ

ಕರ್ನಾಟಕ ರಾಜಕಾರಣದ ಮುಂದಿನ ಹೆಜ್ಜೆಗಳ ಕುರಿತು ಕಮ್ಯುನಿಸ್ಟ್‌ನ ನಾಲ್ಕು ವಿಭಿನ್ನ ಪಕ್ಷಗಳು ಶೀಘ್ರವೇ ಒಂದೆಡೆ ಕುಳಿತು ಚರ್ಚಿಸಿ ಮುಂದಿನ ರೂಪುರೇಷೆ ರೂಪಿಸಿಕೊಳ್ಳಬೇಕು

ಸಿದ್ದನಗೌಡ ಪಾಟೀಲ, ಸಿಪಿಐ ಮುಖಂಡ

ಸುದ್ದಿ 2 ನಿಮಿಷ

‘ಭಾರತಕ್ಕೆ ಯಾವಾಗ ಬರುತ್ತೀರಿ’

ಮುಂಬೈ (ಪಿಟಿಐ): ‘ತಾವು ಭಾರತಕ್ಕೆ ಯಾವಾಗ ಬರಬೇಕು ಎಂದುಕೊಂಡಿದ್ದೀರಿ’ ಎಂದು ವಿದೇಶದಲ್ಲಿ ತಲೆಮರೆಸಿಕೊಂಡಿರುವ ಉದ್ಯಮಿ ವಿಜಯ್ ಮಲ್ಯ ಅವರಿಗೆ ಬಾಂಬೆ ಹೈಕೋರ್ಟ್ ಮಂಗಳವಾರ ಪ್ರಶ್ನಿಸಿದೆ. ಜತೆಗೆ ಮಲ್ಯ ಖುದ್ದಾಗಿ ನ್ಯಾಯಾಲಯಕ್ಕೆ ಹಾಜರಾಗುವವರೆಗೂ ಅವರು ದಾಖಲಿಸಿರುವ ಅರ್ಜಿಯ ವಿಚಾರಣೆ ನಡೆಸುವುದಿಲ್ಲ ಎಂದೂ ಹೇಳಿದೆ.

2016ರಿಂದಲೂ ಬ್ರಿಟನ್‌ನಲ್ಲಿ ತಲೆಮರೆಸಿಕೊಂಡಿರುವ ಮಲ್ಯ, ತನ್ನನ್ನು ಪರಾರಿಯಾಗಿರುವ ಆರ್ಥಿಕ ಅಪರಾಧಿ ಎಂದು ಗುರುತಿಸಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಹಾಗೂ ದೇಶಭ್ರಷ್ಟ ಆರ್ಥಿಕ ಅಪರಾಧಗಳ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಒಟ್ಟು ಎರಡು ಅರ್ಜಿಗಳನ್ನು ಹೈಕೋರ್ಟ್‌ನಲ್ಲಿ ದಾಖಲಿಸಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಶ್ರೀ ಚಂದ್ರಶೇಖರ್ ಹಾಗೂ ನ್ಯಾಯಮೂರ್ತಿ ಗೌತಮ್ ಎ. ಅಂಖಡ್ ಅವರ ನ್ಯಾಯಪೀಠವು ಅರ್ಜಿಯ ವಿಚಾರಣೆ ನಡೆಸಲು ತಿರಸ್ಕರಿಸಿ, ಈ ವಿಚಾರವನ್ನು ಸ್ಪಷ್ಟಪಡಿಸಿದೆ.

ಮಲ್ಯ ಪರ ವಕೀಲರು ಸಲ್ಲಿಸಿರುವ ಅರ್ಜಿಗೆ ಜಾರಿ ನಿರ್ದೇಶನಾಲಯದ ಪರ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರೂ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ದೇಶದಿಂದ ಪರಾರಿಯಾಗಿರುವ ವ್ಯಕ್ತಿಯು ನ್ಯಾಯಾಲಯಗಳಿಗೆ ಹಾಜರಾಗದೆಯೇ ಕಾಯ್ದೆಯೊಂದರ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಲು ಅನುಮತಿಸಬಾರದು’ ಎಂದೂ ವಾದ ಮಂಡಿಸಿದ್ದಾರೆ. ಜತೆಗೆ ಮಲ್ಯ ಹಸ್ತಾಂತರಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳು ಅಂತಿಮ ಹಂತದಲ್ಲಿದೆ ಎಂದೂ ಮೆಹ್ತಾ ನ್ಯಾಯಪೀಠಕ್ಕೆ ತಿಳಿಸಿದ್ದಾರೆ.

ಹೀಗಾಗಿ ನ್ಯಾಯಪೀಠವು, ಮಲ್ಯ ಸಲ್ಲಿಸಿರುವ ಎರಡೂ ಅರ್ಜಿಗಳನ್ನು ಒಂದೇ ಬಾರಿ ವಿಚಾರಣೆ ನಡೆಸಲು ಸಾಧ್ಯವಿಲ್ಲ. ಯಾವ ಅರ್ಜಿಯನ್ನು ವಿಚಾರಣೆ ನಡೆಸಬೇಕು? ಯಾವುದನ್ನು ಹಿಂಪಡೆಯುತ್ತಾರೆ ಎಂಬುದನ್ನು ಸ್ಪಷ್ಟಪಡಿಸಿ ಎಂದೂ ಮಲ್ಯ ಪರ ವಕೀಲರಿಗೆ ಕೇಳಿದೆ.



ವೀರಲೋಕ ಪುಸ್ತಕ ಸಂತೆ ಬೀದರ್‌ನಲ್ಲಿ

ಬೆಂಗಳೂರು: ಬೀದರ್ ಜಿಲ್ಲೆಯ ಭಾಲ್ಕಿ ಹಿರೇಮಠದಲ್ಲಿ 2026ರ ಜ.24ರಿಂದ ಮೂರು ದಿನಗಳ ವೀರಲೋಕ ಪುಸ್ತಕ ಸಂತೆ ನಡೆಯಲಿದೆ.

ಭಾಲ್ಕಿಮಠದ ಗುರುಪಟ್ಟದ್ದೇವರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ ಚನಶೆಟ್ಟಿ ಮತ್ತು ಸಂಚಾಲಕ ಗುರುನಾಥ ರಾಜಗೀರ ನೇತೃತ್ವದಲ್ಲಿ ಪುಸ್ತಕ ಸಂತೆ ನಡೆಯಲಿದೆ. 50 ಮಳಿಗೆಗಳಿಗೆ ಮಾತ್ರ ಅವಕಾಶ ನೀಡಲಾಗಿದೆ. ಈಗಾಗಲೇ ಮಳಿಗೆಯ ನೋಂದಣಿ ಪ್ರಕ್ರಿಯೆ ಆರಂಭವಾಗಿದೆ.ಬೆಂಗಳೂರಿನಿಂದ 100 ಲೇಖಕರನ್ನು ಬೀದರ್‌ನ ಪುಸ್ತಕ ಸಂತೆಗೆ ಆಹ್ವಾನಿಸಲಾಗುತ್ತಿದೆ.

ಮೇಳದಲ್ಲಿ ಭಾಗಿಯಾಗುವ ಪ್ರಕಾಶಕರಿಗೆ ಆಯೋಜಕರ ವತಿಯಿಂದಲೇ ಮೂರು ದಿನದ ಊಟೋಪಚಾರ ಮತ್ತು ವಸತಿ ಸೌಕರ್ಯ ಕಲ್ಪಿಸಲಾಗುತ್ತದೆ. ಆಸಕ್ತ ಲೇಖಕರು ಹಾಗೂ ಪ್ರಕಾಶಕರು ನೋಂದಣಿಗೆ 70221 22121 ಸಂಪರ್ಕಿಸಬಹುದು ಎಂದು ವೀರಲೋಕ ಸಂಸ್ಥಾಪಕ ವೀರಕಪುತ್ರ ಶ್ರೀನಿವಾಸ ತಿಳಿಸಿದ್ದಾರೆ.

ಇಂದು ಶಿವಶಂಕರಪ್ಪಗೆ ನುಡಿನಮನ

ಬೆಂಗಳೂರು: ಇದೇ 24 ರಂದು ಶಾಮನೂರು ಶಿವಶಂಕರಪ್ಪ ಅವರಿಗೆ ಅಖಿಲ ಭಾರತ ವೀರಶೈವ ಮಹಾಸಭಾ ನುಡಿ ನಮನ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಅರಣ್ಯ ಸಚಿವ ಈಶ್ವರಖಂಡ್ರೆ ತಿಳಿಸಿದರು.

ಬೆಂಗಳೂರಿನ ಆರ್.ಟಿ.ನಗರದಲ್ಲಿರುವ ತರಳಬಾಳು ಕೇಂದ್ರದಲ್ಲಿ ಅಂದು ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ನಡೆಯಲಿದ್ದು, ಸಿರಿಗೆರೆ ತರಳಬಾಳು ಬೃಹನ್ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರಿನ ಸಿದ್ದಗಂಗಾಮಠದ ಸಿದ್ದಲಿಂಗ ಸ್ವಾಮೀಜಿ ಅವರು ಭಾಗವಹಿಸಲಿದ್ದಾರೆ.

‘ವಿಬಿ ಜಿ ರಾಮ್ ಜಿ’ ವಿರುದ್ಧ ಹೋರಾಟ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ನರೇಗಾ’ಕ್ಕೆ ಪರ್ಯಾಯವಾಗಿ ರೂಪಿಸಿರುವ ‘ವಿಬಿ–ಜಿ ರಾಮ್ ಜಿ’ ಮಸೂದೆಗೆ ವಿರೋಧ ವ್ಯಕ್ತಪಡಿಸಿರುವ ಕರ್ನಾಟಕದ ಕಾಂಗ್ರೆಸ್ ಸರ್ಕಾರ, ಕೇಂದ್ರದ ವಿರುದ್ಧದ ತಳಮಟ್ಟದಲ್ಲಿ ಹೋರಾಟ ರೂಪಿಸುವ ಬಗ್ಗೆ ಗ್ರಾಮೀಣಾಭಿವೃದ್ಧಿ ತಜ್ಞರೊಂದಿಗೆ ಸಮಾಲೋಚನೆ ನಡೆಸಿದೆ.

ಹೆಸರು ಬದಲಿಸಿರುವ ನರೇಗಾ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನದ ಅನುಪಾತವನ್ನು ಶೇಕಡಾ 90:10 ಬದಲು 60:40 ಮಾಡಿರುವುದರಿಂದ ರಾಜ್ಯ ಸರ್ಕಾರದ ಮೇಲೆ ಆಗುವ ಆರ್ಥಿಕ ಪ್ರತಿಕೂಲ ಪರಿಣಾಮಗಳ ಬಗ್ಗೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ತಜ್ಞರ ಜತೆಗೆ ಕರ್ನಾಟಕ ಭವನದಲ್ಲಿ ಮಂಗಳವಾರ ಸಂಜೆ ಸಭೆ ನಡೆಸಿದರು. ಸಂಸದರಾದ ಶ್ರೇಯಸ್ ಪಟೇಲ್, ಜಿ. ಕುಮಾರ ನಾಯಕ ಮತ್ತಿತರರು ಭಾಗವಹಿಸಿದ್ದರು.

ನರೇಗಾ ಕಾಯ್ದೆಯನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿದ ನಂತರ ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

‘ನರೇಗಾ ಯೋಜನೆಯಲ್ಲೇ ಕೇಂದ್ರ ಸರ್ಕಾರ ಅರ್ಧದಷ್ಟು ಮೊತ್ತ ಭರಿಸುವಾಗಲೇ ಏದುಸಿರು ಬಿಡುತ್ತಿತ್ತು. ಹೊಸ ಕಾಯ್ದೆಯಡಿ ಇನ್ನಷ್ಟು ಅನುದಾನ ಕಡಿತ ಆಗುವ ಸಾಧ್ಯತೆ ಇದೆ. ರಾಜ್ಯ ಸರ್ಕಾರಗಳ ಮೇಲಿನ ಹೊರೆ ಇನ್ನಷ್ಟು ಹೆಚ್ಚಲಿದೆ. ಗ್ರಾಮ ವಿರೋಧಿಯಾಗಿರುವ ಈ ಮಸೂದೆ ವಿರುದ್ಧ ತಳಮಟ್ಟದಲ್ಲಿ ಹೋರಾಟ ನಡೆಸಬೇಕು’ ಎಂದು ತಜ್ಞರು ಸಲಹೆ ನೀಡಿದರು.

ಪ್ರಿಯಾಂಕ್ ಖರ್ಗೆ ಮಾತನಾಡಿ, ‘ಹೊಸ ಮಸೂದೆಯು ಪಂಚಾಯತ್ ರಾಜ್‌ಗೆ ಮಾರಕ. ಕೇಂದ್ರ ಸರ್ಕಾರ ತನ್ನ ಜವಾಬ್ದಾರಿಯಿಂದ ನುಣುಚಿ ಕೊಳ್ಳುತ್ತಿದೆ’ ಎಂದು ಕಿಡಿಕಾರಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ಈ ಯೋಜನೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪಾಲಿನ ಅನುಪಾತವನ್ನು 60:40ಕ್ಕೆ ಬದಲಾಯಿಸಲಾಗಿದೆ. ಬಿಜೆಪಿ ಆಡಳಿತವಿರುವ ರಾಜ್ಯ ಸರ್ಕಾರಗಳು ಸೇರಿದಂತೆ ಯಾವುದೇ ರಾಜ್ಯ ಸರ್ಕಾರಗಳು ಇದನ್ನು ಭರಿಸುವುದಿಲ್ಲ. ಇದರಿಂದಾಗಿ ಭವಿಷ್ಯದಲ್ಲಿ ಈ ಯೋಜನೆ ಸಂಪೂರ್ಣ ವಿಫಲವಾಗಲಿದೆ’ ಎಂದು ಅಭಿಪ್ರಾಯಪಟ್ಟರು.

ಸಹಕಾರಿ ಸಂಘದ ಸಿಇಒ ₹9.89 ಕೋಟಿ ಆಸ್ತಿಯ ಒಡೆಯ

ಲೋಕಾ ದಾಳಿ: ₹19 ಕೋಟಿ ಆಸ್ತಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಕೆ ಪ್ರಕರಣದಲ್ಲಿ ರಾಜ್ಯ ಸರ್ಕಾರದ ವಿವಿಧ ಅಧಿಕಾರಿಗಳ ಮನೆಗಳ ಮೇಲೆ ದಾಳಿ ನಡೆಸಿದ್ದ ಲೋಕಾಯುಕ್ತ ಪೊಲೀಸರು, ₹19.20 ಕೋಟಿ ಮೌಲ್ಯದ ಆಸ್ತಿ ಪತ್ತೆ ಮಾಡಿದ್ದಾರೆ. ಈ ಪೈಕಿ ಸಹಕಾರಿ ಸಂಘವೊಂದರ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಅವರ ಆಸ್ತಿ ಮೌಲ್ಯವೇ ₹9.89 ಕೋಟಿಯಷ್ಟಾಗುತ್ತದೆ.

ವಿವಿಧ ಇಲಾಖೆಗಳ ನಾಲ್ವರು ಅಧಿಕಾರಿಗಳ ವಿರುದ್ಧ ದಾಖಲಾಗಿದ್ದ ಪ್ರಕರಣಗಳಲ್ಲಿ ಲೋಕಾಯುಕ್ತ ಪೊಲೀಸರು ಉತ್ತರ ಕನ್ನಡ, ಬಾಗಲಕೋಟೆ, ವಿಜಯಪುರ ಮತ್ತು ರಾಯಚೂರು ಜಿಲ್ಲೆಯ 17 ಸ್ಥಳಗಳಲ್ಲಿ ಮಂಗಳವಾರ ಏಕಕಾಲಕ್ಕೆ ದಾಳಿ ನಡೆಸಿದ್ದರು.

ಉತ್ತರ ಕನ್ನಡಜಿಲ್ಲೆಯ ಸಿದ್ದಾಪುರ ಕೋಲ್‌ಸಿರ್ಸಿ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಾರುತಿ ಯಶ್ವಂತ್ ಮಾಳ್ವಿ ಅವರಿಗೆ ಸೇರಿದ ನಾಲ್ಕು ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದರು.

ಈ ವೇಳೆ ₹9.17 ಕೋಟಿ ಮೌಲ್ಯದ 4 ವಾಸದ ಮನೆಗಳು, ಏಳು ನಿವೇಶನಗಳು ಮತ್ತು ಒಂದು ವಾಣಿಜ್ಯ ಸಂಕೀರ್ಣ, ₹2.02 ಲಕ್ಷ ನಗದು, ₹8.22 ಲಕ್ಷ ಮೌಲ್ಯದ ಚಿನ್ನಾಭರಣ ಮತ್ತು ₹62 ಲಕ್ಷ ಮೌಲ್ಯದ ವಾಹನಗಳು ಪತ್ತೆಯಾಗಿವೆ. ಈ ಎಲ್ಲವುಗಳ ಆಸ್ತಿ ಮೌಲ್ಯವೇ ₹9.89 ಕೋಟಿಯಷ್ಟಾಗುತ್ತದೆ. ಆರೋಪಿ ಅಧಿಕಾರಿ ಮತ್ತು ಅವರ ಕುಟುಂಬದವರಿಗೆ ಸೇರಿದ ಬ್ಯಾಂಕ್ ಲಾಕರ್ ಮತ್ತು ಖಾತೆಗಳ ಪರಿಶೀಲನೆ ನಡೆಯುತ್ತಿದೆ ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.


ಮಾರುತಿ ಯಶವಂತ ಮಾಳ್ವಿ

ಉಳಿದ ಮೂವರು ಅಧಿಕಾರಿಗಳ ಒಟ್ಟು ಆಸ್ತಿ ಮೌಲ್ಯ ₹9.31 ಕೋಟಿ-ಯಷ್ಟಾಗುತ್ತದೆ. ರಾಯಚೂರಿನ ಸಿಂಧನೂರು ವಿಭಾಗದ ಗ್ರಾಮೀಣ ಕುಡಿಯುವ ನೀರು ಮತ್ತು ಒಳಚರಂಡಿ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಡಿ.ವಿಜಯಲಕ್ಷ್ಮೀ ಅವರಿಗೆ ಸೇರಿದ 73 ಎಕರೆ 31 ಗುಂಟೆ ಕೃಷಿ ಜಮೀನು ಪತ್ತೆಯಾಗಿದೆ. ಈಚಿನ ವರ್ಷಗಳಲ್ಲಿ ಸರ್ಕಾರಿ ಅಧಿಕಾರಿಯೊಬ್ಬರ ಬಳಿ ಪತ್ತೆಯಾದ ಅತ್ಯಂತ ದೊಡ್ಡ ಪ್ರಮಾಣದ ಕೃಷಿ ಜಮೀನು ಇದು.

ಅಪಾರ ಆಸ್ತಿ...

₹19.20 ಕೋಟಿ ದಾಳಿಯ ವೇಳೆ ಪತ್ತೆಯಾದ ಎಲ್ಲ ಅಧಿಕಾರಿಗಳ ಆಸ್ತಿಯ ಒಟ್ಟು ಮೌಲ್ಯ	₹16.33 ಕೋಟಿ ಸ್ಥಿರಾಸ್ತಿಗಳ ಮೌಲ್ಯ

₹19.05 ಲಕ್ಷ ನಗದು	₹1.37 ಕೋಟಿ ಚಿನ್ನಾಭರಣ	₹1.01 ಕೋಟಿ ವಾಹನಗಳು	₹29.61 ಲಕ್ಷ ಗೃಹೋಪಯೋಗಿ ವಸ್ತುಗಳು

ಯಾರ ಬಳಿ ಎಷ್ಟು ಆಸ್ತಿ...

ಶ್ಯಾಮಸುಂದರ್ ಮಾರುತಿ ಕಾಂಬ್ಳೆ, ಸಹಾಯಕ ಕಾರ್ಯದರ್ಶಿ, ಬಾಗಲಕೋಟೆ ಜಿಲ್ಲಾ ಪಂಚಾಯತ್	₹1.75 ಕೋಟಿ ಮೌಲ್ಯದ 15 ನಿವೇಶನ, 3 ಮನೆ	₹28.83 ಲಕ್ಷ ಮೌಲ್ಯದ ನಗದು, ಚಿನ್ನಾಭರಣ ಮತ್ತು ವಾಹನಗಳು
₹2.04 ಕೋಟಿ ಒಟ್ಟು ಮೌಲ್ಯ		
ಮಲ್ಲಪ್ಪ ಹನಮಂತಪ್ಪ ಯರಜರಿ, ಸಹಾಯಕ ನಿರ್ದೇಶಕ, ಕೃಷಿ ಇಲಾಖೆ, ಬಸವನ ಬಾಗೇವಾಡಿ,ವಿಜಯಪುರ	₹1.71 ಕೋಟಿ ಮೌಲ್ಯದ 3 ನಿವೇಶನ, 2 ಮನೆ, 20 ಎಕರೆ 3 ಗುಂಟೆ ಕೃಷಿ ಜಮೀನು	
₹1.45 ಕೋಟಿ ಮೌಲ್ಯದ ಚಿನ್ನಾಭರಣ, ವಾಹನಗಳು, ಉಳಿತಾಯ ಠೇವಣಿಗಳು ಮತ್ತು ಗೃಹೋಪಯೋಗಿ ವಸ್ತು	₹3.17 ಕೋಟಿ ಒಟ್ಟು ಮೌಲ್ಯ	
ಡಿ.ವಿಜಯಲಕ್ಷ್ಮೀ, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಗ್ರಾಮೀಣ ಕುಡಿಯುವ ನೀರು, ಒಳಚರಂಡಿ ಇಲಾಖೆ, ಸಿಂಧನೂರು, ರಾಯಚೂರು	₹3.68 ಕೋಟಿ ಮೌಲ್ಯದ 73 ಎಕರೆ 31 ಗುಂಟೆ ಜಮೀನು, 12 ನಿವೇಶನ, 2 ಮನೆ	
₹40.82 ಲಕ್ಷ ಮೌಲ್ಯದ ಚಿನ್ನಾಭರಣ, ವಾಹನಗಳು ಮತ್ತು ಉಳಿತಾಯ ಠೇವಣಿ	₹4.09 ಕೋಟಿ ಒಟ್ಟು ಮೌಲ್ಯ	

30 ಕಲಾವಿದರಿಗೆ ಜಾನಪದ ಅಕಾಡೆಮಿ ಪ್ರಶಸ್ತಿ; ದಿನಾಂಕ ಸದ್ಯದಲ್ಲಿ ಘೋಷಣೆ

ಚಿಕ್ಕಣ್ಣ, ಪೋತೆಗೆ ‘ಜಾನಪದ ತಜ್ಞ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಜಾನಪದ ಅಕಾಡೆಮಿಯು 2025ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರಕಟಿಸಿದ್ದು, ಜಾನಪದ ವಿದ್ವಾಂಸರಾದ ಚಿಕ್ಕಣ್ಣ ಯಣ್ಣೆಕಟ್ಟೆ ಹಾಗೂ ಎಚ್.ಟಿ.ಪೋತೆ ಅವರು ‘ಜಾನಪದ ತಜ್ಞ ಪ್ರಶಸ್ತಿ’ಗೆ ಆಯ್ಕೆಯಾಗಿದ್ದಾರೆ.

ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಹಾಗೂ ರಿಜಿಸ್ಟ್ರಾರ್ ಎನ್. ನಮ್ರತಾ ಅವರು ಪ್ರಶಸ್ತಿಗೆ ಆಯ್ಕೆಯಾದವರ ಪಟ್ಟಿಯನ್ನು ಮಂಗಳವಾರ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಮಾಡಿದರು.

‘ಜಾನಪದ ತಜ್ಞ ಪ್ರಶಸ್ತಿ’ಯು ತಲಾ ₹50 ಸಾವಿರ ನಗದು ಒಳಗೊಂಡಿದೆ. ವಾರ್ಷಿಕ ಗೌರವ ಪ್ರಶಸ್ತಿಗೆ 31 ಜಿಲ್ಲೆಗಳಿಂದ 30 ಕಲಾವಿದರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ತಲಾ ₹25 ಸಾವಿರ ನಗದು ಒಳಗೊಂಡಿದೆ.

ಗೌರವ ಪ್ರಶಸ್ತಿ: ಬೆಂಗಳೂರಿನ ಸಿದ್ದರಾಜು (ನೀಲಗಾರರ ಪದ ಮತ್ತು ತಂಬೂರಿ ಪದ), ಬೆಂಗಳೂರು ಗ್ರಾಮಾಂತರದ ಬಚ್ಚಮ್ಮ (ಸೋಬಾನೆ ಪದ, ತತ್ವಪದ, ಸಂಪ್ರದಾಯ ಪದ), ರಾಮನಗರದ ಬಿ. ಸಿದ್ದರಾಜಯ್ಯ (ಜಾನಪದ ಗಾಯನ), ಕೋಲಾರದ ಸೀತಮ್ಮ (ತತ್ವಪದ), ಚಿಕ್ಕಬಳ್ಳಾಪುರದ ಕೆ.ಎಂ. ನಾರಾಯಣ ಸ್ವಾಮಿ (ಕೀಲು ಕುದುರೆ), ತುಮಕೂರಿನ ರೇವಣ್ಣ (ಅಲಗು ಕುಣಿತ), ದಾವಣಗೆರೆಯ ಜಿ. ಪರಮೇಶ್ವರಪ್ಪ ಕತ್ತಿಗೆ (ತತ್ವಪದ), ಚಿತ್ರದುರ್ಗದ ಜಿ.ಎನ್. ವಿರೂಪಾಕ್ಷಪ್ಪ (ಜಾನಪದ ಸಂಗೀತ), ಶಿವಮೊಗ್ಗದ ಕೆ.ಎಸ್. ಲಿಂಗಪ್ಪ (ಅಂಟಿಕೆ ಪಂಟಿಕೆ), ಮೈಸೂರಿನ ಚನ್ನಾಜಮ್ಮ (ಸೋಬಾನೆ ಪದ ಮತ್ತು ಜಾನಪದ ಗಾಯನ)

ಮಂಡ್ಯದ ಹೊನ್ನಯ್ಯ (ಕೋಲಾಟ), ಹಾಸನದ ಯೋಗೇಂದ್ರ ದುದ್ದ (ಗೀಗೀ ಪದ, ಲಾವಣಿ, ತತ್ವಪದ ಮತ್ತು ಭಜನೆ), ಚಿಕ್ಕಮಗಳೂರಿನ ಎಚ್.ಎಂ. ರವಿ (ವೀರಗಾಸೆ), ಚಾಮರಾಜ ನಗರದ ಬಸವರಾಜು ಯರಕನಗದ್ದೆ (ಗೊರುಕನ ನೃತ್ಯ), ದಕ್ಷಿಣ ಕನ್ನಡದ ಸುಮತಿ ಕೊರಗ (ಕೊರಗರ ಡೋಲು), ಉಡುಪಿಯ ಗುಲಾಬಿ ಗೌಡ್ತಿ (ನಾಟಿ ವೈದ್ಯ), ಕೊಡಗಿನ ಅಮ್ಮಣಿ (ಸೂಲಗಿತ್ತಿ, ಕುಡಿಯ ಜನಾಂಗದ ಹಾಡುಗಾರಿಕೆ), ಬೆಳಗಾವಿಯ ಭೀಮಪ್ಪ ಸಿದ್ಧಪ್ಪ ಮುತ್ನಾಳ್ (ಪುರವಂತಿಕೆ), ಧಾರ ವಾಡದ ಪ್ರಕಾಶ ಮಲ್ಲಿಗವಾಡ (ಜಾನಪದ ನೃತ್ಯ), ವಿಜಯಪುರದ ಜ್ಯೋತಿರ್ಲಿಂಗ ಹೊನಕಟ್ಟಿ (ಜಾನಪದ ಗಾಯನ)

ಬಾಗಲಕೋಟೆಯ ಚಂದ್ರಲಿಂಗಪ್ಪ ನಿಂಗಪ್ಪ ಬಸರಕೋಡ (ಪುರವಂತಿಕೆ), ಉತ್ತರ ಕನ್ನಡದ ಗೌರಿ ನಾಗಪ್ಪ ನಾಯ್ಕ (ಸುಗ್ಗಿ ಹಾಡುಗಳು, ಜಾನಪದ ಕಥೆ, ಸಂಪ್ರದಾಯದ ಪದಗಳು), ಹಾವೇರಿಯ ಭಿಕ್ಷಾಪತಿ ಮೋತಿ (ಹಗಲುವೇಷ), ಗದಗದ ಕಾಶೀಮಸಾಬ ಹುಸೇನಸಾಬ (ಹೆಜ್ಜೆ ಮೇಳ), ಕಲಬುರಗಿಯ ಭಾಗಪ್ಪ (ತತ್ವಪದ), ಬೀದರ್‌ನ ಇಂದ್ರಮ್ಮ (ಮೊಹರಂ ಪದ), ರಾಯಚೂರಿನ ಯಂಕನಗೌಡ (ತತ್ವಪದ), ಕೊಪ್ಪಳದ ರಾಮಣ್ಣ (ಹಗಲು ವೇಷ), ವಿಜಯನಗರದ ಕಿಂದ್ರಿ ಲಕ್ಷ್ಮೀಪತಿ (ಸುಡುಗಾಡು ಸಿದ್ದರು) ಹಾಗೂ ಯಾದಗಿರಿಯ ಹಣಮಂತ (ತತ್ವಪದ).

ಪ್ರಶಸ್ತಿ ಪ್ರದಾನ ಸಮಾರಂಭದ ದಿನಾಂಕ ಹಾಗೂ ಸ್ಥಳವನ್ನು ಮುಂದಿನ ದಿನಗಳಲ್ಲಿ ನಿಗದಿಪಡಿಸಲಾಗುವುದು ಎಂದು ಗೊಲ್ಲಹಳ್ಳಿ ಶಿವಪ್ರಸಾದ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅಕಾಡೆಮಿ ಸದಸ್ಯರಾದ ಸಿ.ಎನ್. ಮಂಜೇಶ್ ಚೆನ್ನಾಪುರ, ಹುಲಿಕುಂಟೆ ಮೂರ್ತಿ, ಕೆಂಪಮ್ಮ ಎಂ., ವಿಜಯಕುಮಾರ ಸೋನಾರೆ, ಮಲ್ಲಿಕಾರ್ಜುನ ಕಲಮರಹಳ್ಳಿ ಹಾಗೂ ಮೆಹಬೂಬ್ ಕಿಲ್ಲೇದಾರ ಉಪಸ್ಥಿತರಿದ್ದರು.


ಎಚ್.ಟಿ.ಪೋತೆ


ಚಿಕ್ಕಣ್ಣ

ಇಬ್ಬರಿಗೆ ಪುಸ್ತಕ ಬಹುಮಾನ

ಜಾನಪದ ಅಕಾಡೆಮಿಯು 2024ನೇ ಸಾಲಿನ ಪುಸ್ತಕ ಬಹುಮಾನವನ್ನೂ ಘೋಷಿಸಿದೆ. ಬೆಂಗಳೂರಿನ ವೀರಾಸಾಬಿಹಳ್ಳಿ ಶಿವಣ್ಣ ಅವರ ‘ಕಾಡುಗೊಲ್ಲರ ಸಂಸ್ಕೃತಿ ಮತ್ತು ಕಾವ್ಯಗಳು’ ವಿಚಾರ ವಿಮರ್ಶಾ ಕೃತಿ ಹಾಗೂ ಕೂಡ್ಲಗಿಯ ಇಮಾಮ್ ಸಾಹೇಬ್ ಹಡಗಲಿ ಅವರ ‘ಕನಕಗಿರಿ ಸೀಮೆಯ ಸ್ಥಳನಾಮಗಳು’ ಸಂಶೋಧನಾ ಕೃತಿ ಪುಸ್ತಕ ಬಹುಮಾನಕ್ಕೆ ಆಯ್ಕೆಯಾಗಿದೆ. ಈ ಬಹುಮಾನವು ತಲಾ ₹25 ಸಾವಿರ ನಗದು ಒಳಗೊಂಡಿದೆ.

ಪ್ರಶಸ್ತಿಗೆ ಜಾನಪದದ ವಿವಿಧ ಪ್ರಕಾರದಲ್ಲಿ ಮೂಲ ಗಾಯಕರನ್ನು ಗುರುತಿಸಲಾಗಿದೆ. ಮುಂದಿನ ದಿನಗಳಲ್ಲಿ ನವ್ಯ ಗಾಯಕರನ್ನೂ ಗುರುತಿಸಿ, ಪ್ರೋತ್ಸಾಹಿಸಲಾಗುವುದು

ಗೊಲ್ಲಹಳ್ಳಿ ಶಿವಪ್ರಸಾದ್, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ

‘ಪ್ರಚಾರಕ್ಕೆ ಚರಕ ಬೇಕು, ಗಾಂಧಿ ಬೇಕಿಲ್ಲ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಮನರೇಗಾ ಯೋಜನೆಯಿಂದ ಗಾಂಧಿ ಹೆಸರು ಕೈಬಿಟ್ಟಿದ್ದಾರೆ. ಬಿಜೆಪಿಗೆ ಗಾಂಧೀಜಿ ಬೇಕಾಗಿಲ್ಲ ಎಂದು ಇದರಿಂದ ತಿಳಿಯುತ್ತದೆ’ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಮಂಗಳವಾರ ಹರಿಹಾಯ್ದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಪ್ರಧಾನಿ ನರೇಂದ್ರ ಮೋದಿ ಅವರು ವಿದೇಶಗಳಿಗೆ ಹೋದಾಗ ಮಹಾತ್ಮಗಾಂಧಿ ಅವರನ್ನು ಕುರಿತು ಭಾಷಣ ಮಾಡುತ್ತಾರೆ. ಚರಕ ಹಿಡಿದು ಪೋಸು ಕೊಡುತ್ತಾರೆ’ ಎಂದರು.

‘ಬರೀ ಪೋಸು ಕೊಡುವುದಕ್ಕೆ ಮಾತ್ರ ಬಿಜೆಪಿ ಮುಖಂಡರಿಗೆ ಚರಕ ಬೇಕಾಗಿದೆ. ಗಾಂಧೀಜಿ ಅವರಿಗೆ ಬಿಜೆಪಿ ಎಂದಿಗೂ ಮಹತ್ವ ನೀಡಿಲ್ಲ’ ಎಂದು ಟೀಕಿಸಿದರು.


‘ಯುಪಿಎ ಅವಧಿಯಲ್ಲಿ ಮಹತ್ವದ ಕಾರ್ಯಕ್ರಮಗಳು ಜಾರಿಯಾಗಿವೆ. ಎನ್‌ಡಿಎಯಿಂದ ಒಂದೂ ಜಾರಿ ಆಗಿಲ್ಲ. ಯುಪಿಎ ಅವಧಿ ಯೋಜನೆಗಳ ಹೆಸರು ಬದಲಿಸುವುದೇ ಬಿಜೆಪಿ ಸಾಧನೆಯಾಗಿದೆ’ ಎಂದು ವ್ಯಂಗ್ಯವಾಡಿದರು.

‘ರಾಮ ಬೇರೆಯಲ್ಲ, ಗಾಂಧಿ ಬೇರೆಯಲ್ಲ’

ಬೀದರ್: ‘ರಾಮ ಬೇರೆಯಲ್ಲ, ಮಹಾತ್ಮಗಾಂಧಿ ಬೇರೆಯಲ್ಲ. ಗಾಂಧೀಜಿ ಅಂತರಾತ್ಮದಲ್ಲಿರುವ ಹೆಸರನ್ನೇ ಉದ್ಯೋಗ ಖಾತ್ರಿ ಯೋಜನೆಗೆ ‘ವಿಬಿ–ಜಿ ರಾಮ್ ಜಿ’ ಎಂದು ಇಟ್ಟಿದ್ದೇವೆ’ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯಿಸಿದ್ದಾರೆ.

ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಗಾಂಧಿ ಅವರ ಆತ್ಮ ರಾಮನ ಹೆಸರು ಹೇಳುತ್ತದೆ. ಗಾಂಧಿ ತಮ್ಮ ಕೊನೆಗಳಿಗೆಯಲ್ಲೂ ಅದೇ ಹೆಸರು ಹೇಳಿದ್ದರು’ ಎಂದರು.

‘ಆದರೆ, ಚುನಾವಣೆ ಬಂದಾಗಷ್ಟೇ ಕಾಂಗ್ರೆಸ್‌ಗೆ ಗಾಂಧೀಜಿ ನೆನಪಾಗುತ್ತಾರೆ. ಗಾಂಧೀಜಿ ಅವರನ್ನು ಒಂದಲ್ಲ, ಹಲವು ಬಾರಿ ಕೊಲೆ ಮಾಡಿರುವುದು ಕಾಂಗ್ರೆಸ್’ ಎಂದು ಟೀಕಿಸಿದರು.


ಬಸವರಾಜ ಬೊಮ್ಮಾಯಿ

ಗುಂಡೇಟಿಗೆ 3 ಕೃಷ್ಣಮೃಗ ಬಲಿ

ಚಿಕ್ಕಮಗಳೂರು: ಕಡೂರು ತಾಲ್ಲೂಕಿನ ಕಲ್ಲೇನಹಳ್ಳಿ ಗ್ರಾಮದ ಬಳಿ ಗುಂಡಿನ ದಾಳಿಗೆ ಮೂರು ಕೃಷ್ಣಮೃಗಗಳು ಮೃತಪಟ್ಟಿವೆ.

ಬಾಸೂರು ಅಮೃತ ಮಹಲ್ ಕಾವಲಿನ ಕೃಷ್ಣಮೃಗ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡಿರುವ ಖಾಸಗಿ ಕೃಷಿ ಭೂಮಿಯಲ್ಲಿ ಮೂರು ಕೃಷ್ಣಮೃಗಗಳ ಕಳೇಬರ ಮಂಗಳವಾರ ಪತ್ತೆಯಾಗಿವೆ. ಎರಡು ಹೆಣ್ಣು ಮತ್ತು ಒಂದು ಗಂಡು ಕೃಷ್ಣಮೃಗವಾಗಿದ್ದು, ಒಂದೂವರೆ ವರ್ಷದಿಂದ ಎರಡು ವರ್ಷದೊಳಗಿನ ವಯಸ್ಸಿನವು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಅಂದಾಜಿಸಿದ್ದಾರೆ.

ವಿದ್ಯಾರ್ಥಿಗಳ ಅಪಹರಣ, ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸಕೋಟೆಯಲ್ಲಿ ಬಿರಿಯಾನಿ ತಿಂದು ನಗರಕ್ಕೆ ವಾಪಸ್ ಆಗುತ್ತಿದ್ದ ಕಾಲೇಜು ವಿದ್ಯಾರ್ಥಿಗಳನ್ನು 14ರಿಂದ 15 ಜನರ ಗುಂಪು ಅಪಹರಿಸಿ, ಹಣ ಹಾಗೂ ಮೊಬೈಲ್ ಸುಲಿಗೆ ಮಾಡಿರುವ ಘಟನೆ ಆವಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಸಂತ್ರಸ್ತ ವಿದ್ಯಾರ್ಥಿಯ ದೂರು ಆಧರಿಸಿ, ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಕೃತ್ಯ ಎಸಗಿದ ಕೆ.ಜಿ ಹಳ್ಳಿಯ ಅರ್ಫಾತ್ ಅಹಮದ್ (24) ಎಂಬಾತನನ್ನು ಬಂಧಿಸಿದ್ದಾರೆ. ಉಳಿದ ಆರೋಪಿಗಳ ಬಂಧನಕ್ಕೆ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಬಾಗಲೂರು ವ್ಯಾಪ್ತಿಯ ಕಾಲೇಜಿನಲ್ಲಿ ಬಿಬಿಎ ಓದುತ್ತಿರುವ ನಾಲ್ವರು ವಿದ್ಯಾರ್ಥಿಗಳು ಎರಡು ಬೈಕ್‌ಗಳಲ್ಲಿ ಭಾನುವಾರ ಹೊಸಕೋಟೆಗೆ ಬಿರಿಯಾನಿ ತಿನ್ನಲು ತೆರಳಿದ್ದರು. ವಾಪಸ್ ಬರುವಾಗ ಬೆಳಿಗ್ಗೆ ಆರು ಗಂಟೆಗೆ ಆದೂರು ಮುಖ್ಯರಸ್ತೆ ಬಳಿ ದುಷ್ಕರ್ಮಿಗಳು ಅಡ್ಡಗಟ್ಟಿ, ಹಲ್ಲೆ ನಡೆಸಿದ್ದಾರೆ. ಬಳಿಕ ವಿದ್ಯಾರ್ಥಿಗಳನ್ನು ಮೇಡಹಳ್ಳಿಗೆ ಕರೆದೊಯ್ದು ಕೊಠಡಿಯಲ್ಲಿ ಕೂಡಿ ಹಾಕಿದ್ದಾರೆ ಎಂದು ಪೊಲೀಸರು ತಿಳಿಸಿದರು. ವಿದ್ಯಾರ್ಥಿಗಳ ಬಳಿ ಇದ್ದ ಮೂರು ಮೊಬೈಲ್, 23 ಗ್ರಾಂ ಚಿನ್ನದ ಸರ ಕಿತ್ತುಕೊಂಡಿದ್ದಾರೆ. ₹1.48 ಲಕ್ಷವನ್ನು ಯುಪಿಐ ಮೂಲಕ ತಮ್ಮ ಖಾತೆಗೆ ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಅಲ್ಲದೆ ವಿದ್ಯಾರ್ಥಿಗಳ ಮೊಬೈಲ್‌ಗಳಿಂದ ಅವರ ಸ್ನೇಹಿತರಿಗೆ ಕರೆ ಮಾಡಿಸಿ ಹಣ ತರುವಂತೆ ಬೆದರಿಸಿದ್ದಾರೆ ಎಂದರು.

ಆರೋಪಿಗಳ ಪೈಕಿ ಒಬ್ಬನನ್ನು ಬಂಧಿಸಿದ್ದು, ಉಳಿದವರ ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ.

ಅಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ

ಹುಲಿಗಳ ಸೆರೆಗೆ ಬೋನು, ಅರಿವಳಿಕೆ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಾಮರಾಜನಗರ ತಾಲ್ಲೂಕಿನ ನಂಜೇದೇವಪುರದಲ್ಲಿ ಕಾಣಿಸಿಕೊಂಡಿರುವ ಐದು ಹುಲಿಗಳನ್ನು ಸುರಕ್ಷಿತವಾಗಿ ಸ್ಥಳಾಂತರಿಸಲು ಮೊದಲಿಗೆ ಬೋನುಗಳನ್ನು ಅಳವಡಿಸಬೇಕು. ಅಗತ್ಯವಿದ್ದರೆ ಅರಿವಳಿಕೆ ನೀಡಿ ಸೆರೆ ಹಿಡಿಯಬೇಕು’ ಎಂದು ಅಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದರು.

ವಿಡಿಯೊ ಸಂವಾದದ ಮೂಲಕ ಮಂಗಳವಾರ ತುರ್ತು ಸಭೆ ನಡೆಸಿದ ಖಂಡ್ರೆ, ‘ಖಾಸಗಿ ಜಮೀನಿನಲ್ಲಿ ಹುಲಿಗಳು ಕಾಣಿಸಿಕೊಂಡಿದ್ದು, ಜನರು ಭಯಭೀತರಾಗಿದ್ದಾರೆ. ಜೀವಹಾನಿ ಆಗದ ರೀತಿಯಲ್ಲಿ ಮತ್ತು ವನ್ಯ ಜೀವಿಗಳಿಗೂ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಬೇಕು’ ಎಂದು ನಿರ್ದೇಶನ ನೀಡಿದರು.

‘ಹುಲಿಗಳ ಚಲನವಲನದ ಮೇಲೆ ಸತತ ನಿಗಾ ಅತ್ಯಗತ್ಯ. ಡ್ರೋನ್ ಕ್ಯಾಮೆರಾಗಳು, ಥರ್ಮಲ್ ಕ್ಯಾಮೆರಾಗಳನ್ನು ಬಳಸಿ ಹುಲಿಗಳು ಎಲ್ಲಿವೆ ಎಂಬ ಬಗ್ಗೆ ಖಚಿತ ಮಾಹಿತಿ ಪಡೆದು ಗ್ರಾಮಸ್ಥರಿಗೆ ತಕ್ಷಣ ಮಾಹಿತಿ ನೀಡಬೇಕು ಮತ್ತು ಅಲ್ಲಿಗೆ ಅರಣ್ಯ ಇಲಾಖೆಯ ತಂಡಗಳನ್ನು ಕಳುಹಿಸಿ ಯಾವುದೇ ಅನಾಹುತ ಆಗದಂತೆ ಕ್ರಮ ವಹಿಸಬೇಕು’ ಎಂದರು.

‘ಐದು ಹುಲಿಗಳ ಸೆರೆಗೆ ಕಾರ್ಯಾಚರಣೆ ಸುಲಭದ ಕೆಲಸವಲ್ಲ. ಹುಲಿಗಳನ್ನು ಹಿಡಿಯುವಾಗ ಕಾರ್ಯಾಚರಣೆ ತಂಡದ ಮೇಲೆ ದಾಳಿ ಮಾಡದಂತೆ ಮತ್ತು ಬಡಗಲಪುರದಲ್ಲಿ ಹುಲಿ ರಕ್ಷಣೆ ಕಾರ್ಯಾಚರಣೆ ವೇಳೆ ವ್ಯಕ್ತಿಯ ಮೇಲೆ ದಾಳಿ ಆಗಿರುವಂತಹ ಪ್ರಕರಣಗಳು ಮರುಕಳಿಸದಂತೆ ಹಿರಿಯ ಅಧಿಕಾರಿಗಳು ಕಟ್ಟೆಚ್ಚರ ವಹಿಸಬೇಕು. ಸಿಬ್ಬಂದಿಯ ಸುರಕ್ಷತೆಗೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು’ ಎಂದರು.

ವೈದ್ಯರ ನಿಯೋಜನೆ: ‘ಹುಲಿಗಳ ರಕ್ಷಣಾ ಕಾರ್ಯಾಚರಣೆಗೆ ಅಗತ್ಯವಿರುವ ಎಲ್ಲ ಸಲಕರಣೆ, ಹೆಚ್ಚುವರಿ ಪಶುವೈದ್ಯರು, ಶಾರ್ಪ್ ಶೂಟರ್‌ಗಳನ್ನೂ ನಿಯೋಜಿಸಬೇಕು ಹಾಗೂ ಹೆಚ್ಚುವರಿಯಾಗಿ ಆನೆಗಳನ್ನು ತಕ್ಷಣವೇ ತರಿಸಿಕೊಳ್ಳಬೇಕು. ಅಲ್ಲದೆ, ಕಾಡಿನಿಂದ ನಾಡಿನತ್ತ ವನ್ಯಜೀವಿಗಳು ಬಾರದಂತೆ ಶಾಶ್ವತ ಪರಿಹಾರ ಏನು ಎಂಬ ಬಗ್ಗೆ ಅಧಿಕಾರಿಗಳು, ತಜ್ಞರೊಂದಿಗೆ ಚರ್ಚಿಸಿ ರೂಪುರೇಷೆ ತಯಾರಿಸಿ, ವರದಿ ಸಲ್ಲಿಸಬೇಕು’ ಎಂದೂ ಸೂಚಿಸಿದರು.


ತುರುವೇಕೆರೆಯಲ್ಲಿ ಮಹಿಳೆಯ ಮೇಲೆ ದಾಳಿ ಮಾಡಿ ಸಾವಿಗೆ ಕಾರಣವಾಗಿದ್ದ ಚಿರತೆ, ಮಹಿಳೆಯ ದೇಹದ ಮಾಂಸ ಭಕ್ಷಣೆ ಮಾಡಿರುವ ಕಾರಣ ಅದನ್ನು ಸೆರೆ ಹಿಡಿದು ಪುನರ್ವಸತಿ ಕೇಂದ್ರಕ್ಕೆ ಕಳುಹಿಸಲಾಗಿದೆ ಎಂದು ಅಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ, ಹಿರಿಯ ಅಧಿಕಾರಿಗಳಾದ ಮನೋಜ್, ಬಿಸ್ವಜಿತ್ ಮಿಶ್ರಾ ಮತ್ತು ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ಇದ್ದರು.

ಖಂಡ್ರೆ ಸೂಚನೆಗಳೇನು?

- ಕಾರ್ಯಾಚರಣೆ ಸ್ಥಳಕ್ಕೆ ಜನರು ಬಾರದಂತೆ ಸೆಕ್ಷನ್ 144 ಕಟ್ಟುನಿಟ್ಟಾಗಿ ಜಾರಿ ಮಾಡಬೇಕು
- ಇ-ಗಸ್ತು ಹೆಚ್ಚಿಸಬೇಕು
- ಗಸ್ತು ಸಿಬ್ಬಂದಿ, ಅಧಿಕಾರಿಗಳ ಮೊಬೈಲ್‌ನಲ್ಲಿ ಆ್ಯಪ್ ಅಳವಡಿಸಿ, ಗಸ್ತಿನ ಮೇಲೆ ಕೇಂದ್ರ ಕಚೇರಿಯಿಂದಲೇ ನಿಗಾ ಇಡಬೇಕು
- ಗಸ್ತಿನಲ್ಲಿ ಯಾವುದೇ ಲೋಪ ಆಗದಂತೆ ಪೂರ್ಣ ಪ್ರಮಾಣದಲ್ಲಿ ಎಚ್ಚರಿಕೆ ವಹಿಸಬೇಕು
- ಎಲ್ಲ ಕಡೆ ತಕ್ಷಣ ಕಮಾಂಡ್ ಕೇಂದ್ರಗಳನ್ನು ತಕ್ಷಣ ಆರಂಭಿಸಬೇಕು


ಈಶ್ವರ ಬಿ. ಖಂಡ್ರೆ



‘ಸಂಕಷ್ಟದಲ್ಲಿ ದೇಶ, ಸಂವಿಧಾನ’

ಸಂಘಟಿತ ಅಹಿಂಸಾತ್ಮಕ ಆಂದೋಲನ ಅಗತ್ಯ: ಭೂಷಣ್

ಪ್ರಜಾವಾಣಿ ವಾರ್ತೆ

ಧಾರವಾಡ: ‘ದೇಶ ಮತ್ತು ಸಂವಿಧಾನ ಸಂಕಷ್ಟದಲ್ಲಿವೆ. ಅವುಗಳ ರಕ್ಷಣೆಯಲ್ಲಿ ಜನರ ಜವಾಬ್ದಾರಿ ಹೆಚ್ಚು ಇದೆ’ ಎಂದು ಸುಪ್ರೀಂ ಕೋರ್ಟ್‌ನ ವಕೀಲ ಪ್ರಶಾಂತ ಭೂಷಣ್ ಇಲ್ಲಿ ಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘ ನೀಡುವ ಸಮಾಜ ಪರಿವರ್ತನ ಸಮುದಾಯದ (ಎಸ್‌ಪಿಎಸ್) ದತ್ತಿಯ ‘ಮಹಾಸಂಗ್ರಾಮಿ ಎಸ್.ಆರ್.ಹಿರೇಮಠ ಸಮಾಜ ಪರಿವರ್ತನ ಪುರಸ್ಕಾರ’ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

‘ಕೇಂದ್ರ ‘ಮನರೇಗಾ’ ರದ್ದತಿಗೆ ಮುಂದಾಗಿದೆ. ಬಡವರ ಹಕ್ಕುಗಳ ಮೇಲೆ ಪ್ರಹಾರ ಆಗುತ್ತಿದೆ. ರಕ್ಷಿಸಬೇಕಾದ ನ್ಯಾಯಾಂಗ ಕ್ರಿಯಾಶೀಲವಾಗಿಲ್ಲ. ಜನರು ಸಂಘಟಿತರಾಗಿ ಅಹಿಂಸಾತ್ಮಕ ಆಂದೋಲನ ನಡೆಸಬೇಕು’ ಎಂದರು.

‘ನ್ಯಾಯಾಂಗದಲ್ಲಿ ಕ್ರಿಯಾಶೀಲತೆ ಕಡಿಮೆಯಾಗಿದೆ. ನ್ಯಾಯಮೂರ್ತಿಗಳಿಗೆ ನಿವೃತ್ತಿ ನಂತರ ರಾಜ್ಯಸಭಾ ಸದಸ್ಯ ಸ್ಥಾನ, ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಹುದ್ದೆ ದಯಪಾಲಿಸುವ ಪರಿಪಾಟ ಹೆಚ್ಚಾಗಿದೆ’ ಎಂದರು.

‘ತಪ್ಪು ಮಾಹಿತಿ ಹರಡುವುದು, ದ್ವೇಷ ಭಾವನೆ ಬಿತ್ತುವುದು ಹೆಚ್ಚುತ್ತಿದೆ. ಅಲ್ಪಸಂಖ್ಯಾತರ ಬಗ್ಗೆ ದ್ವೇಷಯುಕ್ತ ತಪ್ಪು ಮಾಹಿತಿ ಹರಡುವುದು ಶಾಲಾ ಪಠ್ಯಗಳಲ್ಲಿ ಇತಿಹಾಸದ ಕೆಲ ವಿಷಯಗಳನ್ನು ತೆಗೆಯಲಾಗಿದೆ. ವೈಜ್ಞಾನಿಕವಲ್ಲದ ವಿಷಯಗಳು ನುಸುಳಿವೆ’ ಎಂದು ಅವರು ಹೇಳಿದರು.

‘ಮಹಾ ಲೆಕ್ಕ ಪರಿಶೋಧಕ ಮತ್ತು ಮಹಾಲೇಖಪಾಲ (ಸಿಎಜಿ) ಸಂಸ್ಥೆ ಸ್ವತಂತ್ರವಾಗಿತ್ತು. ಸರ್ಕಾರ, ಸಾರ್ವಜನಿಕ ಸಂಸ್ಥೆಗಳ ಲೆಕ್ಕ ಪರಿಶೋಧನೆ ಮಾಡುತ್ತಿತ್ತು. ಈಗ ಸಂಸ್ಥೆಯ ಸ್ವಾತಂತ್ರ್ಯ ಕಸಿಯಲಾಗಿದೆ. ಚುನಾವಣಾ ಆಯೋಗ ಸೇರಿ ಬಹಳಷ್ಟು ಸಂಸ್ಥೆಗಳ ಸ್ವಾತಂತ್ರ್ಯ ಕಸಿಯಲಾಗಿದೆ’ ಎಂದು ದೂರಿದರು.



ಕಾರ್ಯಕ್ರಮದಲ್ಲಿ ನ್ಯಾ.ಸಂತೋಷ ಹೆಗ್ಡೆ ಅವರು ಸುಪ್ರೀಂ ಕೋರ್ಟ್ ವಕೀಲ ಪ್ರಶಾಂತ ಭೂಷಣ್ ಅವರಿಗೆ ‘ಮಹಾ ಸಂಗ್ರಾಮಿ ಎಸ್.ಆರ್.ಹಿರೇಮಠ ಸಮಾಜ ಪರಿವರ್ತನ ಪುರಸ್ಕಾರ’ ಪ್ರಶಸ್ತಿ ಪ್ರದಾನ ಮಾಡಿದರು. ವಿದ್ಯಾವರ್ಧಕ ಸಂಘದ ಶೈಲಜಾ ಅಮರಶೆಟ್ಟಿ, ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ, ಕಾನೂನು ವಿ.ವಿ ಕುಲಪತಿ ಪ್ರೊ.ಸಿ.ಬಸವರಾಜು, ಎಸ್‌ಪಿಎಸ್ ಸಂಸ್ಥಾಪಕ ಅಧ್ಯಕ್ಷ ಎಸ್.ಆರ್.ಹಿರೇಮಠ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಜ.29ರಿಂದ ಬೆಂಗಳೂರು ಚಲನಚಿತ್ರೋತ್ಸವ

60 ದೇಶಗಳ 200ಕ್ಕೂ ಹೆಚ್ಚು ಸಿನಿಮಾ ಪ್ರದರ್ಶನ

• ಚಿತ್ರೋತ್ಸವಕ್ಕೆ ನಟ ಪ್ರಕಾಶ್ ರಾಜ್ ರಾಯಭಾರಿ

ಪ್ರಜಾವಾಣಿ ವಾರ್ತೆ

- ಜನವರಿ 16ರಿಂದ ನೋಂದಣಿ
- ಸಾಮಾನ್ಯ ಪ್ರತಿನಿಧಿಗಳಿಗೆ ₹800 ಶುಲ್ಕ
- ಚಿತ್ರೋದ್ಯಮ ಸದಸ್ಯರು, ವಿದ್ಯಾರ್ಥಿಗಳಿಗೆ ₹400 ಶುಲ್ಕ
- ನೋಂದಣಿಗೆ www.biffes.org ಸಂಪರ್ಕಿಸಬಹುದು

ಬೆಂಗಳೂರು: 17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಜನವರಿ 29ರಿಂದ ಫೆಬ್ರುವರಿ 6ರವರೆಗೆ ನಡೆಯಲಿದ್ದು, 60ಕ್ಕೂ ಹೆಚ್ಚು ದೇಶಗಳ 200 ಚಲನಚಿತ್ರಗಳ 400ಕ್ಕೂ ಹೆಚ್ಚು ಪ್ರದರ್ಶನಗಳು ನಡೆಯಲಿವೆ. ಈ ಬಾರಿಯ ಚಿತ್ರೋತ್ಸವ ಮಹಿಳಾ ಸಬಲೀಕರಣದ ಆಶಯವನ್ನು ಹೊಂದಿದೆ.

ವಿಧಾನಸೌಧದ ಸಮಿತಿ ಸಭಾಂಗಣದಲ್ಲಿ ಚಲನಚಿತ್ರೋತ್ಸವ ಕುರಿತು ನಡೆದ ಪೂರ್ವಭಾವಿ ಸಭೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು.

ಈ ಚಲನಚಿತ್ರೋತ್ಸವದ ರಾಯಭಾರಿಯಾಗಿ ಹಿರಿಯ ನಟ ಪ್ರಕಾಶ್ ರಾಜ್ ಅವರನ್ನು ಆಯ್ಕೆ ಮಾಡಲಾಗಿದೆ. ಚಿತ್ರೋತ್ಸವದ ಉದ್ಘಾಟನೆ ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ಮೇಲೆ ನಡೆಯಲಿದೆ ಎಂದರು.

ಚಿತ್ರೋತ್ಸವದ ಚಲನಚಿತ್ರಗಳ ಪ್ರದರ್ಶನ ರಾಜಾಜಿನಗರದ ಲುಲು ಮಾಲ್‌ನಲ್ಲಿರುವ ಸಿನಿ ಪೊಲೀಸ್‌ನಲ್ಲಿರುವ 11 ಪರದೆಗಳಲ್ಲಿ ನಡೆಯಲಿದೆ. ಅಲ್ಲದೇ, ಚಾಮರಾಜಪೇಟೆಯಲ್ಲಿರುವ ಕಲಾವಿದರ ಸಂಘದ ಡಾ.ರಾಜ್‌ಕುಮಾರ್ ಭವನ, ಬನಶಂಕರಿಯಲ್ಲಿರುವ ಸುಚಿತ್ರ ಫಿಲಂ ಸೊಸೈಟಿಗಳಲ್ಲೂ ಪ್ರದರ್ಶನ ನಡೆಯಲಿದೆ ಎಂದರು.

ಚಿತ್ರೋತ್ಸವದಲ್ಲಿ ಏಷ್ಯಾ, ಭಾರತೀಯ ಮತ್ತು ಕನ್ನಡ ಸಿನಿಮಾ ಸ್ಪರ್ಧಾತ್ಮಕ ವಿಭಾಗಗಳಿಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಈ ಮೂರು ಸ್ಪರ್ಧಾತ್ಮಕ ವಿಭಾಗಗಳಿಗೆ ಈವರೆಗೆ 110 ಕ್ಕೂ ಹೆಚ್ಚು ಚಲನಚಿತ್ರಗಳು ಸಲ್ಲಿಕೆಯಾಗಿವೆ. ಸ್ಪರ್ಧಾತ್ಮಕ ವಿಭಾಗಗಳ ಅರ್ಜಿ ಸಲ್ಲಿಕೆಗೆ ಡಿಸೆಂಬರ್ 11 ಕಡೆಯ ದಿನ ಎಂದು ಅವರು ತಿಳಿಸಿದರು.

ಚಿತ್ರೋತ್ಸವಕ್ಕೆ ₹7 ಕೋಟಿ ಅನುದಾನ ಒದಗಿಸಲಾಗಿದೆ. ಸಮಾರೋಪ ಸಮಾರಂಭ ಫೆಬ್ರುವರಿ 6 ರಂದು ನಡೆಯಲಿದೆ. ಎಲ್ಲಾ ಸ್ಪರ್ಧಾ ವಿಭಾಗಗಳ ವಿಜೇತರು ಮತ್ತು ಪ್ರಶಸ್ತಿ ಪುರಸ್ಕೃತರನ್ನು ಗೌರವಿಸಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು.

‘ಸ್ತ್ರೀ ಎಂದರೆ ಅಷ್ಟೇ ಸಾಕೆ..’

ಈ ಬಾರಿ ಚಲನ ಚಿತ್ರೋತ್ಸವವನ್ನು ಮಹಿಳಾ ಸಬಲೀಕರಣದ ಆಶಯದಡಿ ಆಯೋಜಿಸಲಾಗುತ್ತಿದೆ. ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರ ಪ್ರಸಿದ್ಧ ಗೀತೆ ‘ಸ್ತ್ರೀ ಎಂದರೆ ಅಷ್ಟೇ ಸಾಕೆ....’ ಎಂಬ ಸಾಲಿನೊಂದಿಗೆ ‘ಸ್ತ್ರೀ: ಸಂವೇದನೆ, ಸಮಾನತೆಯ ದನಿ’ ಎಂಬ ಟ್ಯಾಗ್ ಲೈನ್ ಹೊಂದಿರುವ ಧ್ಯೇಯ ವಾಕ್ಯವನ್ನು ಚಿತ್ರೋತ್ಸವದಲ್ಲಿ ಬಳಸಲು ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.



17ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಲೋಗೊವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ವಾರ್ತಾ ಇಲಾಖೆ ಕಾರ್ಯದರ್ಶಿ ಬಿ.ಬಿ ಕಾವೇರಿ, ನಟಿ ಶರಣ್ಯ ಶೆಟ್ಟಿ, ನಿರ್ದೇಶಕ ತರುಣ್ ಸುಧೀರ್, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ, ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್ ಪಾಲ್ಗೊಂಡಿದ್ದರು

ವಿಶ್ವ ಪ್ರಶಸ್ತಿ ವಿಜೇತ ಚಿತ್ರಗಳ ಪ್ರದರ್ಶನ

ವಿಶ್ವದ ಪ್ರತಿಷ್ಠಿತ ಚಲನಚಿತ್ರೋತ್ಸವಗಳಾದ ಕಾನ್ಸ್ (ಫ್ರಾನ್ಸ್), ಬರ್ಲಿನ್ (ಜರ್ಮನಿ), ವೆನಿಸ್ (ಇಟಲಿ), ಕಾರ್ಲೋವಿ ವೇರಿ (ಜೆಕ್ ರಿಪಬ್ಲಿಕ್), ಲೊಕಾರ್ನೊ (ಸ್ವಿಟ್ಜರ್ಲೆಂಡ್), ರಾಟರ್‌ಡ್ಯಾಮ್ (ನೆದರ್‌ಲ್ಯಾಂಡ್), ಬೂಸಾನ್ (ದಕ್ಷಿಣ ಕೊರಿಯಾ), ಟೊರಾಂಟೊಗಳಲ್ಲಿ (ಕೆನಡಾ) ಭಾಗವಹಿಸಿ ಪ್ರಶಸ್ತಿ ಪಡೆದ ಸಿನಿಮಾಗಳನ್ನು ಈ ಚಲನಚಿತ್ರೋತ್ಸವದಲ್ಲಿ ವೀಕ್ಷಿಸಬಹುದಾಗಿದೆ. ಅಲ್ಲದೆ, ಈ ಬಾರಿಯ ಆಸ್ಕರ್ ಪ್ರಶಸ್ತಿಯ ಅಂತಿಮ ಸುತ್ತಿಗೆ ಆಯ್ಕೆಯಾಗಿರುವ ಆಗಿರುವ ವಿವಿಧ ದೇಶಗಳ ಅತ್ಯುತ್ತಮ ಸಿನಿಮಾಗಳು ಪ್ರದರ್ಶನಗೊಳ್ಳಲಿವೆ.

ಕನ್ನಡ ಚಿತ್ರರಂಗದ ವಿಶೇಷಗಳು

2025ಕ್ಕೆ 50 ವರ್ಷ ಸಿನಿ ಪಯಣ ಪೂರೈಸಿರುವ ಖ್ಯಾತ ನಿರ್ದೇಶಕರಾದ ಎಸ್.ವಿ.ರಾಜೇಂದ್ರಸಿಂಗ್ ಬಾಬು, ಗಿರೀಶ್ ಕಾಸರವಳ್ಳಿ ಮತ್ತು ನಟಿ ಜಯಮಾಲಾ ಸೇರಿ ಕನ್ನಡ ಚಿತ್ರರಂಗದ ಗಣ್ಯರ ಪ್ರಮುಖ ಚಲನಚಿತ್ರಗಳನ್ನು ಪ್ರದರ್ಶಿಸಲಾಗುವುದು. ವಜ್ರೇಶ್ವರಿ ಕಂಬೈನ್ಸ್‌ನ ಕೆಲವು ಚಲನಚಿತ್ರಗಳು ಸೇರಿ ಹಲವು ಕನ್ನಡ ಚಿತ್ರಗಳ ಫಿಲಂ ಪ್ರಿಂಟ್‌ಗಳನ್ನು ಎನ್‌ಎಫ್‌ಡಿಸಿ–ಎನ್‌ಎಫ್‌ಎಐ ಪುಣೆ ಸಂಸ್ಥೆಯು ಇತ್ತೀಚೆಗೆ ಡಿಜಿಟಲ್ ರೂಪಾಂತರ ಮಾಡಿ ಸಂರಕ್ಷಿಸಿದೆ. ಜನಮನ್ನಣೆ ಪಡೆದ ಚಿತ್ರಗಳನ್ನು ಸಂರಕ್ಷಿತ ಕ್ಲಾಸಿಕ್ ವಿಭಾಗದಲ್ಲಿ ಪ್ರದರ್ಶಿಸಲಾಗುವುದು.

ಚಿತ್ರಾವಳಿ



ಪ್ರೆಸ್ಟೀಜ್ ಗ್ರೂಪ್‌ನ ಎಂ.ಡಿ. ಹಾಗೂ ಸಿಇಒ ಇರ್ಫಾನ್ ರಜಾಕ್ (ಮಧ್ಯದಲ್ಲಿ ಇರುವವರು) ಅವರ ಜೀವಮಾನದ ಸಾಧನೆಯನ್ನು ಗುರುತಿಸಿ, ದೇಶದ ರಿಯಲ್ ಎಸ್ಟೇಟ್ ವಲಯಕ್ಕೆ ಅವರ ಸೇವೆಯನ್ನು ಗೌರವಿಸಿ ಕ್ರೆಡಾಯ್ ಸಂಘಟನೆಯು ಪ್ರಶಸ್ತಿಯನ್ನು ಪ್ರದಾನ ಮಾಡಿತು.



ಆಚಾರ್ಯ ಪಾಠಶಾಲಾ ಶಿಕ್ಷಣ ಸಂಸ್ಥೆಯ (ಎಪಿಎಸ್) ಅಧ್ಯಕ್ಷ ವಿಷ್ಣು ಭರತ್ ಅವರು ಬೆಂಗಳೂರು ಗಾಯನ ಸಮಾಜದ ಅಧ್ಯಕ್ಷ ಎಂ.ಆರ್.ವಿ. ಪ್ರಸಾದ್ ಅವರನ್ನು ಸನ್ಮಾನಿಸಿದರು. ಎಪಿಎಸ್ ಸಂಸ್ಥೆ ಕಾರ್ಯದರ್ಶಿ ಎ.ಪ್ರಕಾಶ್, ಮಾಜಿ ಉಪಾಧ್ಯಕ್ಷ ಕೆ. ಮೋಹನ್ ದೇವ್ ಆಳ್ವ ಮತ್ತು ಎಪಿಎಸ್ ಕಲೆ ಮತ್ತು ವಿಜ್ಞಾನ ಕಾಲೇಜಿನ ಸಂಗೀತ ವಿಭಾಗದ ಮುಖ್ಯಸ್ಥೆ ಕಮಲ ಪ್ರಾಣೇಶ್ ಇದ್ದಾರೆ



ಶ್ರೀಗಂಧ ಕೆಮಿಸ್ಟ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್, ಆಹಾರ ಸುರಕ್ಷತೆ ಮತ್ತು ಔಷಧ ನಿರ್ವಹಣಾ ಇಲಾಖೆ ಜಂಟಿಯಾಗಿ ಸುಂಕದಕಟ್ಟೆಯಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎನ್‌ಡಿಪಿಎಸ್ ಮತ್ತು ಎಎಂಆರ್ ಔಷಧಗಳ ದುರ್ಬಳಕೆಯ ಕುರಿತು ಜಾಗೃತಿ ಮೂಡಿಸಲಾಯಿತು. ಉಪ ಔಷಧ ನಿಯಂತ್ರಕರಾದ ಮಲ್ಲಿಕಾರ್ಜುನ ನಾಗೂರ, ಸಹಾಯಕ ಔಷಧ ನಿಯಂತ್ರಕರಾದ ಸಿ.ಆರ್. ಸೂರಿ, ಭಾಗ್ಯಜ್ಯೋತಿ, ಬಿ.ಆರ್. ವೆಂಕಟೇಶ್, ಅಸೋಸಿಯೇಷನ್ ಅಧ್ಯಕ್ಷ ಎಂ.ಕೆ. ಮಾಯಣ್ಣ ಉಪಸ್ಥಿತರಿದ್ದರು

ಬ್ರೆಡ್‌ನಲ್ಲಿ ಕೊಕೇನ್ ಸಾಗಣೆ

ಪ್ರಜಾವಾಣಿ ವಾರ್ತೆ



ಎಸ್ತರ್

ಬೆಂಗಳೂರು: ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳ ಕಾರ್ಯಾಚರಣೆ ನಡೆಸಿ, ಬಸ್‌ನಲ್ಲಿ ಮುಂಬೈನಿಂದ ಬೆಂಗಳೂರಿಗೆ ಬ್ರೆಡ್‌ನಲ್ಲಿ ಅಡಗಿಸಿಟ್ಟು ಕೊಕೇನ್ ಸಾಗಣೆ ಮಾಡುತ್ತಿದ್ದ ವಿದೇಶಿ ಮಹಿಳೆಯನ್ನು ಬಂಧಿಸಿದೆ.

ನೈಜೀರಿಯಾದ ಡ್ರಗ್ ಪೆಡ್ಲರ್ ಓಲಜೈಡ್ ಎಸ್ತರ್ ಇಯಾನುವುಒಲನಾ (29) ಎಂಬಾಕೆಯನ್ನು ಬಂಧಿಸಿ, 121 ಗ್ರಾಂ ತೂಕದ ಕೊಕೇನ್, ಕೃತ್ಯಕ್ಕೆ ಬಳಸಿದ್ದ ಮೊಬೈಲ್ ಸೇರಿ ಅಂದಾಜು ₹1.20 ಕೋಟಿ ಮೌಲ್ಯದ ಸ್ವತ್ತು ವಶಪಡಿಸಿಕೊಳ್ಳಲಾಗಿದೆ.

‘2024ರಲ್ಲಿ ವಿದ್ಯಾರ್ಥಿ ವೀಸಾದ ಮೇಲೆ ಮುಂಬೈಗೆ ಬಂದಿದ್ದ ಆರೋಪಿ, ಕಾಲೇಜಿಗೆ ದಾಖಲಾಗದೆ ಮುಂಬೈನ ಗಾಲಾನಗರ, ಅಂಬವಾಡಿ, ನಲ್ಲಾಸೋಪ್ರಾ ಕಡೆ ವಾಸವಾಗಿದ್ದುಕೊಂಡು ಡ್ರಗ್ಸ್ ಮಾರಾಟ ಮಾಡುತ್ತಿದ್ದಳು. ಸ್ನೇಹಿತ ನೀಡುತ್ತಿದ್ದ ಕೊಕೇನ್ ಪಡೆದುಕೊಂಡು, ಸೂಚಿಸಿದ ಸ್ಥಳಗಳಿಗೆ ತಲುಪಿಸಿ, ಡ್ರಗ್ ಪೆಡ್ಲಿಂಗ್ ಮೂಲಕ ಅಕ್ರಮವಾಗಿ ಹಣ ಸಂಪಾದನೆ ಮಾಡುತ್ತಿದ್ದಳು’ ಎಂದು ಪೊಲೀಸರು ತಿಳಿಸಿದರು.

‘ಬ್ರೆಡ್ ಅನ್ನು ಮಧ್ಯೆ ಕತ್ತರಿಸಿ ಕೊಕೇನ್ ಅನ್ನು ಇಟ್ಟು ಅನುಮಾನ ಬಾರದಂತೆ ಕವರ್ ಪ್ಯಾಕ್ ಮಾಡಿ ಮುಂಬೈನಿಂದ ಬೆಂಗಳೂರಿಗೆ ಖಾಸಗಿ ಬಸ್‌ನಲ್ಲಿ ಸಾಗಣೆ ಮಾಡುತ್ತಿದ್ದಳು. ಖಚಿತ ಮಾಹಿತಿಯ ಮೇರೆಗೆ ಡಿಆರ್‌ಐ ಅಧಿಕಾರಿಗಳು ಶಿರಾದಿಂದ ಬಸ್ ಅನ್ನು ಹಿಂಬಾಲಿಸಿಕೊಂಡು ಬಂದಿದ್ದರು. ಅದೇ ರೀತಿ ಸಿಸಿಬಿ ಪೊಲೀಸರು ನೆಲಮಂಗಲ ಟೋಲ್‌ನಿಂದ ಆಕೆ ಇದ್ದ ಬಸ್ ಹಿಂಬಾಲಿಸಿದರು’ ಎಂದು ಹೇಳಿದರು.

ವರ್ತೂರು ಠಾಣಾ ವ್ಯಾಪ್ತಿಯಲ್ಲಿ ವಾಸವಿರುವ ಸ್ನೇಹಿತನ ಮನೆಗೆ ಆರೋಪಿ ಬಂದ ತಕ್ಷಣ, ಪೊಲೀಸರು ದಾಳಿ ಮಾಡಿ ಪರಿಶೀಲಿಸಿದಾಗ ಡ್ರಗ್ಸ್ ಸಿಗಲಿಲ್ಲ. ಆಕೆಯ ತಂದಿದ್ದ ಬ್ರೆಡ್ ಬಾಕ್ಸ್ ಅನ್ನು ಪರಿಶೀಲಿಸಿದಾಗ ಬ್ರೆಡ್ ಮಧ್ಯೆ ಕೊಕೇನ್ ಇಟ್ಟುಕೊಂಡು ಬಂದಿರುವುದು ಗೊತ್ತಾಯಿತು. ತಕ್ಷಣ ಡ್ರಗ್ಸ್ ವಶಪಡಿಸಿಕೊಂಡು, ಆರೋಪಿಯನ್ನು ಬಂಧಿಸಲಾಯಿತು.

ಕೃತ್ಯ ನಡೆದ ಸ್ಥಳದ ಆಧಾರದ ಮೇಲೆ ವರ್ತೂರು ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ನ್ಯಾಯಾಂಗ ವಶಕ್ಕೆ ನೀಡಲಾಗಿದೆ.

ಹೈಡ್ರೊ ಗಾಂಜಾ: ಕೇರಳದ ಇಬ್ಬರ ಸೆರೆ

ಜಾಲಹಳ್ಳಿ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ, ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಕೇರಳದ ಇಬ್ಬರನ್ನು ಬಂಧಿಸಿದ್ದಾರೆ.

ನಿಖಿಲ್ ರಾಜ್, ಮೆಲ್ವಿನ್ ಎಂಬುವವರನ್ನು ಬಂಧಿಸಿ, 247 ಗ್ರಾಂ ಹೈಡ್ರೊ ಗಾಂಜಾ ಮತ್ತು 19 ಗ್ರಾಂ ಎಂಡಿಎಂಎ ಸೇರಿ ಅಂದಾಜು ₹26.90 ಲಕ್ಷ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ.

ಕದ್ದ ಚಿನ್ನ ಕರಗಿಸಿ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳ್ಳತನದ ಮಾಡಿದ ಚಿನ್ನಾಭರಣಗಳನ್ನು ಮನೆಯಲ್ಲೇ ಕರಗಿಸಿ, ಬಿಸ್ಕೆಟ್ ಮಾಡಿ ಮಾರಾಟ ಮಾಡುತ್ತಿದ್ದ ಹೊರ ರಾಜ್ಯದ ಆರೋಪಿಯನ್ನು ಜೆ.ಪಿ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಗರದ ನಾಗವಾರದಲ್ಲಿ ವಾಸವಿದ್ದ, ಆಂಧ್ರಪ್ರದೇಶದ ಮೆಹಬೂಬ್‌ಖಾನ್ ಪಠಾಣ್ ಎಂಬಾತನನ್ನು ಬಂಧಿಸಿ, 478 ಗ್ರಾಂ ಚಿನ್ನಾಭರಣ, 1 ಕೆ.ಜಿ. 550 ಗ್ರಾಂ ಬೆಳ್ಳಿ ವಸ್ತುಗಳು, ₹4.60 ಲಕ್ಷ ನಗದು, ದ್ವಿಚಕ್ರ ವಾಹನ ಸೇರಿ ₹65.28 ಲಕ್ಷ ಮೌಲ್ಯದ ಸ್ವತ್ತು ವಶಪಡಿಸಿಕೊಳ್ಳಲಾಗಿದೆ.



ಪಠಾಣ್

ಆರೋಪಿ ವಿರುದ್ಧ ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 32 ಪ್ರಕರಣಗಳು ದಾಖಲಾಗಿವೆ. ನಗರದ ವಿವಿಧ ಠಾಣೆಯ ಪೊಲೀಸರು ಬಾಡಿ ವಾರಂಟ್ ಮೇಲೆ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲು ಸಿದ್ಧತೆ ನಡೆಸಿದ್ದಾರೆ.

ಮಾರ್ಚ್ 17ರಂದು ಜೆ.ಪಿ.ನಗರದ 20ನೇ ಮುಖ್ಯರಸ್ತೆಯಲ್ಲಿರುವ ಕಿರುತೆರೆ ನಟನ ಮನೆಯಲ್ಲಿ ಕಳ್ಳತನವಾಗಿತ್ತು. ಈ ಸಂಬಂಧ ನಟನ ಪತ್ನಿ ದೂರು ನೀಡಿದ್ದರು. ಮಾರ್ಚ್ 11ರಂದು ನಟ ಚಿತ್ರೀಕರಣಕ್ಕೆ ತೆರಳಿದ್ದು, ದೂರುದಾರೆ ಮನೆಯ ಬೀಗದ ಕೀಯನ್ನು ಚಪ್ಪಲಿ ಬಾಕ್ಸ್‌ನಲ್ಲಿ ಇರಿಸಿ ಹೊಸಕೋಟೆಯಲ್ಲಿರುವ ಅತ್ತೆಯ ಮನೆಗೆ ಹೋಗಿದ್ದರು. ಹಾಗಾಗಿ ಸ್ನೇಹಿತರೊಬ್ಬರಿಗೆ ಕರೆ ಮಾಡಿ ಚಪ್ಪಲಿ ಬಾಕ್ಸ್‌ನಲ್ಲಿಟ್ಟಿದ್ದ ಕೀಯನ್ನು ತೆಗೆದುಕೊಳ್ಳಲು ಹೇಳಿದ್ದರು. ಅದರಂತೆ ಆ ಸ್ನೇಹಿತ ಮನೆಯ ಕೀಯನ್ನು ತೆಗೆದುಕೊಂಡು, ಡಂಝೊ ಮೂಲಕ ಅದನ್ನು ಹೊಸಕೋಟೆಯಲ್ಲಿರುವ ಮನೆಗೆ ಕಳುಹಿಸಿದ್ದರು ಎಂದು ಪೊಲೀಸರು ತಿಳಿಸಿದರು.

ಹೊಸಕೋಟೆಯಿಂದ ಮಹಿಳೆ ಮನೆಗೆ ಬಂದಾಗ ಮನೆಯಲ್ಲಿರುವ ವಸ್ತುಗಳು ಚೆಲ್ಲಾಪಿಲ್ಲಿಯಾಗಿದ್ದವು. ಜತೆಗೆ ಕೊಠಡಿಯ ಬೀರುವಿನಲ್ಲಿಟ್ಟಿದ್ದ ಆಭರಣ ಕಾಣಿಸಲಿಲ್ಲ. ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬಂಧಿಸಲಾಯಿತು ಎಂದು ಹೇಳಿದರು.

ಅಂಗಡಿಗೆ ಮಾರಾಟ

ಕಳವು ಮಾಡಿದ್ದ ಚಿನ್ನಾಭರಣಗಳನ್ನು ಮನೆಯಲ್ಲೇ ಕರಗಿಸಿ ಚಿನ್ನದ ಬಿಸ್ಕೆಟ್ ತಯಾರಿಸಿ ಆಭರಣ ಅಂಗಡಿಗಳಿಗೆ ಮಾರುತ್ತಿದ್ದ. ಇತ್ತೀಚೆಗೆ ಕಳವು ಮಾಡಿದ್ದ ಚಿನ್ನವನ್ನು ಚನ್ನರಾಯಪಟ್ಟಣದಲ್ಲಿ ಆಭರಣ ಅಂಗಡಿಗೆ ಕೊಟ್ಟಿದ್ದ. ಕೆಲವನ್ನು ತನ್ನ ಮನೆಯಲ್ಲೇ ಇರಿಸಿದ್ದ. ಎಲ್ಲವನ್ನೂ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕಲ್ಯಾಣ ಮಂಟಪದಲ್ಲಿ ಆಭರಣ ಕಳವು: ಉಪನ್ಯಾಸಕಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಮಂಟಪಗಳಿಗೆ ಸಂಬಂಧಿಕರಂತೆ ಹೋಗಿ ಚಿನ್ನಾಭರಣ ಹಾಗೂ ಹಣ ಕಳವು ಮಾಡುತ್ತಿದ್ದ ಮಹಿಳೆಯನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯ ರೇವತಿ (46) ಎಂಬಾಕೆಯನ್ನು ಬಂಧಿಸಿ, ₹32 ಲಕ್ಷ ಮೌಲ್ಯದ 262 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ. ಕೆ.ಆರ್.ಪುರದಲ್ಲಿ ವಾಸವಾಗಿದ್ದು, ಅತಿಥಿ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದರು.

ಚಿಕ್ಕಲಸಂದ್ರದ ಮಂಜುನಾಥ ನಗರದಲ್ಲಿ ವಾಸವಿರುವ ನಿವಾಸಿಯೊಬ್ಬರು ನ.23ರ ಬೆಳಿಗ್ಗೆ ಸಂಬಂಧಿಕರ ಮದುವೆಗೆಂದು ತಾಯಿಯ ಜತೆ ಬಸವನಗುಡಿಯಲ್ಲಿರುವ ಕಲ್ಯಾಣಮಂಟಪಕ್ಕೆ ಹೋಗಿ ಕೊಠಡಿಯಲ್ಲಿ ಬ್ಯಾಗ್ ಇಟ್ಟಿದ್ದಾರೆ. ಕಾರ್ಯಕ್ರಮ ಮುಗಿಸಿ ನಂತರ ಮನೆಗೆ ಹೋಗಿ ಬ್ಯಾಗ್ ನೋಡಿದಾಗ ಅದರಲ್ಲಿಟ್ಟಿದ್ದ ಸುಮಾರು ₹3 ಲಕ್ಷ ಬೆಲೆ ಬಾಳುವ ಚಿನ್ನದ ಸರ, ಗೆಜ್ಜೆ ಕಳುವಾಗಿರುವುದು ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ಕಲ್ಯಾಣ ಮಂಟಪದ ಸುತ್ತಮುತ್ತಲಿನ ರಸ್ತೆಗಳಲ್ಲಿರುವ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಿ ಮಾಹಿತಿ ಕಲೆ ಹಾಕಿದರು. ಮಹಿಳೆಯನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ಕಳ್ಳತನ ಮಾಡಿರುವುದಾಗಿ ತಿಳಿಸಿದ್ದಾರೆ.

ಕದ್ದ ಚಿನ್ನಾಭರಣಗಳನ್ನು ಕಾಡುಬೀಸನಹಳ್ಳಿಯಲ್ಲಿರುವ ಬ್ಯಾಂಕ್‌ನಲ್ಲಿ ಪತಿ ಮತ್ತು ಆಕೆಯ ಹೆಸರಿನಲ್ಲಿ ಅಡಮಾನ ಇಟ್ಟು ಹಣ ಪಡೆಯಲಾಗಿತ್ತು. ಬಾಡಿಗೆ ಮನೆಯಲ್ಲಿ ಇಟ್ಟಿದ್ದ ಚಿನ್ನಾಭರಣವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ 3 ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ 3 ಪ್ರಕರಣ ದಾಖಲಾಗಿರುವುದು ಪತ್ತೆಯಾಗಿದೆ.

ಕೌಟುಂಬಿಕ ಕಲಹ: ಗುಂಡು ಹಾರಿಸಿ ಪತ್ನಿ ಹತ್ಯೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕೌಟುಂಬಿಕ ಕಲಹದ ಕಾರಣದಿಂದ ಪಿಸ್ತೂಲ್‌ನಿಂದ ಪತ್ನಿಯ ಮೇಲೆ ಗುಂಡು ಹಾರಿಸಿ ಕೊಲೆ ಮಾಡಿದ ಬಳಿಕ ಆರೋಪಿ ಪತಿ ಮಾಗಡಿ ರಸ್ತೆ ಪೊಲೀಸ್ ಠಾಣೆಗೆ ಬಂದು ಶರಣಾಗಿರುವ ಘಟನೆ ಮಂಗಳವಾರ ನಡೆದಿದೆ.

ಭುವನೇಶ್ವರಿ (39) ಕೊಲೆಯಾದ ಮಹಿಳೆ. ಬಾಲಮುರುಗನ್ (40) ಬಂಧಿತ ಆರೋಪಿ. ಮಂಗಳವಾರ ಸಂಜೆ 7 ಗಂಟೆಗೆ ಈ ಘಟನೆ ನಡೆದಿದ್ದು, ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಭುವನೇಶ್ವರಿ ಅವರು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಬಸವೇಶ್ವರನಗರ ಶಾಖೆಯ ಸಹಾಯಕ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಆರೋಪಿಯು ವೈಟ್‌ಫೀಲ್ಡ್‌ನಲ್ಲಿರುವ ಖಾಸಗಿ ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. 14 ವರ್ಷಗಳ ಹಿಂದೆ ಮದುವೆಯಾಗಿದ್ದ ದಂಪತಿಗೆ ಇಬ್ಬರು ಮಕ್ಕಳಿದ್ದು, ರಾಜಾಜಿನಗರದಲ್ಲಿ ವಾಸವಾಗಿದ್ದರು. ದಂಪತಿ ಮಧ್ಯೆ ಮನಸ್ತಾಪ ಉಂಟಾಗಿ ಒಂದೂವರೆ ವರ್ಷದಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಆರೋಪಿಯು ಪತ್ನಿಯ ಮೇಲೆ ಅನುಮಾನ ಪಡುತ್ತಿದ್ದ. ಇದರಿಂದ ನೊಂದಿದ್ದ ಅವರು ವಿಚ್ಛೇದನ ನೀಡುವಂತೆ ಕೇಳಿದ್ದರು. ಆದರೆ, ಇದಕ್ಕೆ ಆರೋಪಿ ಒಪ್ಪಿರಲಿಲ್ಲ. ನಂತರ ಭುವನೇಶ್ವರಿ ಅವರು ಆರು ತಿಂಗಳ ಹಿಂದೆ ಮಕ್ಕಳೊಂದಿಗೆ ಕೆ.ಪಿ. ಅಗ್ರಹಾರದ ಚೋಳರಪಾಳ್ಯದಲ್ಲಿ ಪ್ರತ್ಯೇಕವಾಗಿ ವಾಸವಾಗಿದ್ದರು’ ಎಂದು ವಿವರ ನೀಡಿದರು.

‘ವಾರದ ಹಿಂದೆ ಆರೋಪಿಗೆ ವಿಚ್ಛೇದನದ ನೋಟಿಸ್ ಕಳುಹಿಸಿದ್ದರು. ಇದರಿಂದ ಆಕ್ರೋಶಗೊಂಡಿದ್ದ ಆರೋಪಿ, ಪತ್ನಿ ಕಚೇರಿಯಿಂದ ಮನೆಗೆ ಬರುವಾಗ ಪಿಸ್ತೂಲ್‌ನಿಂದ ಗುಂಡು ಹಾರಿಸಿದ್ದಾನೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗೊಂಬೆ, ಆಲಂಕಾರಿಕ ವಸ್ತು, ಕೇಕ್‌ಗಳಿಗೆ ಹೆಚ್ಚಿದ ಬೇಡಿಕೆ

ಕ್ರಿಸ್‌ಮಸ್ ಹಬ್ಬಕ್ಕೆ ಖರೀದಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕ್ರಿಸ್‌ಮಸ್ ಹಬ್ಬವನ್ನು ಸಂಭ್ರಮ–ಸಡಗರದಿಂದ ಆಚರಿಸಲು ಕ್ರೈಸ್ತ ಸಮುದಾಯದವರು ಸಜ್ಜಾಗಿದ್ದಾರೆ. ಕ್ರಿಸ್‌ಮಸ್ ವೃಕ್ಷಗಳು, ಸ್ನೋಬಾಲ್, ವರ್ಣ ರಂಜಿತ ನಕ್ಷತ್ರ ಸೇರಿದಂತೆ ವಿವಿಧ ಆಲಂಕಾರಿಕ ವಸ್ತುಗಳು ಮಾರುಕಟ್ಟೆಗೆ ಮೆರುಗು ನೀಡುತ್ತಿದ್ದು, ಖರೀದಿ ಜೋರಾಗಿದೆ.

ಯೇಸುವಿನ ಜೀವನ ಬಿಂಬಿಸುವ ಗೋದಲಿಯ ಮಾದರಿ, ಬೃಹದಾಕಾರದ ನಕ್ಷತ್ರಗಳು, ಬಣ್ಣ ಬಣ್ಣದ ಬಲೂನುಗಳು, ಘಂಟೆಗಳು ಹಾಗೂ ಸೆಂಟಾಕ್ಲಾಸ್ ಪ್ರತಿರೂಪಗಳು ಗಮನ ಸೆಳೆಯುತ್ತಿವೆ. ಸೆಂಟಾಕ್ಲಾಸ್‌ನ ಸಿದ್ಧ ಉಡುಪು, ಟೋಪಿಗೆ ಬೇಡಿಕೆ ಹೆಚ್ಚಿದೆ.

‘ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ವರ್ಷ ವ್ಯಾಪಾರ ಚೆನ್ನಾಗಿದೆ. ಯೇಸು, ಮೇರಿಯ ವಿವಿಧ ಭಂಗಿಯ ಮೂರ್ತಿಗಳು ಗ್ರಾಹಕರನ್ನು ಸೆಳೆಯುತ್ತಿವೆ’ ಎಂದು ವ್ಯಾಪಾರಿಗಳು ತಿಳಿಸಿದರು.

‘ಮುಂಬೈ, ಗೋವಾ ಹಾಗೂ ತಮಿಳುನಾಡಿನಿಂದ ಕ್ರಿಸ್‌ಮಸ್ ವೃಕ್ಷಗಳು ಬೆಂಗಳೂರಿಗೆ ಪೂರೈಕೆ ಆಗುತ್ತವೆ. ತಯಾರಿಕಾ ಹಾಗೂ ಸಾಗಣೆ ವೆಚ್ಚ ಹೆಚ್ಚಳವಾಗಿದೆ. ಆದ್ದರಿಂದ ಈ ಬಾರಿ ದರ ಹೆಚ್ಚಿಸಲಾಗಿದೆ. ಎರಡು ಅಡಿಯ ಕ್ರಿಸ್‌ಮಸ್ ವೃಕ್ಷವೊಂದಕ್ಕೆ ₹500 ಇದ್ದರೆ, 15 ಅಡಿಯ ವೃಕ್ಷವನ್ನು ₹15 ಸಾವಿರದವರೆಗೆ ಮಾರಾಟ ಮಾಡಲಾಗುತ್ತಿದೆ. ಕೃತಕವಾಗಿ ನಿರ್ಮಿಸಿರುವ ಮನೆಯಲ್ಲಿ ಪುಟಾಣಿ ಯೇಸುವನ್ನು ನೋಡಲು ಬರುವ ಗೊಂಬೆಗಳ ಮಾದರಿಗೆ (ಕ್ರಿಪ್) ಹೆಚ್ಚು ಬೇಡಿಕೆ ಇದೆ’ ಎಂದು ಶಿವಾಜಿನಗರ ಮಾರುಕಟ್ಟೆಯ ವ್ಯಾಪಾರಿಗಳಾದ ಥಾಮಸ್, ಜಾನ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಶಿವಾಜಿನಗರದ ಸೇಂಟ್ ಮೇರಿ ಬೆಸಿಲಿಕಾ ಚರ್ಚ್‌ನ ಮುಂಭಾಗದಲ್ಲಿ 30ಕ್ಕೂ ಹೆಚ್ಚು ತಾತ್ಕಾಲಿಕ ಮಳಿಗೆಗಳನ್ನು ತೆರೆಯಲಾಗಿದ್ದು, ಇಲ್ಲಿ ಕ್ರಿಸ್‌ಮಸ್ ಹಬ್ಬಕ್ಕೆ ಬೇಕಾದ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ’ ಎಂದರು.

ಚಿಕ್ಕಪೇಟೆ, ಮಹಾತ್ಮ ಗಾಂಧಿ ರಸ್ತೆ, ಕೋರಮಂಗಲ, ಇಂದಿರಾನಗರ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಕ್ರಿಸ್‌ಮಸ್ ವೃಕ್ಷ, ನಕ್ಷತ್ರ, ದೀಪಗಳ ಅಲಂಕಾರಕ್ಕಾಗಿ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ. ನಗರದ ವಿವಿಧ ಮಾಲ್, ಬಟ್ಟೆ ಹಾಗೂ ಆಭರಣ ಮಳಿಗೆಗಳ ಮುಂಭಾಗದಲ್ಲಿ ಗ್ರಾಹಕರನ್ನು ಸೆಳೆಯಲು ಬೃಹತ್ ಕ್ರಿಸ್‌ಮಸ್ ವೃಕ್ಷ ಹಾಗೂ ಸಂತಾಕ್ಲಾಸ್ ಪ್ರದರ್ಶಿಸಲಾಗಿದೆ.

ಕೇಕ್‌ಗೆ ಹೆಚ್ಚಿದ ಬೇಡಿಕೆ: ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಕೇಕ್ ತಯಾರಿಕೆ ಹಾಗೂ ಮಾರಾಟ ಜೋರಾಗಿದೆ. ನಗರದ ವಿವಿಧ ಬೇಕರಿಗಳಲ್ಲಿ ಬಗೆ ಬಗೆಯ ಕೇಕ್‌ಗಳಿಗೆ ಬೇಡಿಕೆ ಹೆಚ್ಚಾಗಿದೆ.



ಶಿವಾಜಿನಗರದ ಸೇಂಟ್ ಮೇರಿ ಬೆಸಿಲಿಕಾ ಚರ್ಚ್‌ನ ಮುಂಭಾಗದ ಮಳಿಗೆಯೊಂದರಲ್ಲಿ ಯುವತಿಯೊಬ್ಬರು ಆಲಂಕಾರಿಕ ವಸ್ತುಗಳನ್ನು ಖರೀದಿಸಿದರು – ಚಿತ್ರ: ರಂಜು ಪಿ.

ಚರ್ಚ್‌ಗಳಿಗೆ ವಿದ್ಯುತ್ ದೀಪಾಲಂಕಾರ

ಐತಿಹಾಸಿಕ ಹಡ್ಸನ್ ಚರ್ಚ್, ರೈಸ್ ಮೆಮೋರಿಯಲ್ ಚರ್ಚ್, ಹೋಲಿ ಟ್ರಿನಿಟಿ ಚರ್ಚ್, ಸೇಂಟ್ ಮೇರಿ ಬೆಸಿಲಿಕಾ ಚರ್ಚ್ ಸೇರಿದಂತೆ ನಗರದ ಎಲ್ಲ ಚರ್ಚ್‌ಗಳು ಕ್ರಿಸ್‌ಮಸ್ ಆಚರಣೆಗೆ ಸಿದ್ಧಗೊಂಡಿವೆ. ಕ್ರೈಸ್ತರ ಮನೆಗಳ ಮೇಲೆ ನಕ್ಷತ್ರ ಮಾದರಿಯ ವಿದ್ಯುತ್ ದೀಪಾಲಂಕಾರ ಹಾಗೂ ವಿವಿಧ ಚರ್ಚ್‌ಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ.

ಕಾಯಂ ಹುದ್ದೆ ಭರ್ತಿಗೆ ಕ್ರಮ: ಡಾ.ಸುಧಾಕರ್

ಬಾಗಲೂರಿನಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಕಾಯಂ ಬೋಧಕ, ಬೋಧಕೇತರ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡುವುದರ ಜತೆಗೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ತಿಳಿಸಿದರು.

ಬಾಗಲೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, 'ಸರ್ಕಾರವು ಕೌಶಲ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಪದವಿ ವ್ಯಾಸಂಗ ಮಾಡುತ್ತಿರುವ ಬಾಲಕಿಯರಿಗೆ ₹30 ಸಾವಿರ ಪ್ರೋತ್ಸಾಹಧನ ನೀಡಲು ಅಜೀಂ ಪ್ರೇಮ್‌ಜೀ ಪ್ರತಿಷ್ಠಾನದ ನೆರವಿನೊಂದಿಗೆ ದೀಪಿಕಾ ಯೋಜನೆ ಆರಂಭಿಸಿದೆ. ಪ್ರತಿಭಾನ್ವಿತ ಮಕ್ಕಳು ವಿದೇಶಿ ಶಿಕ್ಷಣ ಪಡೆಯಲು ವಿದೇಶಿ ವಿಶ್ವವಿದ್ಯಾಲಯಗಳ ಜತೆಗೂ ಒಡಂಬಡಿಕೆ ಮಾಡಿಕೊಂಡಿದ್ದೇವೆ' ಎಂದರು.

'ಸ್ನಾತಕೋತ್ತರ ಕೇಂದ್ರಕ್ಕೆ ಅಗತ್ಯ ಜಾಗ ಒದಗಿಸಬೇಕು. ಇದರಿಂದ ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗೂ ಗುಣಮಟ್ಟದ ಉನ್ನತ ಶಿಕ್ಷಣ ನೀಡಲು ಸೌಲಭ್ಯ ನೀಡಲು ಸಹಕಾರಿಯಾಗಲಿದೆ' ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, 'ಬಾಗಲೂರು ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಸಕ್ತ ವರ್ಷ ಎಂ.ಕಾಂ ಮತ್ತು ಎಂಸಿಎ ಕೋರ್ಸ್ ಆರಂಭವಾಗಿದ್ದು, ಮುಂದಿನ ವರ್ಷದಿಂದ ಬಿಸಿಎ, ಬಿಬಿಎ, ಬಿ.ಕಾಂ ಪ್ರವೇಶಕ್ಕೆ ಅವಕಾಶ ಸಿಗಲಿದೆ. ಕೇಂದ್ರಕ್ಕೆ ಅಗತ್ಯವಿರುವ ಜಮೀನು ಮತ್ತು ಮೂಲಸೌಕರ್ಯ ಒದಗಿಸಲಾಗುತ್ತದೆ' ಎಂದು ಹೇಳಿದರು.

ಕುಲಪತಿ ಬಿ. ರಮೇಶ್ ಮಾತನಾಡಿ, 'ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಶಿಕ್ಷಣ ಒದಗಿಸಲು ಸ್ನಾತಕೋತ್ತರ ಕೇಂದ್ರ ಮಹತ್ವದ ಹೆಜ್ಜೆಯಾಗಿದೆ. ವಿ.ವಿಯಲ್ಲಿ 85 ವೃತ್ತಿಪರ ಪದವಿ ಕೋರ್ಸ್ ಆರಂಭಿಸಿದ್ದು, ಮುಂದಿನ ದಿನಗಳಲ್ಲಿ ಕೋರ್ಸ್‌ಗಳನ್ನು ಹೆಚ್ಚಿಸಲಾಗುವುದು' ಎಂದರು.

ಕುಲಸಚಿವರಾದ ಎ.ನವೀನ್ ಜೋಸೆಫ್ (ಆಡಳಿತ), ರಮೇಶ್ ಬಿ. ಕುಡೇನಟ್ಟಿ (ಮೌಲ್ಯಮಾಪನ), ವಿತ್ತಾಧಿಕಾರಿ ಎಂ.ವಿ. ವಿಜಯಲಕ್ಷ್ಮೀ, ಬಾಗಲೂರು ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ರಿತಿಕಾ ಸಿನ್ಹಾ, ಬಾಗಲೂರು ಗ್ರಾ.ಪಂ ಅಧ್ಯಕ್ಷ ಎ. ಕೆಂಪೇಗೌಡ ಮತ್ತಿತರರು ಉಪಸ್ಥಿತರಿದ್ದರು.



ಮನಮೋಹನಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ ಬಾಗಲೂರಿನಲ್ಲಿ ಆರಂಭಿಸಿರುವ ಸ್ನಾತಕೋತ್ತರ ಕೇಂದ್ರವನ್ನು ಉದ್ಘಾಟಿಸಲಾಯಿತು. ಸಚಿವರಾದ ಡಾ.ಎಂ.ಸಿ.ಸುಧಾಕರ್, ಕೃಷ್ಣಬೈರೇಗೌಡ, ಕುಲಪತಿ ಬಿ.ರಮೇಶ್ ಮತ್ತಿತರರು ಉಪಸ್ಥಿತರಿದ್ದರು



ರವೀಂದ್ರ ಕಲಾಕ್ಷೇತ್ರದಲ್ಲಿ ಲೀಲಾ ನಾಟ್ಯ ಕಲಾವೃಂದವು ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರುಚಿತಾ ಶಾಸ್ತ್ರಿ ಭರತನಾಟ್ಯ ಪ್ರಸ್ತುತಪಡಿಸಿದರು ಚಿತ್ರ: ರಂಜು ಪಿ

10 ಸಾವಿರ ದಿನಸಿ ಕಿಟ್ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಲಕೇಶಿನಗರ ವಿಧಾನ ಸಭಾ ಕ್ಷೇತ್ರದ ಶಾಸಕ ಎ.ಸಿ. ಶ್ರೀನಿವಾಸ್ ಅವರು ಕ್ರಿಸ್‌ಮಸ್ ಮತ್ತು ಸಂಕ್ರಾಂತಿ ಹಬ್ಬದ ಪ್ರಯುಕ್ತ 10 ಸಾವಿರ ಕುಟುಂಬಗಳಿಗೆ ಪೆರಿಯಾರ್ ನಗರದ ಪುಟ್ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ದಿನಸಿ ಕಿಟ್‌ಗಳನ್ನು ವಿತರಿಸಿದರು.

'ಕೂಲಿ ಕಾರ್ಮಿಕರು ಮತ್ತು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ನೆಮ್ಮದಿಯಿಂದ ಹಬ್ಬ ಆಚರಿಸಬೇಕು ಎಂಬುದು ಈ ಕಾರ್ಯಕ್ರಮದ ಉದ್ದೇಶ. ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಕ್ಷೇತ್ರದ ಅಭಿವೃದ್ಧಿಗಾಗಿ ₹ 800 ಕೋಟಿ ವೆಚ್ಚದ ಅನೇಕ ಯೋಜನೆಗಳು ಪ್ರಗತಿಯಲ್ಲಿವೆ' ಎಂದು ಶ್ರೀನಿವಾಸ್ ಮಾಹಿತಿ ನೀಡಿದರು.

ಹೋಲಿಗೋಸ್ಟ್ ಚರ್ಚ್‌ನ ಫಾದರ್ ಚಲುವಮುತ್ತು ಮಾತನಾಡಿ, 'ಜಾತಿ, ಧರ್ಮ, ಬಡವ, ಶ್ರೀಮಂತ ಎಂಬ ಸಾಮಾಜಿಕ ಕಟ್ಟಳೆಗಳನ್ನು ಮೀರಿ ಎಲ್ಲರೂ ಸೌಹಾರ್ದದಿಂದ ಜೀವನ ನಡೆಸಬೇಕು. ಹಸಿದವರಿಗೆ ಅನ್ನ, ನೀರು, ಅಕ್ಷರ ಮತ್ತು ಸಂಸ್ಕಾರ ನೀಡುವವರೇ ನಿಜವಾದ ಜನನಾಯಕರು' ಎಂದರು.

ಕಾಂಗ್ರೆಸ್ ಮುಖಂಡರಾದ ಅಬ್ದುಲ್ ವಾಜಿದ್, ಪ್ರೊ. ಎಂ.ವಿ. ರಾಜೀವ್ ಗೌಡ, ಜಾಕೀರ್, ಎ.ಸಿ. ಹರಿಪ್ರಸಾದ್, ಮುಜಾಹಿದ್ ಮತ್ತಿತರರು ಪಾಲ್ಗೊಂಡಿದ್ದರು.



ಪುಲಕೇಶಿ ನಗರದ ಶಾಸಕ ಎ.ಸಿ. ಶ್ರೀನಿವಾಸ್ ಅವರು ಬಡ ಕುಟುಂಬಗಳಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು

ಹೊಸ ವರ್ಷಕ್ಕೆ ವಂಡರ್‌ಲಾ ಕೊಡುಗೆ

ಪ್ರಜಾವಾಣಿ ವಾರ್ತೆ

ರಾಮನಗರ: ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಸಲುವಾಗಿ ಮನರಂಜನಾ ತಾಣವಾದ ವಂಡರ್‌ಲಾ ತನ್ನ ಪಾರ್ಕ್ ಮತ್ತು ರೆಸಾರ್ಟ್‌ಗಳಲ್ಲಿ ವಿಶೇಷ ಕೊಡುಗೆ ನೀಡುತ್ತಿದೆ. ಡಿ.20 ರಿಂದ ಜ.4ರವರೆಗೆ 16 ದಿನ ಕ್ರಿಸ್‌ಮಸ್ ಟ್ರೀ ಲೈಟಿಂಗ್‌ನೊಂದಿಗೆ ಆರಂಭವಾಗುವ ಗ್ರ್ಯಾಂಡ್ ಉತ್ಸವದಲ್ಲಿ ಲೈವ್ ಮನರಂಜನೆ, ಡಿ.ಜೆ ನೈಟ್ಸ್, ಪಟಾಕಿಗಳ ಪ್ರದರ್ಶನ ನಡೆಯಲಿವೆ.

ಈ ಉತ್ಸವಗಳಲ್ಲಿ ಸಂಗೀತ, ನೃತ್ಯ, ಸಾಂಸ್ಕೃತಿಕ ಪ್ರದರ್ಶನ ಮತ್ತು ಉದ್ಯಾನವನದ ಸಿಗ್ನೇಚರ್ ರೈಡ್ ಮತ್ತು ಆಕರ್ಷಣೆ ಜೊತೆಗೆ ಕ್ರಿಸ್‌ಮಸ್ ವಿಶೇಷ ಕೊಡುಗೆ ಇರಲಿವೆ.

ವೇವ್ ಪೂಲ್‌ನಲ್ಲಿ ಡಿ.ಜೆ. ನೈಟ್ಸ್, ಹೈ-ಎನರ್ಜಿ ಬ್ಯಾಂಡ್ ಶೋ ಮತ್ತು ಆಕರ್ಷಕ ಜುಂಬಾ ಸೇರಿದಂತೆ ವೈವಿಧ್ಯಮಯ ಮನರಂಜನೆ ಸಿಗಲಿದೆ. 16 ದಿನವೂ ಪಾರ್ಕಿನಲ್ಲಿ ಬ್ಯಾಂಡ್ ಮೆರವಣಿಗೆ ಇರುತ್ತದೆ. ಡಿ. 25 ಮತ್ತು 27-28ರವರೆಗೆ ಸ್ಟಿಲ್ಟ್ ವಾಕರ್ಸ್ ಮತ್ತು ಚೈನೀಸ್ ಲಯನ್ ಡಾನ್ಸ್ ಪ್ರದರ್ಶನ ಇರಲಿದೆ. ಡಿ. 26ರಿಂದ ಜ. 1ರವರೆಗೆ ಜಗ್ಲಿಂಗ್ ಪ್ರದರ್ಶನ, ಮ್ಯಾಜಿಕ್ ಹಾಗೂ ಯುನಿಸೈಕಲ್ ಪ್ರದರ್ಶನಗಳಿರಲಿವೆ.

ಉದ್ಯಾನದಲ್ಲಿ ಆಕರ್ಷಕ ಕ್ರಿಸ್‌ಮಸ್ ಅಲಂಕಾರ, ಬೆಳಕು ಮತ್ತು ವಿಶೇಷ ಸಾಂಟಾ ಸ್ಟ್ರೀಟ್ ಪ್ರದರ್ಶನ ಇರಲಿವೆ. ಡಿ. 31ರಂದು ಹೊಸ ವರ್ಷದ ಮುನ್ನಾ ದಿನ, ಪಟಾಕಿ ಪ್ರದರ್ಶನ ಉತ್ಸವ ಕೊನೆಗೊಳ್ಳುತ್ತವೆ ಎಂದು ವಂಡರ್‌ಲಾ ಹಾಲಿಡೇಸ್ ಲಿಮಿಟೆಡ್‌ನ ಚೀಫ್ ಆಪರೇಟಿಂಗ್ ಆಫೀಸರ್ ಧೀರನ್ ಚೌಧರಿ ತಿಳಿಸಿದ್ದಾರೆ. ಜ. 4ರವರೆಗೆ ಆನ್‌ಲೈನ್‌ನಲ್ಲಿ ಸೀಮಿತ ಅವಧಿಯ ಕ್ರಿಸ್‌ಮಸ್ ಪಾಸ್ ಕೊಡುಗೆಯಾಗಿ ನೀಡುತ್ತಿದೆ. ಈ ಪಾಸ್ ಜ. 4ರವರೆಗೆ ಮಾನ್ಯವಾಗಿರುತ್ತವೆ. ಆನ್‌ಲೈನ್ ಬುಕ್ಕಿಂಗ್ ಪೋರ್ಟಲ್ ಬಳಸಿ ಈ ಕೊಡುಗೆ ಪಡೆಯಬಹುದು.

ವಿವರಗಳಿಗೆ https://bookings.wonderla.com ಭೇಟಿ ನೀಡಬಹುದು. ಸಂಪರ್ಕ ಸಂಖ್ಯೆ: 80372 30333, +91 9945557777

ರಾಷ್ಟ್ರೀಯ ರೈತ ದಿನ ಆಚರಣೆ

ತೋಟಗಾರಿಕಾ ಸಂಶೋಧನಾ ಸಂಸ್ಥೆಯಲ್ಲಿ ಆಯೋಜನೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಇಲ್ಲಿನ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಐಐಹೆಚ್‌ಆರ್) ಆವರಣದಲ್ಲಿ ರೈತ ದಿನ ಆಚರಿಸಲಾಯಿತು.

ಬೆಂಗಳೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಮಾಜಿ ಕುಲಪತಿ ನಾರಾಯಣಗೌಡ ಮಾತನಾಡಿ, 'ಮಣ್ಣು ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ವಿವೇಚನೆಯಿಂದ ಬಳಸಬೇಕು. ಮಣ್ಣಿನಲ್ಲಿ ಸಾವಯವ ಇಂಗಾಲದ ಮಟ್ಟವನ್ನು 0.75 ಪ್ರತಿಶತಕ್ಕಿಂತ ಹೆಚ್ಚು ಕಾಪಾಡಿಕೊಳ್ಳಬೇಕು. ಕೃಷಿ ತ್ಯಾಜ್ಯ ಮತ್ತು ಕೀಟನಾಶಕಗಳು ಸೇರಿದಂತೆ ಕೃಷಿ ರಾಸಾಯನಿಕಗಳನ್ನು ಮಿತವಾಗಿ ಬಳಸುವ ಮೂಲಕ ಅದನ್ನು ಸುಸ್ಥಿರವಾಗಿ ನಿರ್ವಹಿಸಬೇಕು' ಎಂದು ಹೇಳಿದರು.

ಐಐಎಚ್‌ಆರ್ ಅಭಿವೃದ್ಧಿಪಡಿಸಿದ ತಳಿಗಳು ಮತ್ತು ತಂತ್ರಜ್ಞಾನಗಳು ದೇಶದ ಆರ್ಥಿಕತೆಗೆ ಸಹಾಯಕವಾಗಲಿವೆ. ಸ್ವಾತಂತ್ರ್ಯದ ಸಮಯದಲ್ಲಿ 25 ದಶಲಕ್ಷ ಟನ್‌ಗಳಷ್ಟಿದ್ದ ತೋಟಗಾರಿಕಾ ಉತ್ಪನ್ನಗಳು ಇಂದು, ವಾರ್ಷಿಕ 365 ದಶಲಕ್ಷ ಟನ್‌ಗಳಷ್ಟು ಉತ್ಪಾದನೆಯಾಗುತ್ತಿವೆ ಎಂದರು.

ರೈತರಿಗೆ ನವೀನ ತಂತ್ರಜ್ಞಾನಗಳು ಮತ್ತು ಸುಧಾರಿತ ತಳಿಗಳನ್ನು ಒದಗಿಸುವ ಮೂಲಕ ಅವರನ್ನು ಸಬಲೀಕರಣಗೊಳಿಸಬೇಕು ಎಂದು ಸಂಸ್ಥೆಯ ನಿರ್ದೇಶಕ ಡಾ. ತುಷಾರ್ ಕಾಂತಿ ಬೆಹೆರಾ ವಿಜ್ಞಾನಿಗಳಿಗೆ ಸಲಹೆ ನೀಡಿದರು.

ರೈತರು ಮತ್ತು ವಿಜ್ಞಾನಿಗಳೊಂದಿಗೆ ಸಂವಾದ ನಡೆಯಿತು. ಹಣ್ಣು ಮತ್ತು ತರಕಾರಿ ಬೆಳೆಗಳಲ್ಲಿ ಹೊಸ ತಳಿಗಳ ಸಸಿಗಳು ಮತ್ತು ಬೀಜಗಳನ್ನು ರೈತರಿಗೆ ವಿತರಣೆ ಮಾಡಲಾಯಿತು.



ರೈತ ದಿನಾಚರಣೆಯಲ್ಲಿ ರೈತರನ್ನು ಸನ್ಮಾನಿಸಲಾಯಿತು

ಮೆಟ್ರೊ ಪರಿಷ್ಕೃತ ವೆಚ್ಚ: ಒಪ್ಪಿಗೆಗೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೆಟ್ರೋ 2ನೇ ಹಂತದ ಪರಿಷ್ಕೃತ ಅಂದಾಜು ಪಟ್ಟಿಗೆ ಒಪ್ಪಿಗೆ, ಮೆಟ್ರೋ 3ಎ ಹಂತಕ್ಕೆ ಅನುಮೋದನೆ, ಆರ್‌ಆರ್‌ಟಿಎಸ್ ಯೋಜನೆಗೆ ಬೆಂಬಲ, ಮಿಟ್ಟಗಾನಹಳ್ಳಿ ಕೆರೆ ಬಳಿ ವಿವಿಧಹಂತದ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಅನುಮತಿ ಸೇರಿದಂತೆ ಬೆಂಗಳೂರಿನ ಅಭಿವೃದ್ಧಿಗೆ ಅಗತ್ಯವಾಗಿರುವ ಯೋಜನೆಗಳಿಗೆ ಅನುಮತಿ ಹಾಗೂ ಬೆಂಬಲ ನೀಡುವಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಸಚಿವರಿಗೆ ಮನವಿ ಮಾಡಿದರು.

ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಖಟ್ಟರ್ ಅವರನ್ನು ಮಂಗಳವಾರ ಇಲ್ಲಿ ಭೇಟಿ ಮಾಡಿದ ಅವರು ರಾಜ್ಯ ರಾಜಧಾನಿಗೆ ಅಗತ್ಯವಾಗಿರುವ ಯೋಜನೆಗಳ ಬಗ್ಗೆ ಮನವಿ ಸಲ್ಲಿಸಿದರು.

‘ಬೆಂಗಳೂರು ದೇಶದ ಮಹಾನಗರಗಳಲ್ಲಿ ಒಂದಾಗಿದ್ದು, ಇಲ್ಲಿ ಅನೇಕ ನಗರಾಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಹೀಗಾಗಿ, ರಾಜ್ಯದ ಪ್ರಸ್ತಾವಗಳಿಗೆ ಶೀಘ್ರ ಅನುಮತಿ ನೀಡಬೇಕು’ ಎಂದು ಅವರು ಕೋರಿದರು.

‘ಮೆಟ್ರೋ 2ನೇ ಹಂತದ ಯೋಜನೆಯ ಪರಿಷ್ಕೃತ ವೆಚ್ಚ ₹26,405 ಕೋಟಿಯಿಂದ ₹40,425 ಕೋಟಿಗೆ ಏರಿಕೆಯಾಗಿದ್ದು, ರಾಜ್ಯ ಸರ್ಕಾರವು ಜೂನ್‌ನಲ್ಲಿ ಅನುಮೋದನೆ ನೀಡಿದೆ. ಈ ಪ್ರಸ್ತಾವವನ್ನು ಸಚಿವಾಲಯಕ್ಕೆ ಜೂನ್‌ನಲ್ಲೇ ಕಳುಹಿಸಲಾಗಿದ್ದು, ಇಲ್ಲಿಯವರೆಗೆ ಒಪ್ಪಿಗೆ ಸಿಕ್ಕಿಲ್ಲ’ ಎಂದು ಅವರು ಸಚಿವರ ಗಮನಕ್ಕೆ ತಂದರು.

‘ಮೆಟ್ರೋ 3ಎ ಹಂತದ ಯೋಜನೆ ಸರ್ಜಾಪುರದಿಂದ ಹೆಬ್ಬಾಳದವರೆಗೆ 36.59 ಕಿ.ಮೀ ಉದ್ದದ ಮಾರ್ಗದಲ್ಲಿ 28 ನಿಲ್ದಾಣಗಳನ್ನು ಒಳಗೊಂಡಿದೆ. ಇದರಲ್ಲಿ 22.14 ಕಿ.ಮೀ ಮೇಲ್ಸೇತುವೆ ಹಾಗೂ 14.45 ಕಿ.ಮೀ ಸುರಂಗ ಪಥದಲ್ಲಿ ಸಾಗಲಿದ್ದು, ಈ ಯೋಜನೆಗೆ ₹28,405 ಕೋಟಿ ಅಂದಾಜು ಮಾಡಲಾಗಿದೆ. ಈ ಯೋಜನೆಗೆ ಕರ್ನಾಟಕ ಸರ್ಕಾರ ಜನವರಿಯಲ್ಲಿ ಒಪ್ಪಿಗೆ ನೀಡಿ ಕೇಂದ್ರಕ್ಕೆ ಕಳುಹಿಸಿದೆ. ಈ ಪ್ರಸ್ತಾವನೆ 10 ತಿಂಗಳಿಂದ ನನೆಗುದಿಗೆ ಬಿದ್ದಿದ್ದು, ಆದಷ್ಟು ಬೇಗ ಒಪ್ಪಿಗೆ ನೀಡಬೇಕು’ ಎಂದು ಅವರು ಮನವಿ ಮಾಡಿದ್ದಾರೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಜಯದೇವ ಸಂಸ್ಥೆ: ರಕ್ತ ಪರೀಕ್ಷಾ ವಿಶ್ಲೇಷಕ ಯಂತ್ರ ಅಳವಡಿಕೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಶೀಘ್ರ ಹಾಗೂ ನಿಖರವಾಗಿ ಪರೀಕ್ಷಾ ವರದಿ ಒದಗಿಸಲು ರಕ್ತ ಪರೀಕ್ಷಾ ವಿಶ್ಲೇಷಕ ಯಂತ್ರವನ್ನು (ರೋಶ್ ಕೋಬಾಸ್ ಪ್ರೊ) ಅಳವಡಿಸಿಕೊಂಡಿದೆ.

‘ಸಂಸ್ಥೆಯಲ್ಲಿ ಪ್ರತಿನಿತ್ಯ 1,800ರಿಂದ 2,000 ಜನ ತಪಾಸಣೆಗೆ ಒಳಪಡುತ್ತಿದ್ದಾರೆ. ಸಂಸ್ಥೆಯ ಜೀವರಸಾಯನ ವಿಜ್ಞಾನ ವಿಭಾಗದಲ್ಲಿ ಈ ಯಂತ್ರ ಕಾರ್ಯನಿರ್ವಹಿಸಲಿದೆ. ರಕ್ತ ಪರೀಕ್ಷಾ ವರದಿಯನ್ನು ಆದಷ್ಟು ಶೀಘ್ರ ಒದಗಿಸಲು ಈ ಯಂತ್ರ ಸಹಕಾರಿಯಾಗಲಿದೆ. ಯಂತ್ರದ ಸಹಾಯದಿಂದ ಅನೇಕ ರಕ್ತದ ಮಾದರಿಗಳ ಪರೀಕ್ಷೆಯನ್ನು ಏಕಕಾಲದಲ್ಲಿ ನಡೆಸಬಹುದಾಗಿದೆ’ ಎಂದು ಸಂಸ್ಥೆಯ ನಿರ್ದೇಶಕ ಡಾ.ಬಿ.ದಿನೇಶ್ ತಿಳಿಸಿದ್ದಾರೆ.

‘ಪ್ರಯೋಗಾಲಯದಲ್ಲಿ ಪರೀಕ್ಷಾ ಸಾಮರ್ಥ್ಯವನ್ನು ದ್ವಿಗುಣಗೊಳಿಸಲು ಈ ಯಂತ್ರ ಸಹಕಾರಿಯಾಗಲಿದೆ. ಪರೀಕ್ಷಾ ವರದಿ ಶೀಘ್ರ ವೈದ್ಯರ ಕೈಸೇರಿದಲ್ಲಿ ಆದಷ್ಟು ಬೇಗ ತುರ್ತು ಚಿಕಿತ್ಸೆ ಒದಗಿಸಿ, ರೋಗಿಯನ್ನು ಪ್ರಾಣಾಪಾಯದಿಂದ ಪಾರು ಮಾಡಬಹುದು’ ಎಂದು ಹೇಳಿದ್ದಾರೆ.

ಮನೆಯ ಒಳಾಂಗಣವನ್ನು ತಂಪಾಗಿಡಬಲ್ಲ ಹೊಸ ತಂತ್ರಜ್ಞಾನವೊಂದು ಇದೀಗ ಸುದ್ದಿ ಮಾಡಿದೆ



‘ಮೋಚಿ’ಯ ಮೋಡಿ

• ಕ್ಷಮಾ ವಿ. ಭಾನುಪ್ರಕಾಶ್

ಚಳಿಯೋ ಸೆಖೆಯೋ, ಹಗಲಲ್ಲೂ ವಿದ್ಯುದ್ದೀಪಗಳನ್ನು, ಫ್ಯಾನ್, ಎ.ಸಿ., ಹೀಟರ್‌ಗಳನ್ನು ಉಪಯೋಗಿಸುವ ಪರಿಸ್ಥಿತಿ ಬೃಹತ್ ನಗರಗಳಲ್ಲಂತೂ ಬಂದುಬಿಟ್ಟಿದೆ. ವಿದ್ಯುತ್ ಉಪಕರಣಗಳ ಮೇಲೆಯೇ ಅವಲಂಬಿತರಾಗಿ ಮನೆಯೊಳಗಿನ, ಆಫೀಸಿನೊಳಗಿನ ತಾಪಮಾನ ನಿರ್ವಹಿಸುವ ಪರಿಸ್ಥಿತಿ ಖಂಡಿತ ಪರಿಸರಸ್ನೇಹಿಯಲ್ಲ.

ಪರಿಸರದೆಡೆಗಿನ ಜವಾಬ್ದಾರಿ ಮತ್ತು ಸಾಮಾನ್ಯಜ್ಞಾನ ಬಳಸಿ ಕಟ್ಟಡ ವಿನ್ಯಾಸಗೊಳಿಸಿದರೂ ಸಾಕು, ಕಟ್ಟಡದೊಳಗೆ ಬೆಳಕು-ಗಾಳಿ-ಬಿಸಿಲು ಬರುವ ಹಾಗೆ, ಬಂದು ಉಳಿಯುವ ಹಾಗೆ ಮಾಡಬಹುದು ಎಂಬುದನ್ನು ವಾಸ್ತುಶಿಲ್ಪಿಗಳು ಖಂಡಿತವಾಗಿ ಒಪ್ಪುತ್ತಾರೆ. ಹಳ್ಳಿಗಳ ಹಳೇಮನೆಗಳನ್ನು ಗಮನಿಸಿದರೆ ನಿಮಗಿದು ಸುಲಭವಾಗಿ ಗೋಚರಿಸುತ್ತದೆ. ಹೊರಗೆ ಬಿಸಿಲೇ ಇರಲಿ, ಚಳಿಯೇ ಇರಲಿ, ಮನೆಯೊಳಗೆ ಮಾತ್ರ ಹಿತವಾದ ತಾಪಮಾನ! ಹೊರಗಿನ ಚಳಿ ಅಥವಾ ಬೇಗೆ, ಮನೆಯೊಳಗೆ ತಲುಪದಂತೆ ದಪ್ಪವಾದ ಮಣ್ಣಿನ ಗೋಡೆಗಳು, ಗೋಡೆಯ ಮೇಲ್ತುದಿಯಲ್ಲಿ ಬಿಸಿಗಾಳಿ ಹೊರಹೋಗಿ ತಂಪುಗಾಳಿ ಒಳಬರಲು ಸಣ್ಣ ಕಿಂಡಿಗಳು, ಭೌಗೋಳಿಕವಾಗಿ ಸೂಕ್ತವೆನಿಸುವಂತಹ ಹೆಂಚು ಅಥವಾ ಸ್ಥಳೀಯ ವಸ್ತುಗಳ ಬಳಕೆಯಿಂದ ಮಾಡಿದ ತಾರಸಿ - ಹೀಗೆ ಅನುಭವವೇದ್ಯ ಸಂಗತಿಗಳೇ; ನಿಸರ್ಗದೊಡನೆ ಬದುಕನ್ನು ಸರಳವಾಗಿ ನಡೆಸಲು ಸಾಧ್ಯವಾಗಿಸುತ್ತಿತ್ತು.

ಬೆಂಗಳೂರಿನಂತಹ ಜನನಿಬಿಡ ಜಾಗದಲ್ಲಿ ಕಟ್ಟಲಾಗುವ ಗಗನಚುಂಬಿ ಕಟ್ಟಡಗಳಲ್ಲಿ ಇಷ್ಟು ದಪ್ಪದ ಗೋಡೆಗಳಾಗಲೀ ಕಿಂಡಿಗಳಾಗಲೀ ಇರುವುದು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿ. ಬೃಹತ್ ಆಫೀಸು ಕಟ್ಟಡಗಳಲ್ಲಿ ಗಾಜಿನ ಗೋಡೆಗಳೇ! ಗಾಜು, ಬೆಳಕನ್ನು ಮಾತ್ರ ಒಳಬಿಡುತ್ತದೆಯೇ? ಜೊತೆಗೆ ಬಿಸಿಲಿನ ತಾಪವನ್ನೂ ಉಚಿತವಾಗಿ ಒಳಗೆ ಕಳುಹಿಸುತ್ತದೆ! ಚಳಿಗಾಲದ ಬೆಳಿಗ್ಗೆ ಮಾತ್ರ ಅದು ಹಿತವೆನ್ನಿಸಬಹುದು, ಆದರೆ, ಚಳಿಗಾಲದ ಮಧ್ಯಾಹ್ನ ಮತ್ತು ಬೇಸಿಗೆ ಕಾಲದಲ್ಲಿ ಪಾರದರ್ಶಕ ಗಾಜಿನ ಮೂಲಕ ಹರಿದುಬರುವ ಬಿಸಿಲನ್ನು ತಾಳಲು ಸಾಧ್ಯವೇ? ಇದೇ ಕಾರಣದಿಂದಾಗಿಯೇ ಗಾಜಿನ ಮೇಲೆ ಶಾಖವನ್ನು ಪ್ರತಿಫಲಿಸಿ ಹೊರಗಿರಿಸುವಂತಹ ಪದರವನ್ನು ಲೇಪಿಸಲಾಗುತ್ತದೆ; ಇಂತಹ ಗಾಜಿನಗೋಡೆಗಳಿಗೆ ಅಂಟಿಸುವ ‘ಬಿಸಿಲು ನಿರೋಧಕ’ ಪದರಗಳು - ಕಾರುಗಳ ಕಿಟಕಿಯ ಗಾಜಿಗೆ ಅಂಟಿಸುವ ಪಾಲಿಮರ್‌ಗಳ ಪದರದಂತಿರಬಹುದು ಅಥವಾ ಶಾಖನಿರೋಧಕ ರಾಸಾಯನಿಕಗಳ, ಲೋಹಗಳ ಅನೇಕ ಪದರಗಳ ಲೇಪನವಿರಬಹುದು – ಇವೆಲ್ಲವೂ ಈಗಾಗಲೇ ಬಳಕೆಯಲ್ಲಿದ್ದು, ತಕ್ಕಮಟ್ಟಿಗೆ ಬಿಸಿಲಿನ ತಾಪವನ್ನೂ ಕಟ್ಟಡದ ಹೊರಗೇ ಇರಿಸಲು ಯಶಸ್ವಿಯಾಗಿವೆ. ಆದರೆ, ಇವುಗಳಲ್ಲಿ ಹಲವು ವಸ್ತುಗಳು, ಗಾಜಿನ ಪಾರದರ್ಶಕತೆಯನ್ನು ಕಡಿಮೆಗೊಳಿಸುತ್ತವೆ. ಕಾರಿನ ಕಿಟಕಿಗಳಿಗೆ ಸೌರ ನಿಯಂತ್ರಕ ಪದರವನ್ನು ಲೇಪನ ಮಾಡಿದಾಗ, ಹೊರಗಿನ ಬಿಸಿಲೇನೋ ಕಡಿಮೆಯಾಗುತ್ತದೆ; ಆದರೆ ಹೊರಗಿನ ದೃಶ್ಯವೂ ಅಷ್ಟೇನೂ ನಿಖರವಾಗಿ ಕಾಣುವುದಿಲ್ಲ, ಅಲ್ಲವೇ? ಇನ್ನು, ಗಾಜು ಪಾರದರ್ಶಕವಾಗಿಯೇ ಇರಬೇಕು ಮತ್ತು ಶಾಖವನ್ನೂ ಹೊರಗಿಡಬೇಕೆಂದರೆ, ಅನೇಕ ಪದರಗಳ ದಪ್ಪಗಿನ ಗಾಜೇ ಬೇಕಾಗುತ್ತದೆ; ತೆಳುಗಾಜಿನ ಪಾರದರ್ಶಕತೆಯಲ್ಲಿ ಕೊಂಚವೂ ಕಡಿಮೆಯಾಗದಂತೆ, ಆದರೆ ಶಾಖವನ್ನೂ ಸಂಪೂರ್ಣವಾಗಿ ಹೊರಗಿಡಲು ಸಾಧ್ಯಮಾಡುವ ಹೊಸ ವಸ್ತುವೊಂದು ತಯಾರಾಗಿದೆ! ಅದೇ ‘ಮೋಚಿ’! ‘Mesoporous Optically Clear Heat Insulator’ ಎಂಬ ಉದ್ದನೆಯ ಹೆಸರಿನ ಹ್ರಸ್ವರೂಪವಾದ ‘MOCHI’ ಎಂಬ ಈ ಪಾರದರ್ಶಕ ವಸ್ತು; ಇದು ಕೇವಲ 5 ಮಿಲಿಮೀಟರ್ ದಪ್ಪವಿರುತ್ತದೆ ಎನ್ನುತ್ತಾರೆ. ಇದನ್ನು ತಯಾರಿಸಿದ ಸಂಶೋಧಕರು. ಕೊಲೊರಾಡೋ ಬೌಲ್ಡರ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ತಮ್ಮ ಇತ್ತೀಚಿನ ಪ್ರಯೋಗಗಳ ಮೊತ್ತವಾಗಿ ತಯಾರಿಸಲಾದ ‘ಮೋಚಿ’ಯಲ್ಲಿ ಶೇ 90ರಷ್ಟು ಗಾಳಿಯೇ ಇದೆಯಂತೆ! ಸಿಲಿಕಾನ್ ಜೆಲ್ ಆಧಾರಿತ ವಸ್ತುವಾದ ‘ಮೋಚಿ’, ತನ್ನೊಳಗೆ ಸೆರೆಯಾಗಿರುವ ಗಾಳಿಯ ಅಣುಗಳನ್ನು ವೇಗವಾಗಿ ಚಲಿಸದಂತೆ ತಡೆಯಲು, ಸೂಕ್ಷ್ಮವಾದ ರಂಧ್ರಗಳ ಜಾಲವನ್ನು ಹೊಂದಿದೆ.

> ಘನ, ದ್ರವ ಅಥವಾ ಅನಿಲ ರೂಪದಲ್ಲಿರುವ ಯಾವುದೇ ವಸ್ತುವಾಗಲಿ ಅದರೊಳಗಿನ ಅಣುಗಳು ಸದಾ ಚಲನೆಯಲ್ಲಿರುತ್ತವೆ

ಯಾವುದೇ ವಸ್ತುವಾಗಲೀ - ಅದು ಘನ, ದ್ರವ ಅಥವಾ ಅನಿಲ ರೂಪದಲ್ಲಿರಲಿ - ಅದರೊಳಗಿನ ಅಣುಗಳು ಸದಾ ಚಲನೆಯಲ್ಲಿರುತ್ತವೆ ಎಂಬುದನ್ನು ನಾವೆಲ್ಲಾ ಶಾಲೆಯಲ್ಲಿ ಕಲಿತಿರುತ್ತೇವಷ್ಟೇ! ಘನವಸ್ತುಗಳಲ್ಲಿ ಅಣುಗಳು ತಾವಿರುವ ಸ್ಥಳದಲ್ಲೇ ಅಲುಗಾಡುತ್ತಿರುತ್ತವೆ, ದ್ರವಗಳಲ್ಲಿ ಅಣುಗಳಿಗೆ ಹರಿದಾಡಲು ಕೊಂಚ ಸ್ವಾತಂತ್ರ್ಯವಿರುತ್ತದೆ; ಅನಿಲಗಳಲ್ಲಂತೂ ಅಣುಗಳ ನಡುವಿನ ಭೌತಿಕ ಆಕರ್ಷಣಶಕ್ತಿಯು ದುರ್ಬಲವಾಗಿರುವುದರಿಂದ ಮತ್ತು ಅಣುಗಳ ನಡುವೆ ಅತಿಹೆಚ್ಚು ಅಂತರವಿರುವುದರಿಂದ, ಅನಿಲಗಳ ಅಣುಗಳು ಬಿಡುಬೀಸಾಗಿ ಸ್ವತಂತ್ರವಾಗಿ ಅಲೆದಾಡುತ್ತಲೇ ಇರುತ್ತವೆ.

ಹೀಗೆ ಚಲಿಸುವಾಗ ಒಂದಕ್ಕೊಂದು ಡಿಕ್ಕಿ ಹೊಡೆಯುತ್ತಾ, ತಮ್ಮಲ್ಲಿರುವ ಶಾಖವನ್ನು ಮತ್ತೊಂದು ಅಣುವಿಗೆ ಹಸ್ತಾಂತರ ಮಾಡುತ್ತಿರುತ್ತವೆ. ಇದೇ ಉಷ್ಣವಾಹಕತೆಯ ಮೂಲಭೂತ ವಿಜ್ಞಾನವಲ್ಲವೇ? ಹೀಗೆ, ಈ ಅನಿಲದ ಅಣುಗಳು ಒಂದಕ್ಕೊಂದು ಶಾಖವನ್ನು ಹಸ್ತಾಂತರಿಸುತ್ತಾ, ಹೆಚ್ಚೆಚ್ಚು ಶಾಖವನ್ನು ಹೀರಿಕೊಳ್ಳುತ್ತಾ, ಗಾಜೂ ಬಿಸಿಯಾಗಿ, ಕಟ್ಟಡದ ಒಳಾಂಗಣವೂ ಬಿಸಿಯಾಗುತ್ತದೆ; ಅದನ್ನು ತಡೆಯಲು ‘ಮೋಚಿ’ಯೆಂಬ ಈ ಹೊಸ ವಸ್ತುವಿನಲ್ಲಿ ‘ಏರೋಜೆಲ್’ಗೆ ಹೋಲಿಕೆಯಿರುವ ತಂತ್ರಜ್ಞಾನವನ್ನು ಬಳಸಲಾಗಿದೆ. ಇದರೊಳಗಿರುವ ಅನಿಲದ ಅಣುಗಳು ಚಲಿಸುವಾಗ, ಅದೆಷ್ಟು ಕಿರಿದಾದ ಸೂಕ್ಷ್ಮರಂಧ್ರಗಳ ದಾರಿಯಲ್ಲಿ ಸಾಗಬೇಕೆಂದರೆ, ತಮ್ಮ ನಡುವೆ ಶಾಖವನ್ನು ಹಸ್ತಾಂತರ ಮಾಡಿಕೊಳ್ಳಲು ಸಾಧ್ಯವಾಗದೇ, ಇಲ್ಲಿರುವ ಸೂಕ್ಷ್ಮರಂಧ್ರಗಳ ಗೋಡೆಗೆ ಗುದ್ದಿ ಶಾಖವನ್ನು ಹೊರಹಾಕುತ್ತವೆ. ‘ಏರೋಜೆಲ್’ಗೂ ‘ಮೋಚಿ’ಗೂ ಇರುವ ಮೂಲ ವ್ಯತ್ಯಾಸವೆಂದರೆ, ‘ಏರೋಜೆಲ್’ನಲ್ಲಿ ಅನಿಲದ ಕಣಗಳು ಯಾವುದೇ ನಿರ್ದಿಷ್ಟ ರೀತಿಯಲ್ಲಿ ಜೋಡಣೆಯಾಗಿರುವುದಿಲ್ಲ; ಅಲ್ಲಿ ಹೇಗೆಂದರೆ ಹಾಗೆ ಹರಡಿಕೊಂಡಿರುವ ಅನಿಲದ ಅಣುಗಳು, ಬೆಳಕನ್ನು ಚದುರಿಸುತ್ತಾ, ಮಬ್ಬಾಗಿ, ಪಾರದರ್ಶಕತೆಯನ್ನು ಕಡಿಮೆಗೊಳಿಸುತ್ತವೆ. ಆದರೆ, ‘ಮೋಚಿ’ಯಲ್ಲಿ ನಿರ್ದಿಷ್ಟ ರೀತಿಯಲ್ಲಿ ಜೋಡಿಸಲಾದ ಗಾಳಿಯ ಅಣುಗಳು ಮತ್ತು ಸೂಕ್ಷ್ಮರಂಧ್ರಗಳು, ಇದನ್ನು ತಪ್ಪಿಸಿ, ಪಾರದರ್ಶಕತೆಯನ್ನು ಮತ್ತು ಶಾಖವನ್ನು ಕಾಪಿಟ್ಟುಕೊಳ್ಳುತ್ತವೆ! ಇಲ್ಲಿ ಬಳಕೆಯಾದ ತಂತ್ರಜ್ಞಾನದ ಕಾರಣದಿಂದಲೇ ‘ಮೋಚಿ’ಯನ್ನು ಕೇವಲ ಗಾಜಿನಗೋಡೆಗಳಲ್ಲಿ, ಕಿಟಕಿಗಳಲ್ಲಿ ಮಾತ್ರವಲ್ಲ, ಹೊಸ ಬಗೆಯ ನೀರಿನ ಹೀಟರ್‌ಗಳಲ್ಲಿ, ಬಿಸಿಲಿನ ಶಾಖವನ್ನು ಹಿಡಿದಿಟ್ಟುಕೊಂಡು ಇತರ ಸಮರ್ಥನೀಯ ಬಗೆಯ ಶಕ್ತಿಯನ್ನಾಗಿ ಪರಿವರ್ತಿಸಲೂ ಬಳಸಬಹುದಾಗಿದೆ. ಈಗಾಗಲೇ ಖಾಲಿಯಾಗುತ್ತಿರುವ ಪಳೆಯುಳಿಕೆ ಇಂಧನಗಳ ಮೇಲೆ, ನೈಸರ್ಗಿಕ ಸಂಪನ್ಮೂಲಗಳ ಮೇಲೆ ಹೆಚ್ಚಿರುವ ಹೊರೆಯನ್ನು, ‘ಮೋಚಿ’ಯಂತಹ ಪದಾರ್ಥಗಳ ಬಳಕೆಯಂತಹ ಪರಿಸರಸ್ನೇಹಿ ನಡೆಗಳಿಂದ ಇಳಿಸಬಹುದಾಗಿದೆ. ❖



ನೆನಪನ್ನು ‘ಎಡಿಟ್’ ಮಾಡೋಣ!

• ವಿಕ್ರಮ ಜೋಶಿ

ಜಾನ್ ಇರ್ವಿನ್ ಅವರ ಒಂದು ಅತ್ಯುತ್ತಮ ಕಾದಂಬರಿ ‘ಎ ಪ್ರೇಯರ್ ಫಾರ್ ಓವೆನ್ ಮೀನಿ’. ಅದರಲ್ಲಿ ನೆನಪಿನ ಕುರಿತು ಅವರು ಹೀಗೆ ಬರೆದಿದ್ದಾರೆ: ‘ನೆನಪು ದೈತ್ಯಾಕಾರದ ರಾಕ್ಷಸ - ನಾವು ಮರೆಯಬಹುದು, ಆದರೆ ಅದಲ್ಲ. ಅದು ಒಂದುಕಡೆ ವಿಷಯಗಳನ್ನು ಸಂಗ್ರಹಿಸಿಬಿಡುತ್ತದೆ. ನಮಗಾಗಿ ವಿಷಯಗಳನ್ನು ಎದುರಿಗೆ ತರಬಲ್ಲದು ಇಲ್ಲವೇ ಮರೆಯಲ್ಲಿಡಬಹುದು. ಹಾಗೆಯೇ ಅದರ ಇಚ್ಛೆಯಂತೆ ಅವುಗಳು ಮರುಕಳಿಸಲೂಬಹುದು. ನಾವು ನಮ್ಮಲ್ಲಿ ನೆನಪಿದೆ ಅಂದುಕೊಳ್ಳುತ್ತೇವೆ; ಅದರೆ ಅದರೊಳಗೆ ನಾವಿದ್ದೇವೆ’.

ಈಗ ವಿಚಾರ ಮಾಡಿ ನಮಗೆ ನೆನಪುಗಳೇ ಇಲ್ಲದೆ ಹೋದರೆ? ನಮ್ಮ ಗುರುತೇ ಇರದು; ನಮ್ಮ ಯಶೋಗಾಥೆ ಅಳಿಸಿ ಹೋಗುವುದು; ನಿನ್ನೆಯು ಕಳೆದು, ನಾಳೆಗಳು ಮುಸುಕಲಿ ಮಬ್ಬಾಗುವವು; ನೆನಪಿಲ್ಲದೆ ಹೋದರೆ ನಮ್ಮ ಅಸ್ತಿತ್ವವೇ ಇಲ್ಲದಾಗುವುದು! ಮನುಷ್ಯ ನೆನಪುಗಳನ್ನು ಸೆರೆಹಿಡಿಯಲು, ಅದನ್ನು ಬದಲಿಸಲು, ಕೆಟ್ಟ ನೆನಪುಗಳನ್ನು ಅಳಿಸಿ ಕೇವಲ ಸವಿ ನೆನಪುಗಳನ್ನೇ ಇಟ್ಟುಕೊಳ್ಳಲು ನೂರಾರು ವರ್ಷಗಳಿಂದ ಪ್ರಯೋಗ ಗಳನ್ನು ನಡೆಸುತ್ತಾ ಬಂದಿದ್ದಾನೆ. ‘ಬದುಕಿನಲ್ಲಿ ನೆಮ್ಮದಿಗೆ ಕಹಿನೆನಪುಗಳೂ ಒಂದು ಕಾರಣ’ ಎಂದು ಪ್ರಸಿದ್ಧ ರೋಮನ್ ಚಿಂತಕ ಸಿಸರೋ ಹೇಳುತ್ತಾರೆ. ಕಳೆದ ಒಂದು ದಶಕದಲ್ಲಿ ನೆನಪನ್ನು ಪರಿಷ್ಕರಿಸುವ ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ತುಸು ಯಶಸ್ಸು ಸಿಕ್ಕಿದೆ. ಈ ತಂತ್ರಜ್ಞಾನವೇ ‘ಮೆಮೊರಿ ಎಡಿಟಿಂಗ್’.

ಮೆಮೊರಿಯ ಬಗೆಗಳು

ನಾವು ಪ್ರತಿ ಕ್ಷಣವೂ ಏನನ್ನು ಪಂಚೇಂದ್ರಿಯಗಳ ಮೂಲಕ ಗ್ರಹಿಸುತ್ತೇವೆಯೋ ಅವೆಲ್ಲವೂ ದತ್ತಾಂಶದ ರೂಪದಲ್ಲಿ ಮಿದುಳಿನಲ್ಲಿ ಶೇಖರವಾಗಿರುತ್ತದೆ; ಬೇಕಾದಾಗ ಮತ್ತೆ ಮರುಕಳಿಸುವ ಮೂಲಕ ಮಾಹಿತಿಗಳ ರೂಪದಲ್ಲಿ ಹೊರಬರುತ್ತವೆ. ಇವೇ ನೆನಪುಗಳು. ವಿಜ್ಞಾನಿಗಳು ಸ್ಮರಣೆಯನ್ನು ಮೂರು ಬಗೆಯಲ್ಲಿ ವಿಂಗಡಿಸಿದ್ದಾರೆ: ಒಂದು – ಇಂದ್ರಿಯ ಸ್ಮರಣೆ (ಸೆನ್ಸರಿ ಮೆಮೊರಿ), ಎರಡು – ಕ್ಷಣಿಕ ಸ್ಮರಣೆ (ಶಾರ್ಟ್ ಟರ್ಮ್ ಮೆಮೊರಿ) ಹಾಗೂ ಮೂರು – ದೀರ್ಘ ಕಾಲದ ಸ್ಮರಣೆ (ಲಾಂಗ್ ಟರ್ಮ್ ಮೆಮೊರಿ). ದೀರ್ಘಕಾಲದ ಸ್ಮೃತಿಯಲ್ಲಿ ಎರಡು ಬಗೆಗಳಿವೆ. ಮೊದಲನೆಯದು, ಸ್ಪಷ್ಟ ನೆನಪು. ಇದಕ್ಕೆ ಉದಾಹರಣೆ: ವ್ಯಕ್ತಿಗಳ ಅಥವಾ ಊರಿನ ಹೆಸರು. ಎರಡನೆಯದು, ಸೂಚ್ಯ ನೆನಪು. ಅದು ನಮ್ಮೊಳಗೆ ನಮಗೆ ಅರಿವಿಗೆ ಇಲ್ಲದಂತೆ ರೂಢಿಯಾಗಿರುತ್ತದೆ. ಒಮ್ಮೆ ಕಲಿತರೆ ಸಾಕು ಮತ್ತೆ ಮರೆಯಲು ಸಾಧ್ಯವಿಲ್ಲ. ಇದಕ್ಕೆ ಉದಾಹರಣೆ ಎಂದರೆ ಸೈಕಲ್ ಓಡಿಸುವುದು, ಈಜುವುದು.

ನೆನಪಿನ ಸಂಗ್ರಹ ಹೇಗೆ?

ಗಣಕಯಂತ್ರದೊಳಗೆ ಹೇಗೆ ಮೆಮೊರಿಯು ಹಾರ್ಡ್‌ಡ್ರೈವ್‌ನಲ್ಲಿ ಸಂಗ್ರಹವಾಗಿರುತ್ತದೆಯೋ ಹಾಗೆ ನಮ್ಮ ನೆನಪುಗಳು ಮಿದುಳಿನ ಒಂದು ನಿರ್ದಿಷ್ಟ ಭಾಗದಲ್ಲಿ ಸಂಗ್ರಹವಾಗುವುದಿಲ್ಲ; ಅದು ಮಿದುಳಿನ ಬೇರೆ ಬೇರೆ ಭಾಗಗಳಲ್ಲಿ ಹಂಚಿಕೆಯಾಗಿರುತ್ತದೆ.

- **ಹಿಪೊಕ್ಯಾಂಪಸ್**: ಇದು ಹೊಸ ನೆನಪುಗಳಿಗೆ ‘ಇಂಡೆಕ್ಸಿಂಗ್ ಸೆಂಟರ್’ ಆಗಿ ಕಾರ್ಯನಿರ್ವಹಿಸುತ್ತದೆ.
- **ನಿಯೋಕಾರ್ಟೆಕ್ಸ್**: ಇದರಲ್ಲಿ ದೀರ್ಘಕಾಲದ ಜ್ಞಾನವು ಕಾಯಂ ಆಗಿ ಸಂಗ್ರಹವಾಗಿರುವುದು.
- **ಅಮಿಗ್ದಾಲಾ**: ನಮ್ಮ ನೆನಪುಗಳಿಗೆ ಭಾವನಾತ್ಮಕ ಸ್ಪರ್ಶವನ್ನು ನೀಡುವುದು ಅಮಿಗ್ದಾಲಾ. ಹೀಗಾಗಿಯೇ ಮೊದಲ ಚುಂಬನ ಅಥವಾ ಮಾರಣಾಂತಿಕ ಹಲ್ಲೆಗಳಂಥ ಮಹತ್ವದ ಘಟನೆಗಳು ಅಷ್ಟು ಸ್ಪಷ್ಟವಾಗಿ ನೆನಪಿನಲ್ಲಿರುತ್ತವೆ.

ಜೀವಕೋಶದ ಮಟ್ಟದಲ್ಲಿ ನೋಡುವುದಾದರೆ ನೆನಪುಗಳು ‘ಎನ್ಗ್ರಾಂ’ಗಳಾಗಿ (Engrams) ರೂಪಗೊಂಡಿರುತ್ತವೆ. ‘ಲಾಂಗ್-ಟರ್ಮ್ ಪೊಟೆನ್ಶಿಯೇಶನ್’ (LTP) ಎಂಬ ಪ್ರಕ್ರಿಯೆಯ ಮೂಲಕ ನರಕೋಶಗಳು ಅಥವಾ ನ್ಯೂರಾನ್‌ಗಳ ನಡುವಿನ ಸಂಪರ್ಕಗಳು ಬಲಗೊಳ್ಳುತ್ತ, ಜೈವಿಕ ಸರ್ಕ್ಯೂಟ್‌ನಲ್ಲಿ ನೆನಪುಗಳು ‘ಬರೆಯಲ್ಪಡುತ್ತವೆ’.

ಮೆಮೊರಿ ಎಡಿಟಿಂಗ್

ಇದು ನರವಿಜ್ಞಾನ ಹಾಗೂ ಬಯೋ ಎಂಜಿನಿಯರಿಂಗ್ ಕ್ಷೇತ್ರದ ಒಂದು ವಿಶೇಷ ಭಾಗವಾಗಿದೆ. ನಮ್ಮ ಮಿದುಳಿನ ನಿರ್ದಿಷ್ಟವಾದ ನೆನಪುಗಳನ್ನು ಉದ್ದೇಶಪೂರ್ವಕವಾಗಿ ತಿದ್ದುಪಡಿಮಾಡುವ (ಅಳಿಸುವುದು, ಬದಲಾಯಿಸುವುದು, ಅಥವಾ ವರ್ಧಿಸುವುದು) ಪ್ರಕ್ರಿಯೆಯನ್ನು ‘ಸ್ಮೃತಿ ಪರಿಷ್ಕರಣೆ’ ಎನ್ನುತ್ತಾರೆ. ಇಂದು ಈ ವಿಚಾರವು ಕಾಲ್ಪನಿಕ ವಿಜ್ಞಾನದ ಸಿನಿಮಾಗಳಿಂದ ಹೊರಗಡೆ ಬಂದು ಪ್ರಯೋಗಾಲಯದ ತನಕ ತನ್ನ ಪಯಣವನ್ನು ಮುಂದುವರಿಸಿದೆ. ಇಂದು ಲಭ್ಯವಿರುವ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿ ಈ ಕ್ಷೇತ್ರದಲ್ಲಿ ಸತತವಾದ ಪ್ರಯೋಗಗಳು ನಡೆಯುತ್ತಿವೆ.

1. **ಆಪ್ಟೋಜೆನೆಟಿಕ್ಸ್**: ಈ ತಂತ್ರಜ್ಞಾನವು ಲೇಸರ್ ಬೆಳಕನ್ನು ಬಳಸಿ ನಿರ್ದಿಷ್ಟ ‘ಸ್ಮರಣ ನರಕೋಶಗಳನ್ನು’ ಸಕ್ರಿಯಗೊಳಿಸಲು ಅಥವಾ ನಿಷ್ಕ್ರಿಯಗೊಳಿಸುವಂತಹದ್ದು.
2. **‘CRISPR’ ಮತ್ತು ಎಪಿಜೆನೆಟಿಕ್ ಎಡಿಟಿಂಗ್**: ಜೀನ್-ಎಡಿಟಿಂಗ್ ಉಪಕರಣಗಳನ್ನು ಬಳಸಿ ಸ್ಮರಣಶಕ್ತಿಯನ್ನು ಹೆಚ್ಚಿಸಲು ಅಥವಾ ಕಡಿಮೆ ಮಾಡಲು ಪ್ರಯತ್ನಿಸುವುದೇ ಈ ತಂತ್ರಜ್ಞಾನ ಗುರಿ.
3. **ಪ್ರೊಪ್ರಾನೊಲೋಲ್**: ಔಷಧದ ಮೂಲಕ ಆಘಾತಕಾರಿ ನೆನಪುಗಳ ತೀವ್ರತೆಯನ್ನು ಕಡಿಮೆ ಮಾಡುವುದು ಇಲ್ಲಿಯ ವಿಶೇಷತೆ.

ಮೆಮೊರಿ ಎಡಿಟಿಂಗ್ ಕ್ಷೇತ್ರದ ಪ್ರವರ್ತಕರು ಹಲವರಿದ್ದಾರೆ. ಎರಿಕ್ ಕಾಂಡೆಲ್ ಎನ್ನುವವರು ಸ್ಮರಣೆಯ ಆಣ್ವಿಕ ಆಧಾರವನ್ನು ಕಂಡುಹಿಡಿದವರು. ಅವರ ಈ ಅನ್ವೇಷಣೆಗೆ ನೊಬೆಲ್ ಪ್ರಶಸ್ತಿ ಲಭಿಸಿದೆ. ಸ್ಟೀವ್ ರಾಮಿರೆಜ್ ಮತ್ತು ಷು ಲಿಯು ಈ ಇಬ್ಬರು ವಿಜ್ಞಾನಿಗಳು ಸೇರಿ ಇಲಿಗಳಲ್ಲಿ ಕೃತಕ ನೆನಪುಗಳನ್ನು ಸೃಷ್ಟಿಸುವ ಪ್ರಯೋಗಕ್ಕಾಗಿ ಪ್ರಸಿದ್ಧರಾಗಿದ್ದಾರೆ. ಎಲಿಜಬೆತ್ ಲೋಫ್ಟಸ್ ಇವರು ಮಾನವನ ಸ್ಮರಣೆಯನ್ನು ಎಷ್ಟು ಸುಲಭವಾಗಿ ಕುಶಲತೆಯಿಂದ ಬದಲಾಯಿಸಬಹುದು ಎಂದು ತೋರಿಸಿಕೊಟ್ಟವರು.

ಮೆಮೊರಿ ಎಡಿಟಿಂಗ್ ಭವಿಷ್ಯದಲ್ಲಿ ಹಲವು ಮಾನಸಿಕ ಕಾಯಿಲೆಗಳನ್ನು ಗುಣಪಡಿಸುವ ಭರವಸೆಯನ್ನು ಹೊತ್ತು ತಂದಿದೆ. ಮನುಷ್ಯರ ಮೇಲೆ ಇನ್ನೂ ಹೆಚ್ಚಿನ ಪ್ರಯೋಗವು ನಡೆದಿಲ್ಲ. ಇಂದು ಆ ಪ್ರಯೋಗಗಳನ್ನು ನಡೆಸಲೂ ನೈತಿಕ ಸವಾಲುಗಳು ಎದುರಾಗಿವೆ. ನಮ್ಮ ನೋವನ್ನು ನಾವು ಅಳಿಸಿಹಾಕಿದರೆ, ಅದರೊಂದಿಗೆ ಬರುವ ಬುದ್ಧಿವಂತಿಕೆಯನ್ನು ನಾವು ಕಳೆದುಕೊಳ್ಳುತ್ತೇವೆಯೇ? ನೆನಪುಗಳನ್ನು ಕದಿಯಬಹುದಾದರೆ ಮುಂದೆ ಹೋದಂತೆ ನಮ್ಮ ಇತಿಹಾಸವನ್ನು ನಾವು ನಂಬಬಹುದೇ? ಚಿಕಿತ್ಸೆ ಹಾಗೂ ಮಾನವೀಯ ಮೌಲ್ಯಗಳ ನಡುವೆ ಸಮತೋಲನ ಕಾಯ್ದುಕೊಳ್ಳುವುದೇ ಈ ತಂತ್ರಜ್ಞಾನದ ಸವಾಲಾಗಿದೆ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಲೋಹಗಳು ಮತ್ತು ಅಲೋಹಗಳು

ಬಹು ಆಯ್ಕೆ ಪ್ರಶ್ನೆಗಳು

1. ಈ ಕೆಳಗಿನವುಗಳಲ್ಲಿ ಯಾವ ಜೋಡಿಯು ಸ್ಥಾನಪಲ್ಲಟ ಕ್ರಿಯೆಯನ್ನು ಉಂಟುಮಾಡುತ್ತದೆ?

(a) NaCl ದ್ರಾವಣ ಮತ್ತು ತಾಮ್ರದ ಲೋಹ
(b) $MgCl_2$ ದ್ರಾವಣ ಮತ್ತು ಅಲ್ಯುಮಿನಿಯಂ ಲೋಹ
(c) $FeSO_4$ ದ್ರಾವಣ ಮತ್ತು ಬೆಳ್ಳಿಯ ಲೋಹ
(d) $AgNO_3$ ದ್ರಾವಣ ಮತ್ತು ತಾಮ್ರದ ಲೋಹ.

2. ಕಬ್ಬಿಣದ ಕಾವಲಿ ತುಕ್ಕು ಹಿಡಿಯದಂತೆ ತಡೆಗಟ್ಟಲು ಈ ಕೆಳಗಿನವುಗಳಲ್ಲಿ ಯಾವ ವಿಧಾನ ಸೂಕ್ತವಾಗಿದೆ?

(ಎ) ಗ್ರೀಸ್ ಹಚ್ಚುವುದು (ಬಿ) ಬಣ್ಣ ಹಚ್ಚುವುದು
(ಸಿ) ಸತುವಿನ ಲೇಪನ ಮಾಡುವುದು (ಡಿ) ಮೇಲಿನ ಎಲ್ಲವೂ

3. ಒಂದು ಧಾತುವು ಆಕ್ಸಿಜನ್‌ನ ಜೊತೆ ಪ್ರತಿವರ್ತಿಸಿ ಹೆಚ್ಚಿನ ಕರಗುವ ಬಿಂದುವನ್ನು ಹೊಂದಿರುವ ಸಂಯುಕ್ತವನ್ನು ಉಂಟುಮಾಡುತ್ತದೆ. ಈ ಸಂಯುಕ್ತವು ನೀರಿನಲ್ಲಿ ಸುಲಭವಾಗಿ ಕರಗುತ್ತದೆ. ಸಾಮಾನ್ಯವಾಗಿ ಆ ಧಾತು ಯಾವುದಾಗಿರಬಹುದೆಂದರೆ..............................

(ಎ) ಕ್ಯಾಲ್ಸಿಯಂ (ಬಿ) ಕಾರ್ಬನ್
(ಸಿ) ಸಿಲಿಕಾನ್ (ಡಿ) ಕಬ್ಬಿಣ

4. ಆಹಾರ ಪದಾರ್ಥಗಳ ಡಬ್ಬಿಗಳನ್ನು ತವರದಿಂದ ಲೇಪನಮಾಡಲಾಗಿರುತ್ತದೆಯೇ ಹೊರತು ಸತುವಿನಿಂದಲ್ಲ ಕಾರಣ......

(ಎ) ಸತು ತವರಕ್ಕಿಂತ ದುಬಾರಿ.
(ಬಿ) ಸತುವಿನ ಕರಗುವ ಬಿಂದು ತವರಕ್ಕಿಂತ ಹೆಚ್ಚು.
(ಸಿ) ಸತುವು ತವರಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದೆ.
(ಡಿ) ಸತುವು ತವರಕ್ಕಿಂತ ಕಡಿಮೆ ಕ್ರಿಯಾಶೀಲವಾಗಿದೆ.

ಉತ್ತರ:– (1)ಡಿ (2)ಸಿ (3)ಎ (4)ಸಿ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಯಾವುದನ್ನು ಲೋಹೀಯ ಕಾಂತಿ ಅಥವಾ ಹೊಳಪು (lustre) ಎನ್ನುವರು

ಉತ್ತರ:– ಲೋಹಗಳು ಶುದ್ಧ ಸ್ಥಿತಿಯಲ್ಲಿ ಹೊಳಪಾದ ಮೇಲ್ಮೈಯನ್ನು ಹೊಂದಿರುತ್ತವೆ. ಇದನ್ನೇ ಲೋಹೀಯ ಕಾಂತಿ ಅಥವಾ ಹೊಳಪು (lustre) ಎನ್ನುವರು.

2) ಲೋಹದ ಭೌತ ಗುಣಗಳನ್ನು ಬರೆಯಿರಿ

ಉತ್ತರ:– ಲೋಹದ ಭೌತ ಗುಣಗಳು
ಅ) ಲೋಹವು ಹೊಳಪನ್ನು ಹೊಂದಿದೆ
ಆ) ಲೋಹವು ಕಠಿಣವಾಗಿರುತ್ತವೆ
ಇ) ಲೋಹವು ಕುಟ್ಯತೆ ಗುಣವನ್ನು ಹೊಂದಿದೆ.
{ಲೋಹಗಳನ್ನು ಕುಟ್ಟಿ ತೆಳುವಾದ ಹಾಳೆಗಳನ್ನಾಗಿ ಮಾಡಬಹುದು. ಈ ಗುಣವನ್ನು ಕುಟ್ಯತೆ (malleability) ಎನ್ನುವರು}
ಈ) ಲೋಹಗಳು ತನ್ಯತೆಯ ಗುಣವನ್ನು ಹೊಂದಿದೆ.
{ತೆಳುವಾದ ತಂತಿಗಳನ್ನಾಗಿ ಎಳೆಯಬಹುದಾದ ಲೋಹಗಳ ಸಾಮರ್ಥ್ಯಕ್ಕೆ ತನ್ಯತೆ (ductility) ಎನ್ನುವರು.}
ಉ) ಲೋಹಗಳು ಉಷ್ಣದ ಉತ್ತಮ ವಾಹಕಗಳು ಮತ್ತು ಅತಿ ಹೆಚ್ಚಿನ ಕರಗುವ ಬಿಂದುಗಳನ್ನು ಹೊಂದಿವೆ
ಊ) ಲೋಹಗಳ ಮೂಲಕ ವಿದ್ಯುತ್ ಪ್ರವಹಿಸುತ್ತದೆ
ಎ) ಲೋಹಗಳು ಒಂದು ಗಟ್ಟಿಯಾಗಿ ಬಡಿದರೆ ಶಬ್ದ ಉತ್ಪತ್ತಿ ಮಾಡುತ್ತವೆ

3) ಯಾವುದಕ್ಕೆ ಶಾಬ್ದನ (sonorous) ಎನ್ನುವರು?

ಉತ್ತರ:– ಒಂದು ಗಟ್ಟಿಯಾದ ಮೇಲ್ಮೈಗೆ ಬಡಿದಾಗ ಶಬ್ದ ಉಂಟುಮಾಡುವ ಲೋಹಗಳ ಗುಣವನ್ನು ಶಾಬ್ದನ(sonorous) ಎನ್ನುವರು

4) ಲೋಹಗಳಲ್ಲಿ ಇರುವ ಕುಟ್ಯತೆ ಗುಣ ಎಂದರೇನು?

ಉತ್ತರ:– ಕೆಲವು ಲೋಹಗಳನ್ನು ಕುಟ್ಟಿ ತೆಳುವಾದ ಹಾಳೆಗಳನ್ನಾಗಿ ಮಾಡಬಹುದು ಈ ಗುಣವನ್ನು ಕುಟ್ಯತೆ (malleability) ಎನ್ನುವರು. ಚಿನ್ನ ಮತ್ತು ಬೆಳ್ಳಿ ಅತಿ ಹೆಚ್ಚಿನ ಕುಟ್ಯ ಗುಣ ಹೊಂದಿರುವ ಲೋಹಗಳು

4) ಒಂದು ದ್ರವರೂಪದ ಅಲೋಹವನ್ನು ಹೆಸರಿಸಿ

ಉತ್ತರ:– ಬ್ರೋಮಿನ್

5) ಒಂದು ದ್ರವರೂಪದ ಲೋಹವನ್ನು ಹೆಸರಿಸಿ

ಉತ್ತರ:– ಪಾದರಸ

6) ಹೊಳೆಯುವ ಅಲೋಹವನ್ನು ಬರೆಯಿರಿ

ಉತ್ತರ:– ಅಯೋಡಿನ್

7) ವಿಭಿನ್ನ ರೂಪದಲ್ಲಿ ದೊರೆಯುವ ಅಲೋಹ ಯಾವುದು?

ಉತ್ತರ:– ಕಾರ್ಬನ್

8) ಮಾನವನ ಕೈಯಲ್ಲಿಟ್ಟುಕೊಂಡರೂ ಕರಗುವಷ್ಟು ಕಡಿಮೆ ಕರಗುವ ಬಿಂದುಗಳನ್ನು ಹೊಂದಿರುವ ಲೋಹಗಳನ್ನು ಹೆಸರಿಸಿ

ಉತ್ತರ:–ಗ್ಯಾಲಿಯಂ ಮತ್ತು ಸೀಸಿಯಂ

8) ಕ್ಷಾರ ಲೋಹಗಳನ್ನು ಹೆಸರಿಸಿ

ಉತ್ತರ:– ಲೀಥಿಯಂ, ಸೋಡಿಯಂ, ಪೊಟ್ಯಾಸಿಯಂ

9) ಕ್ಷಾರ ಲೋಹಗಳ ವಿಶಿಷ್ಟತೆಯನ್ನು ಬರೆಯಿರಿ

ಉತ್ತರ:– ಕ್ಷಾರ ಲೋಹಗಳು ತುಂಬಾ ಮೃದುವಾಗಿರುತ್ತವೆ. ಇವುಗಳನ್ನು ಚಾಕುವಿನಿಂದ ಕತ್ತರಿಸಬಹುದು. ಇವು ಕಡಿಮೆ ಸಾಂದ್ರತೆ ಮತ್ತು ಕಡಿಮೆ ಕರಗುವ ಬಿಂದುಗಳನ್ನು ಹೊಂದಿವೆ.

10) ಯಾವುದಕ್ಕೆ ಉಭಯಧರ್ಮಿ (amphoteric) ಆಕ್ಸೈಡ್‌ಗಳು ಎನ್ನುವರು?

ಉತ್ತರ:– ಅಲ್ಯುಮಿನಿಯಂ ಆಕ್ಸೈಡ್, ಸತುವಿನ ಆಕ್ಸೈಡ್‌ಗಳಂಥ ಕೆಲವು ಲೋಹದ ಆಕ್ಸೈಡ್‌ಗಳು ಆಮ್ಲೀಯ ಹಾಗೂ ಪ್ರತ್ಯಾಮ್ಲೀಯ ಗುಣಗಳೆರಡನ್ನೂ ಪ್ರದರ್ಶಿಸುತ್ತವೆ. ಇಂತಹ ಲೋಹದ ಆಕ್ಸೈಡ್‌ಗಳು ಆಮ್ಲ ಮತ್ತು ಪ್ರತ್ಯಾಮ್ಲಗಳೆರಡರ ಜೊತೆಗೂ ಪ್ರತಿವರ್ತಿಸಿದಾಗ ಲವಣ ಮತ್ತು ನೀರನ್ನು ಉತ್ಪತ್ತಿ ಮಾಡುತ್ತವೆ. ಇವುಗಳಿಗೆ ಉಭಯಧರ್ಮಿ (amphoteric) ಆಕ್ಸೈಡ್‌ಗಳು ಎನ್ನುವರು.

11) ಸೋಡಿಯಂ ಮತ್ತು ಪೊಟ್ಯಾಸಿಯಂನಂಥ ಲೋಹಗಳನ್ನು ಸೀಮೆ ಎಣ್ಣೆಯಲ್ಲಿ ಯಾಕೆ ಸಂಗ್ರಹಿಸಿಡುತ್ತಾರೆ.

ಉತ್ತರ:– ಸೋಡಿಯಂ ಮತ್ತು ಪೊಟ್ಯಾಸಿಯಂನಂಥ ಲೋಹಗಳು ಗಾಳಿಗೆ ತೆರೆದಿಟ್ಟಾಗ ಕ್ಷಿಪ್ರವಾಗಿ ವರ್ತಿಸಿ ಬೆಂಕಿ ಹೊತ್ತಿಕೊಳ್ಳುತ್ತದೆ. ಆದ್ದರಿಂದ ಅವುಗಳನ್ನು ಸಂರಕ್ಷಿಸಲು ಮತ್ತು ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಳ್ಳುವುದನ್ನು ತಪ್ಪಿಸಲು ಸೀಮೆಎಣ್ಣೆಯಲ್ಲಿ ಸಂಗ್ರಹಿಸಿಡುತ್ತಾರೆ.

12) ಯಾವುದಕ್ಕೆ ಆನೋಡೀಕರಣ (anodising) ಎನ್ನುವರು.

ಉತ್ತರ:– ಅಲ್ಯುಮಿನಿಯಂನ ಮೇಲೆ ದಪ್ಪ ಆಕ್ಸೈಡ್ ಪದರವನ್ನು ಉಂಟು ಮಾಡುವ ಕ್ರಿಯೆಗೆ ಆನೋಡೀಕರಣ ಎನ್ನುವರು.

13) ಲೋಹಗಳ ರಾಸಾಯನಿಕ ಗುಣಗಳನ್ನು ಬರೆಯಿರಿ

ಉತ್ತರ:– (1) ಬಹುತೇಕ ಎಲ್ಲಾ ಲೋಹಗಳು ಆಕ್ಸಿಜನ್‌ನ ಜೊತೆ ಸಂಯೋಗ ಹೊಂದಿದಾಗ ಆಯಾ ಲೋಹಗಳ ಆಕ್ಸೈಡ್‌ಗಳಾಗುತ್ತವೆ. ಉದಾಹರಣೆ ತಾಮ್ರವನ್ನು ಗಾಳಿಯಲ್ಲಿ ಕಾಸಿದಾಗ ಆಕ್ಸಿಜನ್ ಜೊತೆ ಸೇರಿ ತಾಮ್ರದ ಆಕ್ಸೈಡ್ ಆಗುತ್ತದೆ. ಇದು ಕಪ್ಪು ಆಕ್ಸೈಡ್.

$$2Cu + O_2 \rightarrow 2CuO$$

(ತಾಮ್ರ) (ತಾಮ್ರದ ಆಕ್ಸೈಡ್)

(2) ಎಲ್ಲಾ ಲೋಹಗಳು ಒಂದೇ ರೀತಿಯಾಗಿ ಆಕ್ಸಿಜನ್‌ನ ಜೊತೆ ವರ್ತಿಸುವುದಿಲ್ಲ

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

CHEMISTRY

Alcohols, Phenols and Ethers

Fill in the blanks

1. Phenol, also known as __________, was first isolated in the early nineteenth century from coal tar.
Ans:- carbolic acid
2. Hydroxyl (–OH) derivatives of alkane are called __________.
Ans:- alcohols
3. In Allylic alcohols–OH group is attached to a ____________ hybridised carbon adjacent to the carbon-carbon double bond.
Ans:- sp^3-hybridized carbon atom
4. Unsymmetrical ethers are also called as ____________ ethers.
Ans:- mixed,
5. ______ is the suffix used in the IUPAC nomenclature of the alcohols.
Ans:- -ol
6. Cyclic alcohols are named using the prefix _________.
Ans:- cyclo-
7. The simplest hydroxy derivative of benzene is _________.
Ans:- phenol
8. The number of –OH groups present in 1,4-benzenediol are _________.
Ans:- , two
9. In alcohols, the oxygen of the –OH group is attached to carbon by a _________ bond.
Ans:- sigma
10. The bond angle in alcohols is slightly ______ than the tetrahedral angle.
Ans:- less
11. Alkenes react with water in the presence of acid as catalyst to form _________.
Ans:- alcohols,
12. Aldehydes reacts with H_2 in presence of finely divided palladium yield _______ alcohols.
Ans:- primary
13. Ketones reacts with sodium borohydride gives ________ alcohols.
Ans:- secondary
14. _________ is the common name of 2-methylpropan-2-ol.
Ans:- tert-butyl alcohol
15. _________ is obtained by acidification of sodium phenoxide
Ans:- phenol
16. When benzene is sulphonated with _______ gives benzene sulphonic acid.
Ans:- fuming sulfuric acid
17. A diazonium salt is formed by treating an aromatic primary amine with _________.
Ans:- nitrous acid
18. ________ is produced when isopropyl benzene is oxidised in the presence of air.
Ans:- cumene hydroperoxide
19. _________ are hydrolysed to phenols by warming with water or by treating with dilute acids
Ans:- Diazonium salts
20. In the manufacture of phenol from cumene ________ a by-product formed.
Ans:- acetone,
21. The boiling points of alcohols and phenols ________ with increase in the number of carbon atoms
Ans:- increase
22. The bond between O–H is broken when alcohols react as ________.
Ans:- nucleophiles
23. The –OH group in alcohols and phenols is involved in ____________ hydrogen bonding.
Ans:- , intramolecular
24. Alcohols and phenols react with active metals such as sodium, potassium and aluminium to yield corresponding _________.
Ans:- , alkoxides
25. In alcohols, the boiling points _________ with increase of branching in carbon chain.
Ans:- decrease
26. Alcohols are, _______ acids than water.
Ans:- weaker
27. The reaction of phenol with aqueous sodium hydroxide indicates that phenols are stronger _____ than alcohols and water.
Ans:- stronger
28. Alcohols act as ________ due to the presence of unshared electron pairs on oxygen.
Ans:- Bronsted bases/ Lewis bases
29. Alcohols and phenols react with carboxylic acids, acid chlorides and acid anhydrides to form _______.
Ans:- esters
30. 2, 4, 6-trinitrophenolis commonly known as _________.
Ans:- picric acid

(Contd…….)

ಬಾಂಗ್ಲಾ ಹೈಕಮಿಷನ್ ಮುಂದೆ ಆಕ್ರೋಶ

ಹಿಂದೂಗಳ ಹತ್ಯೆಗೆ ಖಂಡನೆ: ವಿಶ್ವ ಹಿಂದೂ ಪರಿಷತ್, ಬಜರಂಗದಳ ಪ್ರತಿಭಟನೆ

ನವದೆಹಲಿ (ಪಿಟಿಐ): ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳ ಕಾರ್ಯಕರ್ತರು ಬಾಂಗ್ಲಾದೇಶದ ಹೈಕಮಿಷನ್ ಕಚೇರಿ ಎದುರು 'ಭಾರತ್ ಮಾತಾ ಕೀ ಜೈ' ಎಂದು ಘೋಷಣೆ ಕೂಗಿ ಕೇಸರಿ ಧ್ವಜ, ಫಲಕಗಳನ್ನು ಹಿಡಿದು ಆಕ್ರೋಶ ವ್ಯಕ್ತಪಡಿಸಿದರು.

'ಹಿಂದೂ ರಕ್ತ್ ಕೀ ಏಕ್ ಏಕ್ ಬೂಂದ್ ಕಾ ಹಿಸಾಬ್ ಚಾಹಿಯೆ (ಹಿಂದೂವಿನ ಪ್ರತಿಯೊಂದು ಹನಿ ರಕ್ತಕ್ಕೂ ಬೆಲೆ ತೆರಬೇಕು) ಸೇರಿದಂತೆ ಮೊಹಮ್ಮದ್ ಯೂನುಸ್ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಫಲಕಗಳನ್ನು ಪ್ರದರ್ಶಿಸಿದರು.

'ಹಿಂದೂ ಸಮುದಾಯದ ವ್ಯಕ್ತಿಯ ಮೇಲೆ ಗಂಭೀರವಾದ ದಾಳಿ ನಡೆಸಿ, ಹತ್ಯೆ ಮಾಡಲಾಗಿದೆ. ಈ ಕೃತ್ಯವೆಸಗಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರ ಒತ್ತಾಯಿಸಬೇಕು. ಬಾಂಗ್ಲಾದೇಶ ಪೊಲೀಸರು ಕೂಡ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದ್ದಾರೆ.

'ಪ್ರತಿಭಟನೆಯನ್ನು ಒಂದು ದಿನಕ್ಕೆ ಸೀಮಿತಗೊಳಿಸುವುದಿಲ್ಲ. ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು' ಎಂದು ಹಲವು ಪ್ರತಿಭಟನಕಾರರು ಎಚ್ಚರಿಕೆ ನೀಡಿದ್ದಾರೆ.

ಮುಖ್ಯಾಂಶಗಳು

- ಹನುಮಾನ್ ಚಾಲೀಸಾ, ಧಾರ್ಮಿಕ ಘೋಷಣೆ ಕೂಗಿದ ಪ್ರತಿಭಟನಕಾರರು
- ಪೊಲೀಸರನ್ನು ತಳ್ಳಿ ಒಳನುಗ್ಗಲು ಯತ್ನ
- ಶಾಂತಿ ಕಾಪಾಡುವಂತೆ ಪೊಲೀಸರಿಂದ ಮನವಿ

'ಬಾಂಗ್ಲಾದೇಶವು ಜಿಹಾದಿ ಮನಃಸ್ಥಿತಿಯನ್ನು ಹೊಂದಿರುವಾಗ, ನಾವು ಒಬ್ಬೊಬ್ಬರೇ ಏನು ಮಾಡಲಾದೀತು? ಬಾಂಗ್ಲಾದ ಪ್ರತಿ ಹಿಂದೂ ಕುಟುಂಬದ ಜತೆಗೆ ವಿಎಚ್‌ಪಿ, ಬಜರಂಗದಳದ ಸದಸ್ಯರು ನಿಲ್ಲಲಿದ್ದಾರೆ' ಎಂದು ಹೇಳಿದರು.

ಏನಾಗಿತ್ತು?: ಡಿಸೆಂಬರ್ 18ರಂದು ಧರ್ಮನಿಂದೆಯ ಆರೋಪ ಹೊರಿಸಿ ಜವಳಿ ಕಾರ್ಖಾನೆಯ 25 ವರ್ಷದ ನೌಕರ ದೀಪುದಾಸ್ ಮೇಲೆ ಗುಂಪೊಂದು ಕಾರ್ಖಾನೆ ಹೊರಗೆ ಮನಬಂದಂತೆ ಥಳಿಸಿ, ಬಳಿಕ ನೇಣು ಹಾಕಿ ಹತ್ಯೆಗೈದಿತ್ತು. ನಂತರ ಬೇರೆ ಸ್ಥಳಕ್ಕೆ ಕೊಂಡೊಯ್ದು ಮೃತದೇಹಕ್ಕೆ ಬೆಂಕಿ ಇಟ್ಟಿತ್ತು' ಎಂದು ಪೊಲೀಸರು ತಿಳಿಸಿದ್ದರು.

> **ಬಾಂಗ್ಲಾದೇಶಿಯರು ಅಕ್ರಮವಾಗಿ ರಾಜಧಾನಿಯಲ್ಲಿ ನೆಲಸಿದ್ದಾರೆ. ಪ್ರತಿ ಭಾರತೀಯ ಶಾಂತಿ ಬಯಸುತ್ತಾರೆ. ಆದರೆ, ಬಾಂಗ್ಲಾದೇಶಿಯರು ನಮ್ಮ ಸಹೋದರರನ್ನು ಕೊಲ್ಲುತ್ತಿದ್ದಾರೆ**
> **ಸುಮಿತ್ ಕಶ್ಯಪ್,** ಪ್ರತಿಭಟನಕಾರ

> **ಬಾಂಗ್ಲಾದ ನೂರಾರು ಮಂದಿ ನಮ್ಮ ದೇಶದಲ್ಲಿದ್ದಾರೆ. ಒಬ್ಬರೇ ಒಬ್ಬ ವ್ಯಕ್ತಿಗೆ ಜೀವಹಾನಿಯಾಗಿದೆಯೇ? ಬಾಂಗ್ಲಾದಲ್ಲಿ ಭಾರತೀಯರ ಮೇಲಿನ ಹಿಂಸೆಯನ್ನು ಒಪ್ಪಲು ಸಾಧ್ಯವಿಲ್ಲ**
> **ಸತೀಶ್ ಗುಪ್ತಾ,** ಪ್ರತಿಭಟನಕಾರ



ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದಾಳಿಯನ್ನು ಖಂಡಿಸಿ ನವದೆಹಲಿಯಲ್ಲಿ ವಿಶ್ವಹಿಂದೂ ಪರಿಷತ್ ಹಾಗೂ ಬಜರಂಗದಳದ ಕಾರ್ಯಕರ್ತರು ಬ್ಯಾರಿಕೇಡ್ ಹತ್ತಿ ಬಾಂಗ್ಲಾ ಹೈಕಮಿಷನ್ ಕಚೇರಿ ಒಳಗೆ ನುಗ್ಗಲು ಯತ್ನಿಸಿದರು–ಪಿಟಿಐ ಚಿತ್ರ

ಡೆಪ್ಯುಟಿ ಹೈಕಮಿಷನ್ ಕಚೇರಿಗೆ ಮುತ್ತಿಗೆ ಯತ್ನ

ಕೋಲ್ಕತ್ತ (ಪಿಟಿಐ): ಇಲ್ಲಿನ ಬಾಂಗ್ಲಾದೇಶದ ಡೆಪ್ಯುಟಿ ಹೈಕಮಿಷನ್ ಕಚೇರಿ ಪ್ರವೇಶಿಸಲು ಹಿಂದೂ ಸಂಘಟನೆಯ ನೂರಾರು ಕಾರ್ಯಕರ್ತರು ಯತ್ನಿಸಿದರು. ಈ ವೇಳೆ ಪೊಲೀಸರು ಅವರನ್ನು ತಡೆಯಲು ಮುಂದಾದರು.

ಮಧ್ಯ ಕೋಲ್ಕತ್ತದ ಬೆಕ್ ಬಾಗಾನ್ ಪ್ರದೇಶದಲ್ಲಿರುವ ಕಚೇರಿ ಸಮೀಪವೇ ಪ್ರತಿಭಟನಕಾರರು ಬಂದ ಸಂದರ್ಭದಲ್ಲಿ ಜಲಫಿರಂಗಿಯ ಮೂಲಕ ಚದುರಿಸಲು ಯತ್ನಿಸಿದರು. ಬಳಿಕ, 12 ಮಂದಿ ಪ್ರತಿಭಟನಕಾರರನ್ನು ಪೊಲೀಸರು ಬಂಧಿಸಿದರು.

ಈ ವೇಳೆ ಹಲವು ಪ್ರತಿಭಟನಕಾರರು ಗಾಯಗೊಂಡರೆ, ಕೆಲವು ಪೊಲೀಸರಿಗೂ ಸಣ್ಣಪುಟ್ಟ ಗಾಯಗಳಾಗಿವೆ.

'ಪರಿಸ್ಥಿತಿಯು ನಿಯಂತ್ರಣದಲ್ಲಿದೆ. ಅಕ್ರಮವಾಗಿ ಪ್ರವೇಶಿಸಲು ಯತ್ನಿಸಿದ 12 ಮಂದಿಯನ್ನು ಬಂಧಿಸಲಾಗಿದೆ. ಕಚೇರಿಯ ಒಳಭಾಗದಲ್ಲಿರುವ ಸಿಬ್ಬಂದಿಯ ರಕ್ಷಣೆಗಾಗಿ ಹೆಚ್ಚುವರಿ ಪೊಲೀಸ್ ಬಂದೋಬಸ್ತ್ ಒದಗಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಮ್ಮು, ರಜೌರಿಯಲ್ಲಿ ಪ್ರತಿಭಟನೆ: ದೀಪುದಾಸ್ ಹತ್ಯೆ ಖಂಡಿಸಿ ಜಮ್ಮು ಮತ್ತು ಕಾಶ್ಮೀರದ ಹೈಕೋರ್ಟ್ ವಕೀಲರ ಸಂಘದ ಸದಸ್ಯರು ಮಂಗಳವಾರ ಜಮ್ಮುವಿನಲ್ಲಿ ಪ್ರತಿಭಟನೆ ನಡೆಸಿದರು.

ಅಮೆರಿಕ ಸಂಸದರ ಖಂಡನೆ

ನ್ಯೂಯಾರ್ಕ್/ವಾಷಿಂಗ್ಟನ್: ಬಾಂಗ್ಲಾದೇಶದಲ್ಲಿ ಹಿಂದೂ ವ್ಯಕ್ತಿಯೊಬ್ಬರ ಮೇಲೆ ದಾಳಿ ಮಾಡಿ, ಕೊಂದಿರುವುದನ್ನು ಅಮೆರಿಕ ಸಂಸದರು ಖಂಡಿಸಿದ್ದಾರೆ.

ಧಾರ್ಮಿಕ ಅಲ್ಪಸಂಖ್ಯಾತರನ್ನು ರಕ್ಷಿಸುವಂತೆ ಮತ್ತು ಘಟನೆಯ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಸಂಸದರಾದ ರಾಜಾ ಕೃಷ್ಣಮೂರ್ತಿ ಮತ್ತು ಜೆನಿಫರ್ ರಾಜ್‌ಕುಮಾರ್ ಆಗ್ರಹಿಸಿದ್ದಾರೆ.

'ಬಾಂಗ್ಲಾದ ಭಾಗವಾಗಲಿದೆ ಅಸ್ಸಾಂ'

ಚಬುಆ, ದಿಬ್ರೂಗಢ (ಪಿಟಿಐ): 'ವಲಸಿಗರು ಶೇ 10ರಷ್ಟು ಹೆಚ್ಚಾದರೆ ಅಸ್ಸಾಂ ಬಾಂಗ್ಲಾ ದೇಶದ ಭಾಗವಾಗಲಿದೆ' ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ತಿಳಿಸಿದ್ದಾರೆ. 'ಕಳೆದೈದು ವರ್ಷಗಳಿಂದಲೂ ಈ ವಿಷಯವನ್ನು ನಾನು ಪ್ರಸ್ತಾಪಿಸುತ್ತಿದ್ದೇನೆ. ಅಸ್ಸಾಂನಲ್ಲಿ ಶೇಕಡಾ 40ರಷ್ಟು ಬಾಂಗ್ಲಾದೇಶ ಮೂಲದವರು ನೆಲಸಿದ್ದಾರೆ' ಎಂದು ಹೇಳಿದ್ದಾರೆ.

ಢಾಕಾ: ಭಾರತದ ಹೈ ಕಮಿಷನರ್‌ಗೆ ಸಮನ್ಸ್

ಢಾಕಾ (ಪಿಟಿಐ): ಭಾರತದಲ್ಲಿರುವ ತನ್ನ ಹೈಕಮಿಷನ್ ಕಚೇರಿಗಳ ಭದ್ರತೆ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಬಾಂಗ್ಲಾದೇಶದ ವಿದೇಶಾಂಗ ಸಚಿವಾಲಯ, ಭಾರತದ ಹೈ ಕಮಿಷನರ್ ಪ್ರಣಯ್ ವರ್ಮಾ ಅವರಿಗೆ ಮಂಗಳವಾರ ಸಮನ್ಸ್ ನೀಡಿದೆ.



ಭಾರತದಲ್ಲಿರುವ ತನ್ನ ಹೈಕಮಿಷನ್ ಕಚೇರಿ, ವೀಸಾ ಕೇಂದ್ರಗಳ ಎದುರು ನಡೆಯುತ್ತಿರುವ ಹಿಂಸಾತ್ಮಕ ಪ್ರತಿಭಟನೆಗಳ ಬಗ್ಗೆ ಬಾಂಗ್ಲಾದೇಶ ಕಳವಳ ವ್ಯಕ್ತಪಡಿಸಿದೆ.

ಇಂಥ ಘಟನೆಗಳ ಬಗ್ಗೆ ತನಿಖೆ ನಡೆಸುವಂತೆ ಹಾಗೂ ಬಾಂಗ್ಲಾದೇಶದ ಹೈಕಮಿಷನ್ ಮತ್ತು ಇತರ ರಾಜತಾಂತ್ರಿಕ ಕಚೇರಿಗಳ ಭದ್ರತೆಗೆ ಕ್ರಮವಹಿಸುವಂತೆ ಭಾರತ ಸರ್ಕಾರವನ್ನು ಒತ್ತಾಯಿಸಿದೆ.

ಕಳೆದ 10 ದಿನಗಳಲ್ಲಿ ವರ್ಮಾ ಅವರಿಗೆ ಎರಡನೇ ಬಾರಿಗೆ ಸಮನ್ಸ್ ನೀಡಲಾಗಿದೆ.

ಪತ್ರಕರ್ತರ ಕಳವಳ: ಬಾಂಗ್ಲಾದೇಶದ ಮಾಧ್ಯಮಗಳು ಕಷ್ಟದ ಪರಿಸ್ಥಿತಿಯಲ್ಲಿವೆ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಿಂತ ಜೀವಿಸುವ ಹಕ್ಕನ್ನು ರಕ್ಷಿಸಿಕೊಳ್ಳಬೇಕಾಗಿದೆ ಎಂದು ಬಾಂಗ್ಲಾದೇಶದ ಪ್ರಮುಖ ಪತ್ರಿಕೆಗಳ ಸಂಪಾದಕರು ಆತಂಕ ವ್ಯಕ್ತಪಡಿಸಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಜಯ್ ಹಜಾರೆ ಟ್ರೋಫಿಯ ಪಂದ್ಯಕ್ಕೆ ಅವಕಾಶ ನೀಡದಿರುವುದು ಸರಿಯೇ?

ಸರಿ | ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಅರಾವಳಿ: ಗಣಿಗಾರಿಕೆ ವಿರುದ್ಧ ಕಾಂಗ್ರೆಸ್ ಆಂದೋಲನ

ಜೈಪುರ (ಪಿಟಿಐ): ಅರಾವಳಿ ಪರ್ವತ ಶ್ರೇಣಿಯಲ್ಲಿ ಪ್ರಸ್ತಾಪಿತ ಗಣಿಗಾರಿಕೆಯ ವ್ಯಾಪ್ತಿಯ ಕುರಿತು ಕೇಂದ್ರ ಮತ್ತು ರಾಜಸ್ಥಾನದ ಬಿಜೆಪಿ ನೇತೃತ್ವದ ಸರ್ಕಾರಗಳು ಜನರ ಹಾದಿ ತಪ್ಪಿಸುತ್ತಿವೆ ಎಂದು ಕಾಂಗ್ರೆಸ್ ಆರೋಪಿಸಿದೆ.



100 ಮೀಟರ್‌ಗಿಂತ ಹೆಚ್ಚು ಎತ್ತರವಿರುವ ಬೆಟ್ಟಗಳನ್ನು ಮಾತ್ರವೇ ಅರಾವಳಿ ಪರ್ವತ ಶ್ರೇಣಿಗೆ ಪರಿಗಣಿಸಲಾಗುವುದು ಎಂಬ ಮಾನದಂಡದ ವಿರುದ್ಧ 19 ಜಿಲ್ಲೆಗಳಲ್ಲಿ ಆಂದೋಲನವನ್ನು ಹಮ್ಮಿಕೊಳ್ಳುವುದಾಗಿ ತಿಳಿಸಿದೆ.

ರಾಜಸ್ಥಾನದ ಕಾಂಗ್ರೆಸ್ ಘಟಕದ ಅಧ್ಯಕ್ಷ ಗೋವಿಂದ ಸಿಂಗ್ ದೋತಾಸ್ರಾ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಟಿಕಾ ರಾಮ್ ಜುಲ್ಲಿ ಅವರು ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ದೊಡ್ಡ ಪ್ರಮಾಣದ ಗಣಿಗಾರಿಕೆಗೆ ಅನುವು ಮಾಡಿಕೊಡಲು ಬಿಜೆಪಿ ಸರ್ಕಾರ ಮುಂದಾಗಿದೆ. ಈ ನಿರ್ಧಾರವನ್ನು ಹಿಂತೆಗೆದುಕೊಳ್ಳುವವರೆಗೂ 'ಅರಾವಳಿ ಬಚಾವೋ' ಆಂದೋಲನವನ್ನು ಮುಂದುವರಿಸುತ್ತೇವೆ' ಎಂದು ದೋತಾಸ್ರಾ ಆರೋಪಿಸಿದರು.

ಚಿಟಿಕೆ ಸುದ್ದಿ

ಸ್ವರ್ಣವಸ್ತ್ರ ಮೆರವಣಿಗೆ ಆರಂಭ



ಪತ್ತನಂತಿಟ್ಟ (ಕೇರಳ) (ಪಿಟಿಐ): ಶಬರಿಮಲೆಯಲ್ಲಿ ನಡೆಯಲಿರುವ ಮಂಡಲಪೂಜೆಯಲ್ಲಿ ಅಯ್ಯಪ್ಪ ಸ್ವಾಮಿಗೆ ಅಲಂಕರಿಸುವ ಸ್ವರ್ಣವಸ್ತ್ರದ ಮೆರವಣಿಗೆಯು ಇಲ್ಲಿನ ಅರನ್ಮುಳದ ಶ್ರೀ ಪಾರ್ಥಸಾರಥಿ ದೇಗುಲದಿಂದ ಮಂಗಳವಾರ ಆರಂಭವಾಗಿದೆ.

ಅಲಂಕೃತ ರಥದಲ್ಲಿ ಸ್ವರ್ಣವಸ್ತ್ರದ ಮೆರವಣಿಗೆ ಹೊರಟಿದ್ದು, ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಅಧಿಕಾರಿಗಳು ಹಾಗೂ ಅಪಾರ ಪ್ರಮಾಣದ ಭಕ್ತರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಶಬರಿಮಲೆ ತಲುಪುವ ಸಾಂಪ್ರದಾಯಿಕ ಮಾರ್ಗಗಳ ಮೂಲಕ ಮೆರವಣಿಗೆ ಹಾದು ಹೋಗಲಿದ್ದು, ಮಾರ್ಗದಲ್ಲಿನ ವಿವಿಧ ದೇವಾಲಯಗಳಲ್ಲಿ ಸ್ವರ್ಣವಸ್ತ್ರಕ್ಕೆ ಸ್ವಾಗತ ಸಿಗಲಿದೆ.

ವಿಮಾನಕ್ಕೆ ಬಾಂಬ್ ಬೆದರಿಕೆ

ಹೈದರಾಬಾದ್ (ಪಿಟಿಐ): ಲಂಡನ್‌ನಿಂದ ಹೈದರಾಬಾದ್‌ಗೆ ಹೊರಟಿದ್ದ ಬ್ರಿಟಿಷ್ ಏರ್‌ವೇಸ್ ವಿಮಾನಕ್ಕೆ ಸೋಮವಾರ ಬಾಂಬ್ ಬೆದರಿಕೆ ಕರೆ ಬಂದಿದ್ದು, ಕೆಲಕಾಲ ಆತಂಕಕ್ಕೆ ಕಾರಣವಾಗಿತ್ತು. ಕೂಡಲೇ ವಿಮಾನವನ್ನು ಸುರಕ್ಷಿತವಾಗಿ ಕೆಳಗಿಳಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ರಾಜೀವ್ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಗ್ರಾಹಕರ ಸಹಾಯ ಕೇಂದ್ರಕ್ಕೆ ಬಾಂಬ್ ಬೆದರಿಕೆ ಮೇಲ್ ಕಳುಹಿಸಲಾಗಿತ್ತು ಎಂದು ತಿಳಿಸಿವೆ.

ವಿಮಾನ ಭೂಸ್ಪರ್ಶದ ವೇಳೆ ಅಗ್ನಿಶಾಮಕ ದಳದ ಸಜ್ಜು ಸೇರಿದಂತೆ ಸುರಕ್ಷತಾ ಮಾನದಂಡಗಳನ್ನು ಪಾಲಿಸಲಾಗಿತ್ತು ಎಂದು ಹೇಳಿವೆ.

ಸಚಿವ ಜೈಶಂಕರ್ ಶ್ಲಾಘಿಸಿದ ತರೂರ್

ನವದೆಹಲಿ (ಪಿಟಿಐ): ಬಿಹಾರದಲ್ಲಿ ನಳಂದ ವಿಶ್ವವಿದ್ಯಾಲಯವನ್ನು ಸ್ಥಾಪಿಸಿರುವುದಕ್ಕೆ ಮತ್ತು ದೇಶಕ್ಕೆ ಇತರ ಹಲವು ಕೊಡುಗೆ ನೀಡಿರುವುದಕ್ಕೆ ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ಅವರ ಸಚಿವಾಲಯವನ್ನು ಕಾಂಗ್ರೆಸ್ ನಾಯಕ ಶಶಿ ತರೂರ್ ಮಂಗಳವಾರ ಶ್ಲಾಘಿಸಿದ್ದಾರೆ.



'ನಳಂದ ವಿ.ವಿಯಲ್ಲಿ ನಡೆದ ಸಾಹಿತ್ಯ ಉತ್ಸವದಲ್ಲಿ ಭಾಗಿಯಾಗಿದ್ದ ನನಗೆ ಅಲ್ಲಿನ ವಾತಾವರಣ ಇಷ್ಟವಾಯಿತು. ಇದಕ್ಕಾಗಿ ಜೈಶಂಕರ್ ಮತ್ತು ಭಾರತದ ರಾಜತಾಂತ್ರಿಕರನ್ನು ಅಭಿನಂದಿಸುತ್ತೇನೆ. ವಿದೇಶಾಂಗ ಇಲಾಖೆ ದೇಶಕ್ಕೆ ನೀಡಿದ ಕೊಡುಗೆಗಳಲ್ಲಿ ಇದು ಮಹತ್ವದ್ದಾಗಿದೆ' ಎಂದು ಸಂಸದ ತರೂರ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಶ್ರೀಲಂಕಾಕ್ಕೆ ₹4,000 ಕೋಟಿ ಪ್ಯಾಕೇಜ್

ಕೊಲಂಬೊ (ಪಿಟಿಐ): ದಿತ್ವಾ ಚಂಡಮಾರುತದಿಂದ ತತ್ತರಿಸಿರುವ ಶ್ರೀಲಂಕಾದ ಮರುನಿರ್ಮಾಣಕ್ಕೆ ನೆರವು ನೀಡುವ ನಿಟ್ಟಿನಲ್ಲಿ ಭಾರತವು ಮಂಗಳವಾರ ₹4.28 ಸಾವಿರ ಕೋಟಿ (450 ಮಿಲಿಯನ್ ಡಾಲರ್) ಪ್ಯಾಕೇಜ್ ಘೋಷಿಸಿದೆ.

ಎರಡು ದಿನಗಳ ಶ್ರೀಲಂಕಾ ಪ್ರವಾಸ ಕೈಗೊಂಡಿರುವ ವಿದೇಶಾಂಗ ಸಚಿವ ಎಸ್. ಜೈಶಂಕರ್, ಪ್ರಧಾನಿ ಹರಿಣಿ ಅಮರಸೂರ್ಯ ಅವರನ್ನು ಭೇಟಿ ಮಾಡಿದ ವೇಳೆ ಈ ಕುರಿತು ಘೋಷಿಸಿದ್ದಾರೆ. ನಂತರ ಅವರು, ಶ್ರೀಲಂಕಾ ಅಧ್ಯಕ್ಷ ಅನುರಾ ಕುಮಾರ ಅವರೊಂದಿಗೆ ಮಾತುಕತೆ ನಡೆಸಿದರು.

ಉದ್ಘಾಟನೆ: ಕಿಲಿನೊಚ್ಚಿ ಜಿಲ್ಲೆಯ ಬೈಲೆ ಸೇತುವೆಯನ್ನು ಜೈಶಂಕರ್ ಉದ್ಘಾಟಿಸಿದ್ದಾರೆ.

ಹೋರಾಟಕ್ಕೆ ಇಮ್ರಾನ್ ಕರೆ

ಲಾಹೋರ್ (ಪಿಟಿಐ): ಪಾಕಿಸ್ತಾನ ರಕ್ಷಣಾ ಪಡೆಗಳ ಮುಖ್ಯಸ್ಥ ಅಸೀಮ್ ಮುನೀರ್ ಅವರ 'ಏಕಪಕ್ಷೀಯ ನೀತಿ' ವಿರುದ್ಧ ಬೀದಿಗಿಳಿದು ಹೋರಾಟ ನಡೆಸುವಂತೆ ಜೈಲಿನಲ್ಲಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ತಮ್ಮ ಬೆಂಬಲಿಗರಿಗೆ ಕರೆ ನೀಡಿದ್ದಾರೆ.



ಈ ಸಂಬಂಧ ಸಿದ್ಧತೆ ನಡೆಸುವಂತೆ ತಮ್ಮ ಪಾಕಿಸ್ತಾನ–ಐ–ಇನ್ಸಾಫ್(ಪಿಟಿಐ) ಪಕ್ಷದ ನಾಯಕ ಹಾಗೂ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಮುಖ್ಯಮಂತ್ರಿ ಸೊಹಾಲಿ ಅಫ್ರಿದಿ ಅವರಿಗೆ ಖಾನ್ ಸೂಚಿಸಿದ್ದಾರೆ.

'ಪಾಕಿಸ್ತಾನದ ನಿಜವಾದ ಸ್ವಾತಂತ್ರ್ಯಕ್ಕಾಗಿ ನಾನು ನನ್ನ ಜೀವವನ್ನು ಸಮರ್ಪಿಸಲು ಸಿದ್ಧನಿದ್ದೇನೆ.' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸುಪ್ರೀಂ ಕೋರ್ಟ್ ಅಭಿಪ್ರಾಯ • ವಿಧವೆಯೊಬ್ಬರಿಗೆ ಬೆಂಕಿ ಇಟ್ಟ ಪ್ರಕರಣ

'ಜೀವಿತಾವಧಿವರೆಗೆ ಶಿಕ್ಷೆ ವಿಧಿಸುವಂತಿಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಚಾರಣಾ ನ್ಯಾಯಾಲಯ ಒಬ್ಬ ವ್ಯಕ್ತಿಯ ಸ್ವಾಭಾವಿಕ ಜೀವಿತಾವಧಿವರೆಗೆ ಜೀವಾವಧಿ ಶಿಕ್ಷೆಯನ್ನು ವಿಧಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಅಹಸಾನುದ್ದೀನ್ ಅಮಾನುಲ್ಲಾಹ್ ಮತ್ತು ಕೆ.ವಿನೋದ್ ಚಂದ್ರನ್ ನೇತೃತ್ವದ ನ್ಯಾಯಪೀಠವು, ಜೀವಿತಾವಧಿಯವರೆಗೆ ಜೀವಾವಧಿ ಶಿಕ್ಷೆ ವಿಧಿಸುವ ಅಧಿಕಾರ ಸಾಂವಿಧಾನಿಕ ನ್ಯಾಯಾಲಯಗಳಿಗೆ ಮಾತ್ರ ಇರುತ್ತದೆ. ಸೆಷನ್ಸ್ ಕೋರ್ಟ್‌ಗಳಿಗೆ ಅಂಥ ಅಧಿಕಾರ ಇರುವುದಿಲ್ಲ ಎಂದು ಸ್ಪಷ್ಟಪಡಿಸಿತು. ಲೈಂಗಿಕವಾಗಿ ಸಹಕರಿಸದ ವಿಧವೆಯೊಬ್ಬರಿಗೆ ಬೆಂಕಿ ಇಟ್ಟ ಪ್ರಕರಣದ ಅಪರಾಧಿ ಕಿರಣ್ ಮನವಿಯನ್ನು ನ್ಯಾಯಾಲಯವು ಭಾಗಶಃ ಪರಿಗಣಿಸಿತು. ಘಟನೆ ನಡೆದ 10 ದಿನಗಳ ನಂತರ ಸಂತ್ರಸ್ತೆಯು ಮೃತಪಟ್ಟಿದ್ದರು.

ತಪ್ಪಿತಸ್ಥನಿಗೆ ವಿಚಾರಣಾ ನ್ಯಾಯಾಲಯವು ಜೀವಿತಾವಧಿಯವರೆಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿತ್ತು ಮತ್ತು ಸೆಕ್ಷನ್ 428ರ ಅಡಿಯಲ್ಲಿ ಕ್ಷಮೆಯನ್ನೂ ಪಡೆಯುವಂತಿಲ್ಲ ಎಂದು ಸೂಚಿಸಿತ್ತು.

ಪ್ರಕರಣದ ವಿಚಾರಣೆ ನಡೆಸಿದ ಪೀಠವು, ತಪ್ಪಿತಸ್ಥ ಎಂಬ ತೀರ್ಪನ್ನು ಎತ್ತಿಹಿಡಿಯಿತು ಮತ್ತು 14 ವರ್ಷಗಳ ಜೀವಾವಧಿ ಶಿಕ್ಷೆಯಾಗಿ ಪರಿಷ್ಕರಿಸಿತು.

ಅಖ್ಲಾಕ್ ಪ್ರಕರಣ: ಸರ್ಕಾರದ ಅರ್ಜಿ ವಜಾ

ನೊಯಿಡಾ (ಪಿಟಿಐ): ದಾದ್ರಿಯಲ್ಲಿ 2015ರಲ್ಲಿ ನಡೆದ ಮೊಹಮ್ಮದ್ ಅಖ್ಲಾಕ್ ಹತ್ಯೆ ಪ್ರಕರಣದ ಆರೋಪಿಗಳ ವಿರುದ್ಧದ ಆರೋಪಗಳನ್ನು ಕೈಬಿಡುವಂತೆ ಕೋರಿ ಉತ್ತರ ಪ್ರದೇಶ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸೂರಜ್‌ಪುರದ ನ್ಯಾಯಾಲಯ ಮಂಗಳವಾರ ತಿರಸ್ಕರಿಸಿದೆ.

'ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಪ್ರಾಸಿಕ್ಯೂಷನ್ ಸಲ್ಲಿಸಿರುವ ಅರ್ಜಿಯನ್ನು 'ಆಧಾರರಹಿತ' ಎಂದು ಹೇಳಿ ವಜಾಗೊಳಿಸಿದೆ. ಪ್ರತಿದಿನ ವಾದ–ಪ್ರತಿವಾದ ಆಲಿಸಿ ವಿಚಾರಣೆಯನ್ನು ತ್ವರಿತಗೊಳಿಸುವಂತೆ ನಿರ್ದೇಶಿಸಿದೆ. ಮುಂದಿನ ವಿಚಾರಣೆಯನ್ನು ಜನವರಿ 6ಕ್ಕೆ ನಿಗದಿಪಡಿಸಲಾಗಿದೆ' ಎಂದು ಅಖ್ಲಾಕ್ ಅವರ ಕುಟುಂಬದ ಪರ ವಕೀಲ ಯೂಸುಫ್ ಸೈಫಿ ತಿಳಿಸಿದರು.



ಸಾಮಾಜಿಕ ಸೌಹಾರ್ದತೆ ಕಾಪಾಡುವ ಉದ್ದೇಶದಿಂದ ಎಲ್ಲ ಆರೋಪಿಗಳ ವಿರುದ್ಧದ ಪ್ರಕರಣವನ್ನು ಹಿಂಪಡೆಯಲು ಅನುಮತಿ ಕೋರಿ ಉತ್ತರ ಪ್ರದೇಶ ಸರ್ಕಾರ ನ್ಯಾಯಾಲಯದ ಮೊರೆ ಹೋಗಿತ್ತು. ರಾಜ್ಯ ಸರ್ಕಾರ ಮತ್ತು ಪ್ರಾಸಿಕ್ಯೂಷನ್ ಇಲಾಖೆಯ ಜಂಟಿ ನಿರ್ದೇಶಕರ ನಿರ್ದೇಶನದ ಅನ್ವಯ ಜಿಲ್ಲಾ ಸಹಾಯಕ ಸರ್ಕಾರಿ ವಕೀಲರು (ಅಪರಾಧ) ಅರ್ಜಿ ಸಲ್ಲಿಸಿದ್ದರು.

ಉತ್ತರ ಪ್ರದೇಶದ ದಾದ್ರಿಯಲ್ಲಿ ಗೋವಿನ ಮಾಂಸ ಸಂಗ್ರಹಿಸಿಟ್ಟಿದ್ದಾರೆ ಎನ್ನುವ ಗಾಳಿಸುದ್ದಿ ಕಾರಣಕ್ಕೆ ಅಖ್ಲಾಕ್ ಎಂಬ ವ್ಯಕ್ತಿಯನ್ನು ಗುಂಪುಹತ್ಯೆ ಮಾಡಲಾಗಿತ್ತು.

ಕಾರ್ತಿ ವಿರುದ್ಧ ಆರೋಪ ನಿಗದಿಪಡಿಸುವಂತೆ ಆದೇಶ

ನವದೆಹಲಿ(ಪಿಟಿಐ): ಚೀನಾ ವೀಸಾ ಹಗರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಸಂಸದ ಕಾರ್ತಿ ಪಿ. ಚಿದಂಬರಂ ಮತ್ತು ಇತರ ಆರು ಜನರ ವಿರುದ್ಧ ಆರೋಪ ನಿಗದಿಪಡಿಸುವಂತೆ ದೆಹಲಿ ನ್ಯಾಯಾಲಯ ಮಂಗಳವಾರ ಆದೇಶಿಸಿದೆ.



ಕಾರ್ತಿ ಪಿ. ಚಿದಂಬರಂ

ಪ್ರಕರಣದ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶ (ಸಿಬಿಐ) ದಿಗ್ ವಿನಯ್ ಸಿಂಗ್, ಏಳು ಆರೋಪಿಗಳ ವಿರುದ್ಧ ಆರೋಪಗಳನ್ನು ನಿಗದಿಪಡಿಸುವಂತೆ ಆದೇಶಿಸಿದರು. ಪ್ರಕರಣದ ಮತ್ತೊಬ್ಬ ಆರೋಪಿ ಚೇತನ್ ಶ್ರೀವಾಸ್ತವ ಎಂಬವರನ್ನು ಖುಲಾಸೆಗೊಳಿಸಿದರು.

ಏಳು ಆರೋಪಿಗಳ ವಿರುದ್ಧ ಕ್ರಿಮಿನಲ್ ಪಿತೂರಿಯ ಆರೋಪದ ಮೇಲೆ ಆರೋಪಗಳನ್ನು ನಿಗದಿಪಡಿಸುವಂತೆ ನ್ಯಾಯಾಲಯ ಆದೇಶಿಸಿದೆ. ಆದೇಶದಲ್ಲಿನ ಮತ್ತಷ್ಟು ವಿವರಣೆನ್ನು ನಿರೀಕ್ಷಿಸಲಾಗುತ್ತಿದೆ.

2011ರಲ್ಲಿ ಕಾರ್ತಿ ಅವರ ತಂದೆ ಪಿ. ಚಿದಂಬರಂ ಅವರು ಕೇಂದ್ರ ಗೃಹ ಸಚಿವರಾಗಿದ್ದಾಗ, ವಿದ್ಯುತ್ ಕಂಪನಿಯೊಂದರ ಚೀನಾ ಪ್ರಜೆಗಳಿಗೆ ವೀಸಾ ಕೊಡಿಸುವಲ್ಲಿ ಲಂಚ ಪಡೆದ ಆರೋಪ ಎದುರಿಸುತ್ತಿದ್ದರು. ಇದಕ್ಕೆ ಸಂಬಂಧಿಸಿದಂತೆ ಕಾರ್ತಿ ಚಿದಂಬರಂ ಮತ್ತು ಇತರರ ವಿರುದ್ಧ ಸಿಬಿಐ 2024ರ ಅಕ್ಟೋಬರ್ ಆರಂಭದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ಬ್ಲೂಬರ್ಡ್ ಉಡಾವಣೆಗೆ ಕ್ಷಣಗಣನೆ

ಶ್ರೀಹರಿಕೋಟಾ (ಆಂಧ್ರ ಪ್ರದೇಶ) (ಪಿಟಿಐ): ಹೊಸ ತಲೆಮಾರಿನ ಅಮೆರಿಕದ ಸಂವಹನ ಉಪಗ್ರಹ 'ಬ್ಲೂಬರ್ಡ್ ಬ್ಲಾಕ್-2' ಅನ್ನು ನಭಕ್ಕೆ ಹೊತ್ತೊಯ್ಯುವ ಎಲ್‌ವಿಎಂ3–ಎಂ6 ರಾಕೆಟ್ ಉಡಾವಣೆಗೆ ಕ್ಷಣಗಣನೆ ಆರಂಭವಾಗಿದೆ ಎಂದು ಇಸ್ರೊ ಮಂಗಳವಾರ ತಿಳಿಸಿದೆ.

'ಬ್ಲೂಬರ್ಡ್ ಬ್ಲಾಕ್-2' ಉಪಗ್ರಹವನ್ನು ಡಿಸೆಂಬರ್ 24ರಂದು ಬೆಳಿಗ್ಗೆ 8.54ಕ್ಕೆ ಆಂಧ್ರ ಪ್ರದೇಶದ ಶ್ರೀಹರಿಕೋಟಾ ಉಡ್ಡಯನ ಕೇಂದ್ರದ ಎರಡನೇ ಲಾಂಚ್ ಪ್ಯಾಡ್‌ನಿಂದ ಉಡ್ಡಯನ ಮಾಡಲು ಇಸ್ರೊ ಸಿದ್ಧತೆ ಮಾಡಿಕೊಂಡಿದೆ.

ಎಲ್‌ವಿಎಂ3 ರಾಕೆಟ್, ಇದೇ ಮೊದಲ ಬಾರಿಗೆ 6,100 ಕೆ.ಜಿ ತೂಕದ ಪೇಲೋಡ್‌ಗಳನ್ನು ನಭಕ್ಕೆ ಹೊತ್ತೊಯ್ಯುತ್ತಿದೆ.

ಭೂ ಮೇಲ್ಮೈನಿಂದ 600 ಕಿ.ಮೀ. ಎತ್ತರದಲ್ಲಿ ವಾಣಿಜ್ಯ ಉದ್ದೇಶದ ಉಪಗ್ರಹವನ್ನು ಸೇರಿಸುವ ಮಹತ್ವದ ಯೋಜನೆ ಇದಾಗಿದೆ. ಬ್ಲೂಬರ್ಡ್ ಬ್ಲಾಕ್–2 ಉಪಗ್ರಹವು ಉಡಾವಣೆಯಾದ 15 ನಿಮಿಷಗಳ ಬಳಿಕ ಉಡಾವಣಾ ವಾಹಕದಿಂದ ಪ್ರತ್ಯೇಕಗೊಳ್ಳಲಿದೆ. ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ಮತ್ತು ಅಮೆರಿಕ ಮೂಲದ ಎಎಸ್‌ಟಿ ಸ್ಪೇಸ್‌ಮೊಬೈಲ್ ನಡುವೆ ನಡೆದ ಖಾಸಗಿ ಒಪ್ಪಂದದ ಭಾಗವಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್, ಇಸ್ರೊ ಅಡಿಯಲ್ಲಿ ಕಾರ್ಯನಿರ್ವಹಿಸುವ ಅಂಗಸಂಸ್ಥೆಯಾಗಿದೆ.

6,100 ಕೆ.ಜಿ.– ಬ್ಲೂಬರ್ಡ್ ಬ್ಲಾಕ್–2ನ ತೂಕ
4,400 ಕೆ.ಜಿ.– ಎಲ್‌ವಿಎಂ3–ಎಂ5 ರಾಕೆಟ್‌ನಲ್ಲಿ ಈ ಹಿಂದೆ ಕೊಂಡೊಯ್ದಿದ್ದ ಉಪಗ್ರಹದ ತೂಕ (ನವೆಂಬರ್ 2ರಂದು ಉಡಾವಣೆ)
43.5 ಮೀಟರ್–ಎಲ್‌ವಿಎಂ3 ರಾಕೆಟ್‌ನ ಎತ್ತರ
*ರಾಕೆಟ್ ವಿನ್ಯಾಸ ಮತ್ತು ಅಭಿವೃದ್ಧಿ: ಇಸ್ರೊದ ಲಿಕ್ವಿಡ್ ಪ್ರೊಪಲ್ಷನ್ ಸಿಸ್ಟಮ್ ಸೆಂಟರ್



ಉಪಗ್ರಹ ಉಡಾವಣೆ ಮುನ್ನ ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಅವರು ಮಂಗಳವಾರ ತಿರುಪತಿಯ ವೆಂಕಟೇಶ್ವರ ದೇಗುಲಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು.

ಉಪಗ್ರಹದ ವಿಶೇಷತೆ

- ಜಗತ್ತಿನಾದ್ಯಂತ ಸ್ಮಾರ್ಟ್‌ಫೋನ್‌ಗಳಿಗೆ ನೇರವಾಗಿ ಹೈ–ಸ್ಪೀಡ್ ಸೆಲ್ಯುಲಾರ್ ಬ್ರಾಡ್‌ಬ್ಯಾಂಡ್ ಪೂರೈಸುವಂತೆ ಈ ಉಪಗ್ರಹವನ್ನು ವಿನ್ಯಾಸಗೊಳಿಸಲಾಗಿದೆ
- ಎಎಸ್‌ಟಿ ಸ್ಪೇಸ್‌ಮೊಬೈಲ್ ಕಂಪನಿಯು ಇದೇ ಮೊದಲ ಬಾರಿಗೆ ಬಾಹ್ಯಾಕಾಶ ಆಧಾರಿತ ಸೆಲ್ಯುಲಾರ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್ ನಿರ್ಮಿಸುತ್ತಿದೆ. ಇದನ್ನು ಸ್ಮಾರ್ಟ್‌ಫೋನ್‌ಗಳಿಗೆ ನೇರವಾಗಿ ಬಳಕೆ ಮಾಡಬಹುದು. ಇದನ್ನು ಸರ್ಕಾರಿ ಮತ್ತು ವಾಣಿಜ್ಯ ಸೇವೆಗಳ ಅಪ್ಲಿಕೇಷನ್‌ಗಳಿಗಾಗಿ ವಿನ್ಯಾಸಗೊಳಿಸಲಾಗಿದೆ
- ಪ್ರತಿಯೊಬ್ಬರಿಗೂ ಎಲ್ಲಾ ಸಮಯದಲ್ಲೂ 4ಜಿ, 5ಜಿ ಧ್ವನಿ ಮತ್ತು ವಿಡಿಯೊ ಕಾಲ್, ಟೆಕ್ಸ್ಟ್, ಸ್ಟ್ರೀಮಿಂಗ್ ಮತ್ತು ಡೇಟಾವನ್ನು ಒದಗಿಸುತ್ತದೆ



ಚಳಿ.. ಚಳಿ

ಪಿಟಿಐ ಚಿತ್ರ

ಪ್ರಯಾಗರಾಜ್‌ನಲ್ಲಿ ಕೊರೆಯುವ ಚಳಿಯ ಮಧ್ಯೆ ವ್ಯಕ್ತಿಯೊಬ್ಬರು ತ್ರಿವರ್ಣಧ್ವಜ ಹಿಡಿದುಕೊಂಡು ನಿಂತಿದ್ದ ದೃಶ್ಯ

ಲಂಡನ್: ಗ್ರೆಟಾ ಥನ್‌ಬರ್ಗ್ ಬಂಧನ

ಲಂಡನ್ (ಎಪಿ): ಪ್ಯಾಲೆಸ್ಟೀನ್ ಪರ ಹೋರಾಟಗಾರರನ್ನು ಬೆಂಬಲಿಸಿ ಧರಣಿ ನಡೆಸುತ್ತಿರುವ ಸ್ವೀಡನ್‌ನ ಹೋರಾಟಗಾರ್ತಿ ಗ್ರೆಟಾ ಥನ್‌ಬರ್ಗ್ ಅವರನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

'ನಿಷೇಧಿತ ಸಂಘಟನೆಯೊಂದರ ಬೆಂಬಲಕ್ಕೆ ನಿಂತ ಆರೋಪದ ಮೇಲೆ ಮಹಿಳೆಯೊಬ್ಬರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪ್ಯಾಲೆಸ್ಟೀನ್ ಪರ ಬೀದಿಗಿಳಿದಿದ್ದ ಹೋರಾಟಗಾರರನ್ನು ಬಂಧಿಸಿ, ಜೈಲಿನಲ್ಲಿರಿಸಲಾಗಿದೆ. ತಮ್ಮ ವಿರುದ್ಧ ವಿಚಾರಣೆ ನಡೆಯುತ್ತಿದ್ದು, ಈ ವೇಳೆ ಬಂಧಿಸಿ ಜೈಲಿನಲ್ಲಿ ಇರಿಸಿದ್ದನ್ನು ಖಂಡಿಸಿ ಹೋರಾಟಗಾರರು ಸೆರೆಮನೆಯಲ್ಲಿಯೇ ಪ್ರತಿಭಟಿಸುತ್ತಿದ್ದಾರೆ. ಇವರನ್ನು ಬೆಂಬಲಿಸಿ ಗ್ರೆಟಾ ಹೋರಾಟ ಕೈಗೊಂಡಿದ್ದಾರೆ.

22 ವರ್ಷದ ಗ್ರೆಟಾ ಅವರು ತಮ್ಮನ್ನು ಬೆಂಬಲಿಸಿ, ಭಿತ್ತಿಪತ್ರ ಹಿಡಿದು ಪ್ರತಿಭಟಿಸುತ್ತಿರುವ ವಿಡಿಯೊವನ್ನು 'ಪ್ಯಾಲೆಸ್ಟೀನ್ ಆ್ಯಕ್ಷನ್' ಸಂಘಟನೆ ಹಂಚಿಕೊಂಡಿತ್ತು. ಈ ಸಂಘಟನೆಯನ್ನು ಬ್ರಿಟನ್ ಸರ್ಕಾರ 'ಭಯೋತ್ಪಾದಕ ಸಂಘಟನೆ' ಎಂದು ಘೋಷಿಸಿದ್ದು, ನಿಷೇಧಿಸಿದೆ.

'ರಾಹುಲ್ ಮೇಲೆ ಸ್ವಪಕ್ಷೀಯರಿಗೇ ನಂಬಿಕೆ ಇಲ್ಲ'

ನವದೆಹಲಿ (ಪಿಟಿಐ): 'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತಮ್ಮ ಸಹೋದ್ಯೋಗಿಗಳು, ಸ್ವಪಕ್ಷೀಯರು ಹಾಗೂ ಕುಟುಂಬಸ್ಥರ ವಿಶ್ವಾಸವನ್ನೇ ಕಳೆದುಕೊಂಡಿದ್ದಾರೆ. ಇದೇ ಹತಾಶೆಯಿಂದಲೇ ಅವರು ವಿದೇಶಿ ನೆಲದಲ್ಲಿ ನಿಂತು ಭಾರತದ ವಿರುದ್ಧ ಮಾತನಾಡುತ್ತಾ, ಅಪಪ್ರಚಾರಕ್ಕೆ ಮುಂದಾಗಿದ್ದಾರೆ' ಎಂದು ಬಿಜೆಪಿ ಮಂಗಳವಾರ ಕಿಡಿ ಕಾರಿದೆ.



ಬರ್ಲಿನ್‌ನಲ್ಲಿ ಕಳೆದವಾರ ನಡೆದ ಕಾರ್ಯಕ್ರಮವೊಂದರಲ್ಲಿ ರಾಹುಲ್ ಗಾಂಧಿ ಮಾತನಾಡಿದ್ದರು. ಈ ವಿಡಿಯೊವನ್ನು ಕಾಂಗ್ರೆಸ್ ಸೋಮವಾರ ಬಿಡುಗಡೆಗೊಳಿಸಿತ್ತು. ಇದನ್ನು ಆಕ್ಷೇಪಿಸಿ, ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ ಮಂಗಳವಾರ ದೆಹಲಿಯಲ್ಲಿರುವ ಪಕ್ಷದ ಕೇಂದ್ರ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದರು.

'ರಾಹುಲ್ ಗಾಂಧಿ ಮೇಲೆ ಜನರೂ ವಿಶ್ವಾಸ ಕಳೆದುಕೊಂಡಿದ್ದಾರೆ. ಇಂಡಿಯಾ ಕೂಟದ ಪಾಲುದಾರರು, ಸ್ವಪಕ್ಷದ ನಾಯಕರು ಹಾಗೂ ಸ್ವತಃ ರಾಹುಲ್ ಅವರ ಕುಟುಂಬಸ್ಥರೂ ಅವರ ಮೇಲಿನ ನಂಬಿಕೆ ಕಳೆದುಕೊಂಡಿದ್ದಾರೆ. ರಾಹುಲ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವು 95 ಚುನಾವಣೆಗಳನ್ನು ಸೋತಿರುವುದು ಇದಕ್ಕೆ ಸಾಕ್ಷಿ' ಎಂದು ಟೀಕಿಸಿದ್ದಾರೆ.

'ಇದೇ ಹತಾಶೆಯಲ್ಲಿ ಜಾರ್ಜ್ ಸೋರೊಸ್ (ಅಮೆರಿಕದ ಹೂಡಿಕೆದಾರ) ಅವರ ಮೇಲಿನ ನಿಷ್ಠೆಯೊಂದಿಗೆ ಭಾರತ ಮತ್ತು ಬಿಜೆಪಿ ವಿರುದ್ಧದ ಕೋಪವನ್ನು ಹೊರಹಾಕಲು ರಾಹುಲ್ ಮತ್ತೊಮ್ಮೆ ವಿದೇಶ ಪ್ರವಾಸ ಕೈಗೊಂಡಿದ್ದರು. ಈ ಮೂಲಕ ಮೋದಿ ಹಾಗೂ ದೇಶದ ಜನತೆಯ ನಿರ್ಣಯದ ವಿರುದ್ಧ ನಿಂತು ಬರ್ಲಿನ್‌ನಲ್ಲಿ ಭಾರತವನ್ನು ಹೀಗೆಳೆದಿದ್ದಾರೆ' ಎಂದು ಪೂನಾವಾಲಾ ಆರೋಪಿಸಿದ್ದಾರೆ.

ಷರತ್ತುಬದ್ಧ ಜಾಮೀನು • ಜ.16ಕ್ಕೆ ಮೇಲ್ಮನವಿ ವಿಚಾರಣೆ

ಅತ್ಯಾಚಾರ: ಸೆಂಗರ್ ಶಿಕ್ಷೆ ಅಮಾನತು

ನವದೆಹಲಿ (ಪಿಟಿಐ): ಉನ್ನಾವೊ ಅತ್ಯಾಚಾರ ಪ್ರಕರಣದ ಅಪರಾಧಿ, ಬಿಜೆಪಿಯ ಉಚ್ಚಾಟಿತ ನಾಯಕ ಕುಲದೀಪ್ ಸಿಂಗ್ ಸೆಂಗರ್ ಅನುಭವಿಸುತ್ತಿರುವ ಜೀವಾವಧಿ ಶಿಕ್ಷೆಯನ್ನು ದೆಹಲಿ ಹೈಕೋರ್ಟ್ ಮಂಗಳವಾರ ಅಮಾನತುಗೊಳಿಸಿದೆ.



ಕುಲದೀಪ್ ಸೆಂಗರ್

'ಸಂತ್ರಸ್ತೆಯ ನಿವಾಸದ 5 ಕಿ.ಮೀ. ವ್ಯಾಪ್ತಿಯೊಳಗೆ ಸೆಂಗರ್ ಪ್ರವೇಶಿಸಬಾರದು ಮತ್ತು ಸಂತ್ರಸ್ತೆ ಮತ್ತು ಅವರ ತಾಯಿಗೆ ಬೆದರಿಕೆ ಒಡ್ಡಬಾರದು' ಎಂದು ನ್ಯಾಯಮೂರ್ತಿಗಳಾದ ಸುಬ್ರಮಣಿಯಂ ಪ್ರಸಾದ್ ಮತ್ತು ಹರೀಶ್ ವೈದ್ಯನಾಥನ್ ಶಂಕರ್ ಅವರ ಪೀಠ ಷರತ್ತು ವಿಧಿಸಿ ಜಾಮೀನು ನೀಡಿದೆ.

2019 ಡಿಸೆಂಬರ್‌ನಲ್ಲಿ ವಿಚಾರಣಾ ನ್ಯಾಯಾಲಯ ವಿಧಿಸಿರುವ ಜೀವಾವಧಿ ಶಿಕ್ಷೆಯನ್ನು ಪ್ರಶ್ನಿಸಿ ಸೆಂಗರ್ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ಪೂರ್ಣಗೊಳ್ಳುವವರೆಗೆ ಶಿಕ್ಷೆ ಅಮಾನತಿನಲ್ಲಿರಲಿದೆ.

ಸುಪ್ರೀಂ ಆದೇಶದನ್ವಯ ರೋಸ್ಟರ್ ಪೀಠದಲ್ಲಿ ಜನವರಿ 16ರಂದು ಸೆಂಗರ್ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ನಿಗದಿಪಡಿಸಿದೆ.

ಸೆಂಗರ್ 2017ರಲ್ಲಿ ಬಾಲಕಿಯೊಬ್ಬರನ್ನು ಅಪಹರಿಸಿ, ಅತ್ಯಾಚಾರ ಎಸಗಿದ್ದ. ಅತ್ಯಾಚಾರ ಪ್ರಕರಣ ಮತ್ತು ಅದಕ್ಕೆ ಸಂಬಂಧಿಸಿದ ಇತರ ಪ್ರಕರಣಗಳನ್ನು ಉತ್ತರಪ್ರದೇಶ ವಿಚಾರಣಾ ನ್ಯಾಯಾಲಯದಿಂದ ದೆಹಲಿ ಹೈಕೋರ್ಟ್‌ಗೆ ವರ್ಗಾಯಿಸುವಂತೆ ಸುಪ್ರೀಂ ಕೋರ್ಟ್ 2019ರಲ್ಲಿ ಆದೇಶಿಸಿತ್ತು.

ಸಂತ್ರಸ್ತೆಯ ತಂದೆಯ ಕಸ್ಟಡಿ ಸಾವಿನ ಪ್ರಕರಣದಲ್ಲಿ ಸೆಂಗರ್‌ಗೆ 10 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ.

ಲೂಸಿ ವಿರುದ್ಧ ಚಾರ್ಜ್‌ಶೀಟ್ ಪರಿಗಣನೆ

2009–10ರ ಅವಧಿಯಲ್ಲಿ ಕೃತಕ ಅಂಗಾಂಗ ಹಾಗೂ ಉಪಕರಣಗಳ ವಿತರಣೆಯಲ್ಲಿ ಸರ್ಕಾರದ ಅನುದಾನವನ್ನು ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷೀದ್ ಪತ್ನಿ ಲೂಸಿ ಖುರ್ಷೀದ್ ವಿರುದ್ಧ ಜಾರಿ ನಿರ್ದೇಶನಾಲಯವು (ಇ.ಡಿ) ಸಲ್ಲಿಸಿದ್ದ ಚಾರ್ಜ್‌ಶೀಟ್ ಪರಿಗಣಿಸಲು ವಿಶೇಷ ನ್ಯಾಯಾಲಯವು ಒಪ್ಪಿಗೆ ನೀಡಿದೆ.



ಲೂಸಿ ಖುರ್ಷೀದ್

'ಆರೋಪಿ ವಿರುದ್ಧ ಕಾನೂನು ಕ್ರಮಕ್ಕೆ ಅವಕಾಶ ನೀಡುವಂತೆ ಕೋರಿ ಇ.ಡಿ ಮನವಿ ಮಾಡಿತ್ತು. ಇದಕ್ಕೆ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ವಿಶೇಷ ನ್ಯಾಯಾಲಯವು ಒಪ್ಪಿಗೆ ಸೂಚಿಸಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಬೆಳವಣಿಗೆಗಳ ಕುರಿತಂತೆ ಪ್ರತಿಕ್ರಿಯಿಸಲು ಲೂಸಿ ಖುರ್ಷೀದ್ ನಿರಾಕರಿಸಿದರು. ಲೂಸಿ ಖುರ್ಷಿದ್ ಅವರು ಪ್ರಾಜೆಕ್ಟ್ ಮ್ಯಾನೇಜರ್ ಆಗಿರುವ ಜಾಕೀರ್ ಹುಸೇನ್ ಮೆಮೊರಿಯಲ್ ಟ್ರಸ್ಟ್ 2009–10ರಲ್ಲಿ ಕೃತಕ ಅಂಗಾಂಗ ವಿತರಿಸುವುದಾಗಿ ಕೇಂದ್ರ ಸರ್ಕಾರದಿಂದ ₹71.50 ಲಕ್ಷ ಅನುದಾನ ಪಡೆದಿತ್ತು. ಆದರೆ, ಅಂಗಾಂಗ ವಿತರಿಸದೇ ಹಣವನ್ನು ಸ್ವಂತಕ್ಕೆ ಬಳಸಿಕೊಳ್ಳಲಾಗಿತ್ತು. ಈ ಕುರಿತು 2017ರಲ್ಲಿ ಉತ್ತರ ಪ್ರದೇಶ ಸರ್ಕಾರವು ಎಫ್‌ಐಆರ್ ದಾಖಲಿಸಿತ್ತು.

ಠಾಕ್ರೆ ಸಹೋದರರ ಮೈತ್ರಿ ಘೋಷಣೆ ಇಂದು

ಮುಂಬೈ: ತಿಂಗಳುಗಳ ಕಾಲ ನಡೆದ ಮಾತುಕತೆಯ ನಂತರ, ಉದ್ಧವ್ ಠಾಕ್ರೆ ನೇತೃತ್ವದ ಶಿವ ಸೇನೆ (ಯುಬಿಟಿ) ಮತ್ತು ರಾಜ್ ಠಾಕ್ರೆ ನೇತೃತ್ವದ ಎಂಎನ್‌ಎಸ್ ಮುಂಬರುವ ಮಹಾರಾಷ್ಟ್ರ ಪಾಲಿಕೆ ಚುನಾವಣೆಗಳಿಗೆ ಚಾಲನೆ ನೀಡುವ ಸಲುವಾಗಿ ಬುಧವಾರ ಔಪಚಾರಿಕ ಚುನಾವಣಾ ಮೈತ್ರಿಯನ್ನು ಘೋಷಿಸಲಿವೆ.

ಜುಲೈ ತಿಂಗಳಲ್ಲಿ ಉದ್ಧವ್ ಮತ್ತು ರಾಜ್ ಠಾಕ್ರೆ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದರು. ಈ ವೇಳೆ ಅವರು ಮಹಾರಾಷ್ಟ್ರ ಸರ್ಕಾರ ಹೊರಡಿಸಿದ್ದ 1–5ನೇ ತರಗತಿವರೆಗಿನ ಮರಾಠಿ ಮತ್ತು ಇಂಗ್ಲಿಷ್ ಶಾಲೆಗಳಲ್ಲಿ ಹಿಂದಿಯನ್ನು ಮೂರನೇ ಭಾಷೆಯಾಗಿ ಪರಿಚಯಿಸುವ ಹೊಸ ಶಿಕ್ಷಣ ನೀತಿಯಡಿಯ ತ್ರಿಭಾಷಾ ಸೂತ್ರ ಮೇಲಿನ ಎರಡು ಆದೇಶವನ್ನು ಹಿಂತೆದುಕೊಳ್ಳುವಂತೆ ಒತ್ತಾಯಿಸಿದ್ದರು.

ಈ ನಡುವೆ, ವಲಸಿಗ ವಿರೋಧಿ ನಿಲುವು ಮತ್ತು ಇತರ ನೀತಿಗಳ ಕಾರಣಕ್ಕಾಗಿ ರಾಜ್ ಅವರ ಪಕ್ಷವೂ ವಿರೋಧ ಪಕ್ಷಕ್ಕೆ ಸೇರುವುದನ್ನು ಕಾಂಗ್ರೆಸ್ ನಿರ್ಬಂಧಿಸಿದ್ದರಿಂದ ಮಹಾ ವಿಕಾಸ್ ಆಘಾಡಿಯಲ್ಲಿ ಬಿರುಕುಗಳು ಹುಟ್ಟಿಕೊಂಡವು.

ಇಬ್ಬರೂ ಠಾಕ್ರೆಗಳ ನೇತೃತ್ವದ ಎರಡೂ ಪಕ್ಷಗಳು ಆರ್ಥಿಕ ರಾಜಧಾನಿ ಮುಂಬೈ ಸೇರಿದಂತೆ ರಾಜ್ಯದ 29 ಮಹಾನಗರ ಪಾಲಿಕೆಗಳ ಸುಮಾರು ಅರ್ಧ ಡಜನ್ ಸ್ಥಾನಗಳಲ್ಲಿ ಒಟ್ಟಾಗಿ ಸ್ಪರ್ಧಿಸುವ ನಿರೀಕ್ಷೆಯಿದೆ.

ಚಿಟಿಕೆ ಸುದ್ದಿ

₹3 ಕೋಟಿ ಮೌಲ್ಯದ 140 ಕೆ.ಜಿ ಬೆಳ್ಳಿ ಕಳ್ಳತನ

ಚಿಕ್ಕಬಳ್ಳಾಪುರ: ನಗರದ ಬಿ.ಬಿ ರಸ್ತೆಯ ಎಯು ಚಿನ್ನಾಭರಣ ಮಾರಾಟ ಮಳಿಗೆಯ ಶಟರ್ ಮುರಿದು ಕಳ್ಳರು ಸೋಮವಾರ ರಾತ್ರಿ 140 ಕೆ.ಜಿ ಬೆಳ್ಳಿ ದೋಚಿದ್ದಾರೆ. ಇದರ ಮೌಲ್ಯ ಅಂದಾಜು ₹3 ಕೋಟಿ.

ಶಟರ್ ಮುರಿದಿರುವ ಕಳ್ಳರು ಚಿನ್ನದ ಆಭರಣಗಳ ಲಾಕರ್ ಮುರಿಯಲಾಗದೇ ಬೆಳ್ಳಿ ದೋಚಿದ್ದಾರೆ. ತಮ್ಮ ಚಹರೆ ಮರೆಮಾಚಲು ಸಿ.ಸಿ.ಟಿ.ವಿ ಕ್ಯಾಮರಾ ಡಿವಿಆರ್ ಅನ್ನೂ ಕೊಂಡೊಯ್ದಿದ್ದಾರೆ.

ಸ್ಥಳಕ್ಕೆ ಶ್ವಾನದಳ, ಬೆರಳಚ್ಚು ತಜ್ಞರನ್ನು ಕರೆಸಲಾಗಿತ್ತು. ಪೊಲೀಸ್ ಅಧಿಕಾರಿಗಳು ಭೇಟಿ ನೀಡಿದ್ದಾರೆ. 'ಆರೋಪಿಗಳ ಪತ್ತೆಗೆ ತಂಡ ರಚಿಸಲಾಗಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ ತಿಳಿಸಿದ್ದಾರೆ.

ಬಿಎಂಡಬ್ಲ್ಯು ಪತ್ರ ನೀಡಲು ಲಂಚ: ಬಂಧನ

ಹಾವೇರಿ: ಕ್ಲಿನಿಕ್ ನಡೆಸಲು ಅಗತ್ಯವಿದ್ದ ವೈದ್ಯಕೀಯ ತ್ಯಾಜ್ಯ ನಿರ್ವಹಣಾ ಪ್ರಮಾಣಪತ್ರ (ಬಿಎಂಡಬ್ಲ್ಯು) ನೀಡಲು ₹10 ಸಾವಿರ ಲಂಚ ಕೇಳಿದ್ದ ದಾವಣಗೆರೆ ಎಂತ್ರ ಆಪರೇಟರ್ ನವೀನ ಬೆಳ್ಳಿಗೆ ಅವರನ್ನು ಲೋಕಾಯುಕ್ತ ಪೊಲೀಸರಿಗೆ ಮಂಗಳವಾರ ಸಿಕ್ಕಿಬಿದ್ದಿದ್ದಾರೆ.

'ಆರೋಪಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಕಚೇರಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಡಾ. ನಿಖಿಲ್ ಎ.ಎಚ್. ಅವರು ಬಿಎಂಡಬ್ಲ್ಯು ಪ್ರಮಾಣಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಪ್ರಮಾಣಪತ್ರ ನೀಡಲು ಆರೋಪಿ ₹10 ಸಾವಿರ ಲಂಚ ಕೇಳಿದ್ದರು. ₹6 ಸಾವಿರ ಪಡೆಯುವಾಗ ಸಿಕ್ಕಿಬಿದ್ದರು' ಎಂದಿದ್ದಾರೆ.

ಸಿಎಂಎಸ್ ಪರೀಕ್ಷೆ ಡಾ.ನಿಖಿಲ್‌ಗೆ 409ನೇ ರ‍್ಯಾಂಕ್

ಹೂವಿನಹಡಗಲಿ (ವಿಜಯನಗರ): ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸಿದ 2025ನೇ ಸಾಲಿನ ಕಂಬೈನ್ಡ್ ಮೆಡಿಕಲ್ ಸರ್ವೀಸ್ ಪರೀಕ್ಷೆಯಲ್ಲಿ ಪಟ್ಟಣದ ನಿವಾಸಿ ಡಾ.ನಿಖಿಲ್ ಎಸ್.ಬಿಳವಡಿ 409ನೇ ರ‍್ಯಾಂಕ್ ಗಳಿಸಿದ್ದು, ಕೇಂದ್ರ ವೈದ್ಯಕೀಯ ಸೇವೆಗೆ ಆಯ್ಕೆಯಾಗಿದ್ದಾರೆ.



ಡಾ.ನಿಖಿಲ್

ಇಲ್ಲಿನ ಸರ್ಕಾರಿ ಆಯುರ್ವೇದಿಕ್ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಕೊಟ್ರೇಶ್ ಅವರ ಪುತ್ರರಾದ ನಿಖಿಲ್ ಬೆಂಗಳೂರಿನ ಬಿಜಿಎಸ್ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡಿದ್ದು, ಅಲ್ಲಿಯೇ ಕೆಲಸ ಮಾಡುತ್ತಿದ್ದಾರೆ.

ಇಬ್ಬರು ಮಕ್ಕಳ ಕಾಲುವೆಗೆ ತಳ್ಳಿದ ತಂದೆ

ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): ಆಂಧ್ರಪ್ರದೇಶದ ಬೊಮ್ಮನ ಹಾಳ್ ಠಾಣಾ ವ್ಯಾಪ್ತಿಯಲ್ಲಿ ಕಾಣೆಯಾಗಿದ್ದ ಇಬ್ಬರು ಬಾಲಕಿಯರಲ್ಲಿ ಒಬ್ಬಳ ಶವ ಜಿಲ್ಲೆಯ ಸಿರಿಗೇರಿ ಬಳಿ ತುಂಗಭದ್ರಾ ಕಾಲುವೆಯಲ್ಲಿ ಪತ್ತೆಯಾಗಿದೆ.

ಅನಸೂಯ (12) ಮೃತ ಬಾಲಕಿ. ಸಿಂಧು (12) ಮೃತದೇಹಕ್ಕಾಗಿ ಶೋಧಕಾರ್ಯ ನಡೆಯುತ್ತಿದೆ.

ಬೊಮ್ಮನ ಹಾಳ್ ಬಳಿಯ ನೇಮಕಲ್ ಗ್ರಾಮದ ನಿವಾಸಿ ಕಲ್ಲಪ್ಪ ಎಂಬುವವರು 5 ಮತ್ತು 6ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಇಬ್ಬರು ಹೆಣ್ಣು ಮಕ್ಕಳನ್ನು ಭಾನುವಾರ ಬಳ್ಳಾರಿ ಜಿಲ್ಲೆಯ ಸಿರಿಗೇರಿ ಬಳಿಗೆ ಕರೆತಂದಿದ್ದನೆನ್ನಲಾಗಿದೆ. ಕಲ್ಲಪ್ಪ ಒಬ್ಬನೇ ಮರಳಿದ್ದನ್ನು ಕಂಡು ಮನೆಯವರು ಅಲ್ಲಿನ ಠಾಣೆಗೆ ದೂರು ನೀಡಿದ್ದರು.

ಆತನನ್ನು ಕರೆತಂದು ಸಿರಿಗೇರಿ ಕ್ರಾಸ್ ಬಳಿಯ ತುಂಗಭದ್ರಾ ಬಲದಂಡೆ ಕಾಲುವೆಯ (ಎಲ್ ಎಲ್ ಸಿ) ಬಳಿ ಮಂಗಳವಾರ ಶೋಧ ನಡೆಸಲಾಗಿತ್ತು. ಈ ವೇಳೆ, ಅನಸೂಯ ಶವ ಪತ್ತೆಯಾಗಿದೆ.

ಜೀನ್ಸ್ ಪಾರ್ಕ್: ನಿವೇಶನ ದರ ಕಡಿತ

ಎಕರೆ ವಿಸ್ತೀರ್ಣದ ಕೈಗಾರಿಕಾ ನಿವೇಶನ ದರ ₹1.35 ಕೋಟಿಯಿಂದ ₹67.50 ಲಕ್ಷಕ್ಕೆ ಇಳಿಕೆ

• ಹರಿಶಂಕರ್ ಆರ್.

ಬಳ್ಳಾರಿ: ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಬಳ್ಳಾರಿ 'ಜೀನ್ಸ್ ಪಾರ್ಕ್'ನಲ್ಲಿನ ಕೈಗಾರಿಕಾ ನಿವೇಶನಗಳ ಬೆಲೆಯನ್ನು ರಾಜ್ಯ ಸರ್ಕಾರ ಅರ್ಧದಷ್ಟು ಇಳಿಕೆ ಮಾಡಿದೆ.

ಬಳ್ಳಾರಿ ಹೊರವಲಯದ ಸಂಜೀವ ರಾಯನ ಕೋಟೆಯಲ್ಲಿ 'ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ)' ಅಂದಾಜು 650 ಎಕರೆ ಪ್ರದೇಶದಲ್ಲಿ ಜೀನ್ಸ್ ಪಾರ್ಕ್ ಅಭಿವೃದ್ಧಿಪಡಿಸುತ್ತಿದೆ. ಮೊದಲ ಹಂತದಲ್ಲಿ 154.7 ಎಕರೆ ಭೂಮಿಯನ್ನು ಅಭಿವೃದ್ಧಿಪಡಿಸುತ್ತಿದೆ.

ಈ ಕೈಗಾರಿಕಾ ಪ್ರದೇಶದಲ್ಲಿ ವಿವಿಧ ಅಳತೆಗಳಲ್ಲಿ ಅಂದರೆ, ಕಾಲು ಎಕರೆ ವಿಸ್ತೀರ್ಣದ 75 ನಿವೇಶನ, ಅರ್ಧ ಎಕರೆಯ 47, ಒಂದು ಎಕರೆಯ 3, ಒಂದೂವರೆ ಎಕರೆಯ -45, ಐದು ಎಕರೆಯ 2, 10 ಎಕರೆಯ 1 ನಿವೇಶನ ಸೇರಿ ಒಟ್ಟು 173 ಕೈಗಾರಿಕಾ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.



ಉದ್ದಿಮೆದಾರರನ್ನು ಆಕರ್ಷಿಸಲು ನಿವೇಶನಗಳ ಬೆಲೆ ಇಳಿಸಿ, ಎಲ್ಲ ಸವಲತ್ತು ನೀಡಲಾಗುತ್ತಿದೆ. ಪಾರ್ಕ್ ನಿರ್ಮಾಣದ ಅಡಿಗಲ್ಲು ಕಾರ್ಯಕ್ರಮಕ್ಕೆ ರಾಹುಲ್ ಗಾಂಧಿ ಅವರನ್ನು ಆಹ್ವಾನಿಸಿದ್ದು, ಬರುವ ನಿರೀಕ್ಷೆ ಇದೆ
ಎಂ.ಬಿ.ಪಾಟೀಲ ಕೈಗಾರಿಕೆ ಸಚಿವ

ಹಿಂದೆ ಒಂದು ಎಕರೆ ವಿಸ್ತೀರ್ಣದ ಜಾಗಕ್ಕೆ ₹1.35 ಕೋಟಿ ದರ ನಿಗದಿಪಡಿಸಲಾಗಿತ್ತು. ಉದ್ಯಮಿಗಳಿಂದ ಉತ್ತಮ ಬೇಡಿಕೆ ಬರಬಹುದು ಎಂಬ ನಿರೀಕ್ಷೆಯಿತ್ತು. ಸ್ಥಳೀಯ ಹೂಡಿಕೆದಾರರಿಂದಲೂ ಹೆಚ್ಚಿನ ಸ್ಪಂದನೆ ಸಿಕ್ಕಿಲ್ಲ ಎನ್ನಲಾಗುತ್ತಿದೆ. ಅಲ್ಲದೆ, ದರ ಇಳಿಸಬೇಕು ಎಂದು ಸ್ಥಳೀಯ ಉದ್ದಿಮೆದಾರರು ಕೋರಿದ್ದರು ಎನ್ನಲಾಗಿದೆ.



ಬಳ್ಳಾರಿ ನಗರದ ಹೊರ ವಲಯದ ಮುಂಡ್ರಿಗಿಯಲ್ಲಿನ ಅಪರೆಲ್ ಪಾರ್ಕ್‌ನಲ್ಲಿನ ಜೀನ್ಸ್ ವಾಷಿಂಗ್ ಘಟಕವೊಂದರ ಚಿತ್ರ

ನಿರೀಕ್ಷಿತ ಬೇಡಿಕೆ ಬಾರದಿರುವುದು, ದರ ಇಳಿಸಲು ಒತ್ತಾಯ ಮತ್ತು ಕಡಿಮೆ ದರದಲ್ಲಿ ನಿವೇಶನಗಳನ್ನು ನೀಡಿ, ಉದ್ದಿಮೆಗಳನ್ನು ಆಕರ್ಷಿಸುವ ಕ್ರಮವಾಗಿ ಸರ್ಕಾರ ಕೈಗಾರಿಕಾ ನಿವೇಶನಗಳ ದರವನ್ನು ಶೇ 50ರಷ್ಟು ಕಡಿತ ಮಾಡಿದೆ. ಈಗ ₹67.50 ಲಕ್ಷಕ್ಕೆ ಒಂದು ಎಕರೆ ವಿಸ್ತೀರ್ಣದ ಕೈಗಾರಿಕಾ ನಿವೇಶನ ಸಿಗಲಿದೆ.ಸ್ಥಳೀಯ ದರ್ಜಿಗಳು, ಸಣ್ಣ ವಾಷಿಂಗ್ ಘಟಕಗಳನ್ನು ಆಕರ್ಷಿಸಲು ಕಾಲು ಎಕರೆ ಅಳತೆ ಹೆಚ್ಚಿನ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಪರಿಷ್ಕೃತ ದರದಂತೆ ಕನಿಷ್ಠ ₹22.50 ಲಕ್ಷಕ್ಕೆ ಈಗ ಜೀನ್ಸ್ ಪಾರ್ಕ್‌ನಲ್ಲಿ ನಿವೇಶನ ಲಭ್ಯವಾಗಲಿದೆ.

ಬೃಹತ್ ಉದ್ದಿಮೆಗಳ ಆಕರ್ಷಣೆ: ಬಾಂಗ್ಲಾದೇಶದಲ್ಲಿ ಸದ್ಯದ ಅಶಾಂತಿ ಕಾರಣಕ್ಕೆ ಅಲ್ಲಿನ ಜೀನ್ಸ್ ತಯಾರಿಕೆ ಉದ್ಯಮ ತತ್ತರಿಸಿದೆ. ಇದರ ಲಾಭ ಪಡೆದು, ರಾಜ್ಯದಲ್ಲಿ ದೊಡ್ಡಮಟ್ಟದಲ್ಲಿ ಉದ್ದಿಮೆ ಬೆಳೆಸುವ ಇರಾದೆ ಇದೆ. ಆ ಗುರಿಯೊಂದಿಗೆ ಬಳ್ಳಾರಿಯ ಸಂಜೀವ ರಾಯನ ಕೋಟೆಯಲ್ಲೇ ಪ್ರತ್ಯೇಕ 487 ಎಕರೆ ಜಮೀನನ್ನೂ ಸರ್ಕಾರ ಸ್ವಾಧೀನಪಡಿಸಿಕೊಂಡಿದೆ ಎಂದು ಕೈಗಾರಿಕೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ನೀರು, ಸಿಇಟಿಪಿ ಭರವಸೆ

ಜೀನ್ಸ್ ಉದ್ದಿಮೆಗೆ ಪ್ರಮುಖವಾಗಿ ನೀರು ಮತ್ತು ಕಲುಷಿತ ನೀರು ಸಂಸ್ಕರಣಾ ಸಾಮಾನ್ಯ ಘಟಕ (ಸಿಇಟಿಪಿ) ಬೇಕು. ಈ ಕಾರಣಗಳಿಗಾಗಿ ಉದ್ದಿಮೆ ಹೊಡೆತ ತಿಂದಿದೆ. ಪ್ರತಿ ಬೇಸಿಗೆಯಲ್ಲಿ ಉದ್ದಿಮೆ ಬಂದ್ ಆಗುವುದು ಸಾಮಾನ್ಯವಾಗಿದೆ. ಇವೆರಡರ ಲಭ್ಯತೆ ಖಾತರಿ ಆಗದೇ ಜೀನ್ಸ್ ಪಾರ್ಕ್‌ಗೆ ಬರುವುದಿಲ್ಲ ಎಂದು ಸ್ಥಳೀಯ ಉದ್ದಿಮೆದಾರರು ಪಟ್ಟುಹಿಡಿದಿದ್ದಾರೆ. ಸರ್ಕಾರವೂ ಐದು ಎಂಎಲ್‌ಡಿ ನೀರು ಒದಗಿಸಲು ಯೋಜನೆ ರೂಪಿಸಿದೆ. ಇದಕ್ಕಾಗಿ ಟೆಂಡರ್ ಕರೆಯಲಾಗಿದೆ. ಸಿಇಟಿಪಿಗೆ ಡಿಪಿಆರ್ ಸಿದ್ಧಪಡಿಸಿರುವುದಾಗಿ ಇಲಾಖೆ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

'ಇಎಸ್‌ಐಸಿ ಆಸ್ಪತ್ರೆಗಳಲ್ಲಿ ವೈದ್ಯರ ನೇಮಕಾತಿಗೆ ಕ್ರಮ'

ಕಲಬುರಗಿ: 'ದೇಶದಾದ್ಯಂತ ಇಎಸ್‌ಐಸಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಕಾಡುತ್ತಿದೆ. ನಿಯಮಗಳನ್ನು ಸರಳೀಕರಿಸಿ ಅಗತ್ಯವಿರುವಷ್ಟು ವೈದ್ಯರ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಕೇಂದ್ರ ಕಾರ್ಮಿಕ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಇಲ್ಲಿ ತಿಳಿಸಿದರು.

ಇಎಸ್‌ಐಸಿ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ನಗರದಲ್ಲಿ ನಿರ್ಮಿಸಲಾದ ಕ್ರೀಡಾ ಸಂಕೀರ್ಣ, ಸೌರ ವಿದ್ಯುತ್ ವ್ಯವಸ್ಥೆ ಹಾಗೂ ಅಂತರ್ಜಲ ಮರುಪೂರಣ ಸೌಲಭ್ಯಗಳನ್ನು ಮಂಗಳವಾರ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

'ಇಎಸ್‌ಐಸಿಗೆ ಬೇಕಿರುವ ವೈದ್ಯರ ನೇಮಕಾತಿ ಕುರಿತು ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಕೋರಲಾಗಿದೆ. ಅವರು ವರ್ಷದಲ್ಲಿ ಎರಡು ಬಾರಿ ನೇಮಕಾತಿ ನಡೆಸುತ್ತಿದ್ದಾರೆ' ಎಂದರು.

'ದೇಶದಲ್ಲಿರುವ ಇಎಸ್‌ಐಸಿ ಆಸ್ಪತ್ರೆಗಳಲ್ಲಿ ಸಂಘಟಿತ ಕಾರ್ಮಿಕರು ಅವರ ಅವಲಂಬಿತರ ಜೊತೆಗೆ ಇನ್ನು ಮುಂದೆ ಕೃಷಿ, ಗಿಗ್, ಗಾರ್ಮೆಂಟ್ಸ್ ಸೇರಿ ಅಸಂಘಟಿತ ಕಾರ್ಮಿಕ ವರ್ಗದವರಿಗೂ ಉಚಿತವಾಗಿ ವೈದ್ಯಕೀಯ ಚಿಕಿತ್ಸಾ ಸೇವೆಯು ಲಭ್ಯವಾಗಲಿದೆ' ಎಂದೂ ಹೇಳಿದರು.



'ಕಾರ್ಮಿಕರಿಗೆ ನೆರವಾಗಲು ದೇಶದಾದ್ಯಂತ 10 ವೈದ್ಯಕೀಯ ಕಾಲೇಜು ತೆರೆಯಲಾಗುತ್ತಿದೆ. ಹೃದ್ರೋಗ ವಿಭಾಗ, ಇಎಸ್‌ಐಸಿ ವೈದ್ಯಕೀಯ ಕಾಲೇಜಿನಲ್ಲೇ ಆರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು' ಎಂದು ಹೇಳಿದರು.

ಮರ್ಯಾದೆಗೇಡು ಹತ್ಯೆ ಬಂಧಿತರ ಸಂಖ್ಯೆ ಆರಕ್ಕೆ

ಹುಬ್ಬಳ್ಳಿ: ತಾಲ್ಲೂಕಿನ ಇನಾಂ ವೀರಾಪುರ ಗ್ರಾಮದಲ್ಲಿ ನಡೆದ ಮರ್ಯಾದೆಗೇಡು ಹತ್ಯೆ ಪ್ರಕರಣದ ಸಂಬಂಧ ಪೊಲೀಸರು ಮತ್ತೆ ಮೂವರನ್ನು ಬಂಧಿಸಿದ್ದು, ಬಂಧಿತರ ಸಂಖ್ಯೆ ಆರಕ್ಕೆ ಏರಿದೆ.

ಪ್ರಮುಖ ಆರೋಪಿಗಳಾದ ಗುರುಸಿದ್ದಗೌಡ ಪಾಟೀಲ, ಫಕ್ಕೀರಗೌಡ ಪಾಟೀಲ ಮತ್ತು ಬಸನಗೌಡ ಪಾಟೀಲ ಅವರನ್ನು ಸೋಮವಾರ ತಡರಾತ್ರಿ ಬಂಧಿಸಲಾಗಿದೆ. ಮಾನ್ಯಾ ಅವರ ಅಜ್ಜ ಗುರುಸಿದ್ದಗೌಡ ಪಾಟೀಲ ತಮ್ಮ ಸಹೋದರ ಫಕ್ಕೀರಗೌಡ ಮತ್ತು ಅವರ ಪುತ್ರ ಬಸವನಗೌಡ ಜತೆ ಸೇರಿ ಕೃತ್ಯಕ್ಕೆ ಸಂಚು ರೂಪಿಸಿರುವುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ದಿವ್ಯಾಪ್ರಭು ಮಂಗಳವಾರ ವಿವೇಕಾನಂದ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಮಾನ್ಯಾ ಅವರ ಪತಿ ವಿವೇಕಾನಂದ ಅವರಿಗೆ ₹5 ಲಕ್ಷ ಪರಿಹಾರದ ಚೆಕ್ ವಿತರಿಸಿದರು.

ಮತಕಳವು: ರಾಹುಲ್ ಗಾಂಧಿಗೆ ಕೆ.ಎನ್. ರಾಜಣ್ಣ ಬರೆದಿದ್ದ ಪತ್ರ ಬಹಿರಂಗ

'ಡಿಕೆಶಿ ಗಮನಹರಿಸಿದ್ದರೆ ಹೆಚ್ಚು ಸ್ಥಾನ ಗೆಲುವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತಪಟ್ಟಿಯಲ್ಲಿದ್ದ ಲೋಪಗಳ ಬಗ್ಗೆ ಡಿ.ಕೆ. ಶಿವಕುಮಾರ್ ಸರಿಯಾಗಿ ಗಮನಹರಿಸಿದ್ದರೆ, ಮತ ಕಳವು ತಪ್ಪಿಸಬಹುದಿತ್ತು. ರಾಜ್ಯದಲ್ಲಿ ಇನ್ನೂ 8 ರಿಂದ 10 ಲೋಕಸಭಾ ಕ್ಷೇತ್ರಗಳಲ್ಲಿ ಗೆಲ್ಲಬಹುದಿತ್ತು' ಎಂದು ಶಾಸಕ ಕೆ.ಎನ್. ರಾಜಣ್ಣ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಬರೆದ ಪತ್ರದಲ್ಲಿ ಪ್ರತಿಪಾದಿಸಿದ್ದಾರೆ.



ಕೆ.ಎನ್.ರಾಜಣ್ಣ

ರಾಹುಲ್ ಅವರಿಗೆ ನ. 17ರಂದು ರಾಜಣ್ಣ ಬರೆದಿದ್ದ ಪತ್ರ ಮಂಗಳವಾರ ಬಹಿರಂಗವಾಗಿದೆ.

ಲೋಕಸಭೆ ಚುನಾವಣೆಯಲ್ಲಿ ಮತ ಕಳವು ನಡೆದಿದೆ ಎಂದು ರಾಹುಲ್ ಗಾಂಧಿ ಸೇರಿದಂತೆ ಪಕ್ಷದ ಎಲ್ಲ ನಾಯಕರು ಧ್ವನಿ ಎತ್ತಿದ್ದರು. ಆಗ ಸಚಿವರಾಗಿದ್ದ ರಾಜಣ್ಣ ಅದನ್ನು ಪ್ರಶ್ನಿಸಿದ್ದರು. ಇದು ಅವರ ಸಚಿವ ಸ್ಥಾನಕ್ಕೆ ಕುತ್ತು ತಂದಿತ್ತು.

ಮತ ಕಳವು ಬಗ್ಗೆ ತಾನು ನೀಡಿದ್ದ ಹೇಳಿಕೆ ಬಗ್ಗೆ ತಮ್ಮ ಪತ್ರದಲ್ಲಿ ಸ್ಪಷ್ಟನೆ ನೀಡಿರುವ ರಾಜಣ್ಣ, ಈ ಪತ್ರದ ಜೊತೆಗೆ ಮತಗಳ್ಳತನ ಬಗ್ಗೆ ಮಾಧ್ಯಮಗಳಿಗೆ ನೀಡಿದ್ದ ಹೇಳಿಕೆಗಳ ವಿವರವನ್ನೂ ಲಗತ್ತಿಸಿದ್ದಾರೆ. 'ನನ್ನ ಹೇಳಿಕೆಯನ್ನು ತಿರುಚಿ ತಪ್ಪಾದ ಅರ್ಥದಲ್ಲಿ ನಿಮಗೆ ವರದಿ ನೀಡಿದವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದೂ ರಾಹುಲ್‌ಗೆ ಮನವಿ ಮಾಡಿದ್ದಾರೆ.

ನಾಯಕತ್ವದ ವಿಚಾರದಲ್ಲಿ ನಡೆಯುತ್ತಿರುವ ಜಟಾಪಟಿಯ ಮಧ್ಯೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ರಾಜಣ್ಣ ಪರಸ್ಪರ ಎರಡು ಬಾರಿ ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ. ಈ ಮಧ್ಯೆ, ಅವರ ಪತ್ರ ರಾಜಕೀಯ ಕುತೂಹಲಕ್ಕೆ ಕಾರಣವಾಗಿದೆ.

'ನನ್ನನ್ನು ಸಂಪುಟದಿಂದ ವಜಾ ಮಾಡಿರುವ ಬಗ್ಗೆ ಕೆಲವು ಸತ್ಯಾಂಶಗಳನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಮತಗಳ್ಳತನ ವಿರೋಧಿ ಅಭಿಯಾನಕ್ಕೆ ನಾನು ಬೆಂಬಲ ವ್ಯಕ್ತಪಡಿಸಿದ್ದೆ. ಬೆಂಗಳೂರಿನಲ್ಲಿ ನಡೆದ ಪ್ರತಿಭಟನಾ ರ‍್ಯಾಲಿಯಲ್ಲಿ ಭಾಗವಹಿಸಿ ಸಂಪೂರ್ಣ ಬೆಂಬಲ ಸೂಚಿಸಿದ್ದೆ. ಈ ವಿಚಾರವಾಗಿ ನಿಮ್ಮ ಹೋರಾಟ ಹಾಗೂ ನಿಮ್ಮ ನಾಯಕತ್ವಕ್ಕೆ ಬೆಂಬಲ ವ್ಯಕ್ತಪಡಿಸುತ್ತೇನೆ' ಎಂದು ಪತ್ರದಲ್ಲಿ ರಾಜಣ್ಣ ತಿಳಿಸಿದ್ದಾರೆ.

'ಕೆಪಿಸಿಸಿ ನಿಯೋಜಿಸಿದ್ದ ಬಿಎಲ್‌ಒಗಳು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿಲ್ಲ ಎಂದು ಒತ್ತಿ ಹೇಳುವುದು ನನ್ನ ಹೇಳಿಕೆಯ ಉದ್ದೇಶವಾಗಿತ್ತು. ಕೆಪಿಸಿಸಿ ಅಧ್ಯಕ್ಷ ಶಿವಕುಮಾರ್ ಮತ್ತು ಸಂಬಂಧಿಸಿದವರು ಮತಪಟ್ಟಿಯಲ್ಲಿದ್ದ ಲೋಪಗಳ ಬಗ್ಗೆ ಗಮನಹರಿಸಿದ್ದರೆ ಮತಗಳ್ಳತನವನ್ನು ತಪ್ಪಿಸಬಹುದಿತ್ತು. ಇನ್ನೂ ಹೆಚ್ಚು ಸ್ಥಾನಗಳಲ್ಲಿ ಗೆಲ್ಲಬಹುದಿತ್ತು' ಎಂದು ಅವರು ವಿವರಿಸಿದ್ದಾರೆ.

'ಇತರ ರಾಜ್ಯಗಳಲ್ಲಿಯೂ ಈ ರೀತಿಯ ಲೋಪಗಳನ್ನು ತಪ್ಪಿಸಿದ್ದರೆ, 30-40 ಸ್ಥಾನಗಳನ್ನು ಹೆಚ್ಚಿಗೆ ಗೆಲ್ಲಬಹುದಿತ್ತು. ಆಗ ನರೇಂದ್ರ ಮೋದಿ ಪ್ರಧಾನಿ ಆಗುತ್ತಿರಲಿಲ್ಲ. ಬದಲಾಗಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರುತ್ತಿತ್ತು. ರಾಹುಲ್ ಗಾಂಧಿ ಪ್ರಧಾನಿ ಆಗುತ್ತಿದ್ದರು ಎಂಬ ಅರ್ಥದಲ್ಲಿ ಹೇಳಿಕೆ ನೀಡಿದ್ದೆ' ಎಂದೂ ಪತ್ರದಲ್ಲಿ ವಿವರಿಸಿದ್ದಾರೆ.

'ಸಿದ್ದರಾಮಯ್ಯ ನಾಯಕತ್ವದಿಂದ ಅಧಿಕಾರ'

'ನಾನು ನೆಹರೂ ಕುಟುಂಬದ ನಿಷ್ಠಾವಂತ ಅಭಿಮಾನಿ. ಕರ್ನಾಟಕದಲ್ಲಿ ಇಂದಿರಾ ಗಾಂಧಿ ಮತ್ತು ದೇವರಾಜ ಅರಸು ಅವರ ನಾಯಕತ್ವದಲ್ಲಿ ಭೂ ಸುಧಾರಣೆಯ ಐತಿಹಾಸಿಕ ಕಾಯ್ದೆಯನ್ನು ಅನುಷ್ಠಾನ ಮಾಡಲಾಗಿತ್ತು.

ಆ ವೇಳೆ, ನಾನು ಭೂ ನ್ಯಾಯಮಂಡಳಿಯ ಸದಸ್ಯನಾಗಿ ಕರ್ತವ್ಯ ನಿರ್ವಹಿಸಿದ್ದೆ. ಇತ್ತೀಚಿನ ದಿನಗಳಲ್ಲಿ ಅಹಿಂದ ನಾಯಕ ಸಿದ್ದರಾಮಯ್ಯ ಅವರ ನಾಯಕತ್ವದಲ್ಲಿ 2013 ಮತ್ತು 2023ರಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಸಿದ್ದರಾಮಯ್ಯ ಅವರು ದಣಿವರಿಯದೇ ಬಡವರು, ದುರ್ಬಲರು, ಎಸ್‌ಸಿ, ಎಸ್‌ಟಿ, ಒಬಿಸಿ, ಅಲ್ಪಸಂಖ್ಯಾತ ಸಮುದಾಯದ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ' ಎಂದು ರಾಜಣ್ಣ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸಿ.ಎಂ– ರಾಜಣ್ಣ ಚರ್ಚೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು 'ಕಾವೇರಿ' ನಿವಾಸದಲ್ಲಿ ಮಂಗಳವಾರ ರಾತ್ರಿ ಭೇಟಿ ಮಾಡಿದ ಕೆ.ಎನ್. ರಾಜಣ್ಣ ಮಾತುಕತೆ ನಡೆಸಿದರು. ಶಿವಕುಮಾರ್ ಜೊತೆ ಸತತ ಎರಡು ದಿನ ಸಮಾಲೋಚನೆ ನಡೆಸಿದ್ದ ರಾಜಣ್ಣ, ದಿಢೀರ್ ಆಗಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದಾರೆ.

ರಾಹುಲ್ ಗಾಂಧಿಗೆ ನ. 17ರಂದು ಬರೆದಿದ್ದ ಪತ್ರದ ಬಗ್ಗೆ ಮತ್ತು ಶಿವಕುಮಾರ್ ಅವರೊಂದಿಗೆ ನಡೆಸಿದ ವಿಚಾರವಿನಿಮಯದ ಕುರಿತು ಸಿದ್ದರಾಮಯ್ಯ ಅವರಿಗೆ ರಾಜಣ್ಣ ಮಾಹಿತಿ ನೀಡಿದ್ದಾರೆ ಎಂದು ಗೊತ್ತಾಗಿದೆ.

ಸಿಡಬ್ಲ್ಯುಸಿಗೆ ಆಹ್ವಾನ ಬಂದಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇದೇ 27 ರಂದು ನಡೆಯುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಗೆ ಆಹ್ವಾನ ಇಲ್ಲದ ಕಾರಣ ಸಭೆಗೆ ಹೋಗುತ್ತಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಸಾಮಾನ್ಯವಾಗಿ ನಮಗೆ ಆಹ್ವಾನ ಇರುವುದಿಲ್ಲ. ವಿಸ್ತರಿಸಲಾದ ಸಭೆ ಇದ್ದಾಗ ಮಾತ್ರ ನಮ್ಮನ್ನು ಕರೆಯಲಾ ಗುತ್ತದೆ. ಅಂತಹ ಸಂದರ್ಭದಲ್ಲಿ ಹಾಜರಾಗುತ್ತೇವೆ' ಎಂದು ಅವರು ಹೇಳಿದರು.

ಎಸ್‌ಐಟಿ ತನಿಖೆಗೆ ತಡೆ ನೀಡಲು ನಕಾರ

ಮೆಸ್ಸಿ ಕಾರ್ಯಕ್ರಮ

ಕೋಲ್ಕತ್ತ (ಪಿಟಿಐ): ಅರ್ಜೆಂಟೀನಾ ಫುಟ್‌ಬಾಲ್ ಆಟಗಾರ ಲಿಯೋನೆಲ್ ಮೆಸ್ಸಿ ಕಾರ್ಯಕ್ರಮದ ವೇಳೆ ನಡೆದ ಘಟನೆಗೆ ಸಂಬಂಧಿಸಿದಂತೆ ನಡೆಯುತ್ತಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ತನಿಖೆಗೆ ತಡೆ ನೀಡಲು ಕೋಲ್ಕತ್ತ ಹೈಕೋರ್ಟ್ ನಿರಾಕರಿಸಿದೆ.

ಡಿಸೆಂಬರ್ 13ರಂದು ಮೆಸ್ಸಿ ಅವರ ದರ್ಶನ ಅವಕಾಶ ಸಿಗದೇ ಕೆಲವು ಪ್ರೇಕ್ಷಕರು ಆಕ್ರೋಶಗೊಂಡು ಸಾಲ್ಟ್ ಲೇಕ್ ಮೈದಾನದ ಕಾರ್ಯಕ್ರಮ ವೇದಿಕೆಗೆ ನುಗ್ಗಿ ದಾಂದಲೆ ನಡೆಸಿದ್ದರು.

ಪ್ರಕರಣದ ತನಿಖೆಯನ್ನು ಎಸ್‌ಐಟಿ ಬದಲಿಗೆ ಸಿಬಿಐಗೆ ವರ್ಗಾಯಿಸುವಂತೆ ಕೋರಿ ಹೈಕೋರ್ಟ್‌ಗೆ ಮೂರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದ್ದವು.

ವಿಪಕ್ಷ ನಾಯಕ ಸುವೇಂದು ಅಧಿಕಾರಿ ಸೇರಿ ಮೂವರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಪ್ರೇಕ್ಷಕರಿಗೆ ಟಿಕೆಟ್ ಹಣ ಮರುಪಾವತಿ ಮಾಡುವಂತೆಯೂ ಅರ್ಜಿಯಲ್ಲಿ ಕೋರಲಾಗಿತ್ತು.

ಅಕ್ರಮ ಪಾಸ್‌ಪೋರ್ಟ್: ಕಾನ್‌ಸ್ಟೆಬಲ್ ಸೆರೆ

ಪ್ರಜಾವಾಣಿ ವಾರ್ತೆ

ವಿಟ್ಲ (ದಕ್ಷಿಣ ಕನ್ನಡ): ಸುಳ್ಳು ದಾಖಲೆ ನೀಡಿ ವ್ಯಕ್ತಿಯೊಬ್ಬರು ಅಕ್ರಮವಾಗಿ ಪಾಸ್‌ಪೋರ್ಟ್ ಪಡೆಯಲು ನೆರವಾಗಿದ್ದ ಹಾಗೂ ಆ ವ್ಯಕ್ತಿಗೆ ಪೊಲೀಸ್ ನಿರಾಕ್ಷೇಪಣಾ ಪತ್ರ ಒದಗಿಸಿದ್ದ ಕಡತ ನಾಶಪಡಿಸಿದ ಆರೋಪದ ಮೇಲೆ ವಿಟ್ಲ ಠಾಣೆಯ ಕಾನ್‌ಸ್ಟೆಬಲ್ ಪ್ರದೀಪ್ ಎಂಬಾತನನ್ನು ಅದೇ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿ ಸದ್ಯ ನ್ಯಾಯಾಂಗ ಬಂಧನ ಇದ್ದಾರೆ. ಅಕ್ರಮವಾಗಿ ಪಾಸ್ ಪೋರ್ಟ್ ಪಡೆದಿದ್ದ ಶಕ್ತಿದಾಸ್ ಎಂಬಾತನಿಗೆ, ನಿರಾಕ್ಷೇಪಣ ಪತ್ರ ಒದಗಿಸಲು ಪ್ರದೀಪ್ ನೆರವಾಗಿದ್ದ. ಆತನನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಸುಳ್ಳುದಾಖಲೆಗಳನ್ನು ಸಲ್ಲಿಸಿದ್ದ ಆರೋಪಿ ಶಕ್ತಿದಾಸ್ ವಿರುದ್ಧ ಪ್ರಕರಣ ದಾಖಲಾಗಿದೆ. ಆತನೂ ಪೊಲೀಸ್ ವಶದಲ್ಲಿದ್ದಾನೆ. 'ನಾನು ಪಶ್ಚಿಮ ಬಂಗಾಳದವನು' ಎಂದು ಆತ ಹೇಳಿಕೊಂಡಿದ್ದು, ಈ ಬಗ್ಗೆ ಪರಿಶೀಲಿಸ ಲಾಗುತ್ತಿದೆ' ಎಂದು ಪೊಲೀಸರು ಹೇಳಿದ್ದಾರೆ.



ಪ್ರದೀಪ್



ಶಕ್ತಿದಾಸ್

'ಶಕ್ತಿದಾಸ್ 2025ನೇ ಫೆಬ್ರುವರಿಯಲ್ಲಿ ಪಾಸ್‌ಪೋರ್ಟ್ ಮಾಡಿಸಲು ಅರ್ಜಿ ಸಲ್ಲಿಸಿದ್ದ. ಆ ಕುರಿತು ಪೊಲೀಸರು ಪರಿಶೀಲಿಸಿದಾಗ ಅರ್ಜಿದಾರನ ವಿಳಾಸ, ದಾಖಲಾತಿಗಳಲ್ಲಿದ್ದ ವಿಳಾಸಕ್ಕೆ ತಾಳೆಯಾಗಿರಲಿಲ್ಲ. ಹಾಗಾಗಿ ಆತನ ಅರ್ಜಿ ಪುರಸ್ಕರಿಸದಂತೆ ವಿಟ್ಲ ಠಾಣೆ ಪೊಲೀಸರು ಶಿಫಾರಸು ಮಾಡಿದ್ದರು.'

'ಅರ್ಜಿ ತಿರಸ್ಕೃತಗೊಂಡ ಬಳಿಕ ಶಕ್ತಿದಾಸ್ 2025ರ ಜೂನ್‌ನಲ್ಲಿ ಮತ್ತೆ ಅರ್ಜಿ ಸಲ್ಲಿಸಿದ್ದ. ಆಗ ಪ್ರದೀಪ್, ಆ ಅರ್ಜಿದಾರರ ವಿಳಾಸವಿರುವ ಪ್ರದೇಶದಲ್ಲಿ ಗಸ್ತು ಹೊಣೆ ಹೊತ್ತಿದ್ದ ಕಾನ್‌ಸ್ಟೆಬಲ್ ಸಾಬು ಮಿರ್ಜಿ ಅರಿವಿಗೆ ಬಾರದಂತೆ, ಅವರ ಹೆಸರಿನಲ್ಲೇ ವರದಿ ತಯಾರಿಸಿದ್ದ. ಸಾಬು ಮಿರ್ಜಿ ಸಹಿಯನ್ನೂ ಫೋರ್ಜರಿ ಮಾಡಿ, ಮೇಲಧಿಕಾರಿಯವರ ಶಿಫಾರಸು ಮಾಡಿಸಿ ಪಾಸ್‌ಪೋರ್ಟ್ ಇಲಾಖೆಗೆ ಕಳುಹಿಸಿಕೊಟ್ಟಿದ್ದ. ಈ ವಿಷಯ ಯಾರಿಗೂ ಗೊತ್ತಾಗಬಾರದು ಎಂದು ಪರಿಶೀಲಿಸಿದ್ದ ದಾಖಲೆಗಳನ್ನು ನಾಶಪಡಿಸಿದ್ದ. 2025ರ ಡಿ. 12ರಂದು ದಾಖಲೆಗಳನ್ನು ಪರಿಶೀಲಿಸಿದಾಗ ಕೃತ್ಯ ಬೆಳಕಿಗೆ ಬಂದಿತ್ತು' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ವಿದ್ಯಾರ್ಥಿಗಳಿಂದಲೇ ಬಾಲಕನಿಗೆ ಥಳಿತ

ಹೈದರಾಬಾದ್ (ಪಿಟಿಐ): ಮುಖ್ಯ ಶಿಕ್ಷಕ ಆದೇಶಿಸಿದರು ಎಂದು 7ನೇ ತರಗತಿಯ ಬಾಲಕನನ್ನು ಅದೇ ಶಾಲೆಯ ಹಿರಿಯ ವಿದ್ಯಾರ್ಥಿಗಳು ಥಳಿಸಿರುವ ಘಟನೆ ತೆಲಂಗಾಣದ ಹೈದರಾಬಾದ್‌ನಲ್ಲಿನ ಸರ್ಕಾರಿ ಶಾಲೆಯಲ್ಲಿ ನಡೆದಿದೆ.

ಶಾಲೆಯ ವಾಹನ ನಿಲುಗಡೆ ಸ್ಥಳದಲ್ಲಿ ಇರುತ್ತಿದ್ದ ಸೈಕಲ್‌ಗಳ ಚಕ್ರದಿಂದ ಗಾಳಿ ತೆಗೆದು, ಪಂಕ್ಚರ್ ಮಾಡುತ್ತಿದ್ದಾನೆ ಎಂದು 7ನೇ ತರಗತಿ ಬಾಲಕನ ಮೇಲೆ ಮುಖ್ಯೋಪಾಧ್ಯಾಯರು ಅನುಮಾನಗೊಂಡಿದ್ದರು. ಹೀಗಾಗಿ ಆತನನ್ನು ಥಳಿಸಲು ಹಿರಿಯ ವಿದ್ಯಾರ್ಥಿಗಳಿಗೆ ಸೋಮವಾರ ನಿರ್ದೇಶಿಸಿದರು.

ಬಾಲಕನು ತೀವ್ರವಾಗಿ ಗಾಯಗೊಂಡಿದ್ದಾನೆ. ಆತನ ತಾಯಿ ಪೊಲೀಸರಿಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಹೆಚ್ಚುವರಿ ನೀರಿಗಾಗಿ ರಾಜ್ಯ ಪಟ್ಟು

ನದಿಗಳ ಜೋಡಣೆಯಲ್ಲಿ ನೀರಿನ ಪಾಲು ಹಂಚಿಕೆ ಸೂತ್ರಕ್ಕೆ ತೀವ್ರ ವಿರೋಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಗೋದಾವರಿ–ಕಾವೇರಿ ನದಿಗಳ ಜೋಡಣೆಯಲ್ಲಿ ನೀರಿನ ಪಾಲು ಹಂಚಿಕೆ ಸೂತ್ರಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಕರ್ನಾಟಕ ಸರ್ಕಾರ, ಹೆಚ್ಚುವರಿ 5 ಟಿಎಂಸಿ ಅಡಿ ನೀರು ಹಂಚಿಕೆ ಮಾಡಿದರಷ್ಟೇ ಕರಡು ಒಪ್ಪಂದಕ್ಕೆ ಸಹಿ ಹಾಕಲಾಗುವುದು ಎಂದು ಸ್ಪಷ್ಟಪಡಿಸಿದೆ.

ನದಿಗಳ ಜೋಡಣೆ ಸಂಬಂಧ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅಧ್ಯಕ್ಷತೆಯಲ್ಲಿ ಮಂಗಳವಾರ ಇಲ್ಲಿ ನಡೆದ ವಿಶೇಷ ಸಭೆಯಲ್ಲಿ ಭಾಗವಹಿಸಿದ ಜಲಸಂಪನ್ಮೂಲ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರಾಜ್ಯದ ನಿಲುವನ್ನು ತಿಳಿಸಿದರು.

ಗೋದಾವರಿ–ಕಾವೇರಿ ನದಿಗಳ ಜೋಡಣೆ ಯೋಜನೆಯಲ್ಲಿ ಕೃಷ್ಣಾ–ಗೋದಾವರಿ (ನಾಗಾರ್ಜುನ ಸಾಗರ), ಕೃಷ್ಣಾ–ಪೆನ್ನಾರ್ (ಸೋಮಶಿಲಾ) ಹಾಗೂ ಪೆನ್ನಾರ್–ಕಾವೇರಿ ನದಿಗಳ ಜೋಡಣೆ ಮಾಡಲಾಗುತ್ತದೆ. ಗೋದಾವರಿ ನದಿಯ ಉಪನದಿ ಇಂದ್ರಾವತಿಯಲ್ಲಿ ಬಳಕೆಯಾಗದ 147.93 ಟಿಎಂಸಿ ಅಡಿ ನೀರನ್ನು ನದಿ ತಿರುವು ಯೋಜನೆಗೆ ಬಳಸಿಕೊಳ್ಳಲಾಗುತ್ತದೆ. ಬೇಡ್ತಿ–ವರದಾ ನದಿ ಜೋಡಣೆಯಿಂದ 18 ಟಿಎಂಸಿ ಅಡಿ ನೀರು ದೊರಕಲಿದೆ ಎಂದು ಜಲಶಕ್ತಿ ಸಚಿವಾಲಯವು ಸಭೆಗೆ ತಿಳಿಸಿತು.



ವಿಶೇಷ ಸಭೆಯಲ್ಲಿ ಪಾಲ್ಗೊಂಡ ಡಿ.ಕೆ. ಶಿವಕುಮಾರ್ ಹಾಗೂ ಬೇರೆ ರಾಜ್ಯಗಳ ಜಲಸಂಪನ್ಮೂಲ ಸಚಿವರು

ಉತ್ತರ ಕರ್ನಾಟಕದ ಸಾಕಷ್ಟು ಪ್ರದೇಶ ನೀರಾವರಿಯಿಂದ ವಂಚಿತವಾಗಿದೆ. ಈ ಪ್ರದೇಶಗಳಿಗೆ ನೀರುಣಿಸಲು ನದಿ ಜೋಡಣೆಯ ಸಂದರ್ಭದಲ್ಲಿ ರಾಜ್ಯಕ್ಕೆ ಹೆಚ್ಚಿನ ಪಾಲು ನೀಡಬೇಕು. ಹೆಚ್ಚುವರಿ 147.93 ಟಿಎಂಸಿ ಅಡಿ ನೀರಿನಲ್ಲಿ ಕನಿಷ್ಠ 40 ಟಿಎಂಸಿ ಅಡಿಯನ್ನಾದರೂ ಒದಗಿಸಬೇಕು ಎಂದು ಶಿವಕುಮಾರ್ ಅವರು ಕೇಂದ್ರ ಸಚಿವರ ಗಮನಕ್ಕೆ ತಂದರು. ನೀರಿನ ಪಾಲನ್ನು ನ್ಯಾಯಯುತವಾಗಿ ಹಂಚಿಕೆ ಮಾಡಿದರಷ್ಟೇ ಕರಡು ಒಪ್ಪಂದಕ್ಕೆ ಸಹಿ ಹಾಕಲು ಸಿದ್ಧ ಎಂದು ಅವರು ಪುನರುಚ್ಚರಿಸಿದರು.

ತಮಿಳುನಾಡು: ಸೀಟು ಹಂಚಿಕೆ ಮಾತುಕತೆ

ಚೆನ್ನೈ (ಪಿಟಿಐ): ತಮಿಳುನಾಡಿನ ಬಿಜೆಪಿ ಚುನಾವಣಾ ಉಸ್ತುವಾರಿ ಪೀಯೂಷ್ ಗೋಯಲ್ ಅವರು ಸೀಟು ಹಂಚಿಕೆಯ ಬಗ್ಗೆ ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರ ಜೊತೆ ಮಂಗಳವಾರ ಮಾತುಕತೆ ನಡೆಸಿದ್ದಾರೆ.

ಗೋಯಲ್ ಜೊತೆ ತಮಿಳುನಾಡು ಬಿಜೆಪಿಯ ಚುನಾವಣಾ ಸಹ ಉಸ್ತುವಾರಿ ಅರ್ಜುನ್ ರಾಮ್ ಮೇಘವಾಲ್, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನೈನಾರ್ ನಾಗೇಂದ್ರನ್, ಪಕ್ಷದ ರಾಜ್ಯ ಉಸ್ತುವಾರಿ ಡಾ. ಪಿ. ಸುಧಾಕರ್ ರೆಡ್ಡಿ ಮತ್ತು ಎಐಎಡಿಎಂಕೆ ಹಿರಿಯ ನಾಯಕರು ಇದ್ದರು.

'2021ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದಕ್ಕಿಂತ ಹೆಚ್ಚುವರಿಯಾಗಿ 10 ಸ್ಥಾನಗಳಿಗೆ ಅಂದರೆ ಒಟ್ಟು ಮೂವತ್ತು ಸ್ಥಾನಕ್ಕೆ ಬಿಜೆಪಿ ಬೇಡಿಕೆ ಇಡುವ ಸಾಧ್ಯತೆಯಿದೆ' ಎಂದು ಪಕ್ಷದ ಮೂಲಗಳು ತಿಳಿಸಿವೆ.

ಒಡಿಶಾ: 22 ನಕ್ಸಲರ ಶರಣಾಗತಿ

ಮಾಲಕಾನ್‌ಗಿರಿ (ಪಿಟಿಐ): ಒಡಿಶಾದ ಮಾಲಕಾನ್‌ಗಿರಿ ಜಿಲ್ಲೆಯಲ್ಲಿ 22 ನಕ್ಸಲರು ಮಂಗಳವಾರ ಪೊಲೀಸರಿಗೆ ಶರಣಾಗಿದ್ದಾರೆ.

9 ಬಂದೂಕು, ಬಳಕೆ ಆಗದ 150 ಗುಂಡುಗಳು, 20 ಕೆ.ಜಿ ಸ್ಫೋಟಕಗಳು, 13 ಕಚ್ಚಾ ಬಾಂಬ್‌ಗಳು, ಜಿಲಾಟಿನ್ ಕೋಲುಗಳು ಮತ್ತು ಇತರ ವಸ್ತುಗಳನ್ನು ಶರಣಾಗತಿ ಹೊಂದಿದವರು ಪೊಲೀಸರಿಗೆ ಹಸ್ತಾಂತರಿಸಿದ್ದಾರೆ.

ಶರಣಾದ ನಕ್ಸಲರಲ್ಲಿ ಬಹುತೇಕರು ಛತ್ತೀಸಗಢದವರು, ಆದರೆ ಒಡಿಶಾದಲ್ಲಿ ನಕ್ಸಲ್ ಚಟುವಟಿಕೆ ನಡೆಸುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇರಳದ 2 ಜಿಲ್ಲೆಗಳಲ್ಲಿ ಹಕ್ಕಿಜ್ವರ ದೃಢ

ಆಲಪ್ಪುಳ (ಕೇರಳ) (ಪಿಟಿಐ): ಕೇಂದ್ರೀಯ ಪ್ರಯೋಗಾಲಯ ಆಲಪ್ಪುಳ ಮತ್ತು ಕೊಟ್ಟಾಯಂ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿರುವ ಕೋಳಿ ಫಾರ್ಮ್‌ಗಳಲ್ಲಿರುವ ಕೋಳಿಗಳಿಗೆ ಹಕ್ಕಿಜ್ವರ ತಗುಲಿರುವುದು ದೃಢಪಟ್ಟ ನಂತರ ರಾಜ್ಯ ಪಶು ಸಂಗೋಪನಾ ಇಲಾಖೆ ಮಂಗಳವಾರ ಸೋಂಕು ಹರಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ.

ಆಲಪ್ಪುಳ ಜಿಲ್ಲೆಯ ನೆಡುಮುಡಿ, ಚೆರುತನ, ಕರುವಾಟ್ಟ, ಕಾರ್ತಿಕಪಳ್ಳಿ, ದಕ್ಷಿಣ ಅಂಬಲಪ್ಪುಳ, ದಕ್ಷಿಣ ಪುನ್ನಪ್ರ, ತಕಳಿ, ಪುರಕ್ಕಾಡ್ ಭಾಗದಲ್ಲಿ ಹಕ್ಕಿಜ್ವರ ಕಾಣಿಸಿಕೊಂಡಿದೆ. ಕೋಟಯಂ ಜಿಲ್ಲೆಯ ಕುರುಪ್ಪಂದರ, ಕಲ್ಲುಪುರಯ್ಕಲ್, ವೇಲೂರ್‌ನ ಕೆಲವು ಭಾಗಗಳ ಕೋಳಿ ಫಾರ್ಮ್‌ಗಳಲ್ಲಿ ಹಕ್ಕಿಜ್ವರ ವ್ಯಾಪಿಸಿದೆ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ.

'ಒಂದು ವಾರದ ಹಿಂದೆ ಹಕ್ಕಿಜ್ವರದ ಪ್ರಕರಣಗಳು ನಮ್ಮ ಗಮನಕ್ಕೆ ಬಂದವು. ಮಾದರಿಗಳನ್ನು ಸಂಗ್ರಹಿಸಿ ಭೋಪಾಲ್‌ನಲ್ಲಿರುವ ಕೇಂದ್ರೀಯ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಪರೀಕ್ಷಾ ವರದಿಗಳು ಎರಡೂ ಜಿಲ್ಲೆಗಳಲ್ಲಿ ಹಕ್ಕಿಜ್ವರ ಹರಡುತ್ತಿರುವುದನ್ನು ದೃಢಪಡಿಸಿವೆ' ಎಂದು ಪಶು ಸಂಗೋಪನಾ ಸಚಿವೆ ಜೆ. ಚಿಂಚು ರಾಣಿ 'ಪಿಟಿಐ' ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಹಕ್ಕಿಜ್ವರ ಹರಡುವಿಕೆಯನ್ನು ತಡೆಗಟ್ಟಲು ಇಲಾಖೆ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ. ಆದರೆ, ಈವರೆಗೆ ಕೋಳಿ ಉತ್ಪನ್ನಗಳ ಸೇವನೆಯ ಮೇಲೆ ನಿರ್ಬಂಧಗಳನ್ನು ವಿಧಿಸಿಲ್ಲ. ವರದಿಯ ವಿಶ್ಲೇಷಣೆಯ ನಂತರ ಅಗತ್ಯವೆನಿಸಿದರೆ, ಕೋಳಿ ಮಾಂಸ ಸೇವನೆಯ ಮೇಲಿನ ನಿರ್ಬಂಧ ವಿಧಿಸುವ ಮತ್ತು ಸೋಂಕು ಬಾಧಿತ ಕೋಳಿಗಳನ್ನು ಕೊಲ್ಲುವಂತಹ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ' ಎಂದು ಅವರು ತಿಳಿಸಿದರು.

ಹಿಜ್ಬುಲ್ ಮುಖ್ಯಸ್ಥನ ಪುತ್ರರ ಅರ್ಜಿ ವಜಾ

ನವದೆಹಲಿ (ಪಿಟಿಐ): ಉಗ್ರ ಸಂಘಟನೆಗಳಿಗೆ ಹಣಕಾಸು ನೆರವು ನೀಡಿದ ಪ್ರಕರಣದಲ್ಲಿ ಹಿಜ್ಬುಲ್ ಮುಜಾಹಿದೀನ್ ಮುಖ್ಯಸ್ಥ ಸೈಯದ್ ಸಲಾಹುದ್ದೀನ್ ಅವರ ಪುತ್ರರಿಬ್ಬರು ಮತ್ತು ಇತರರ ವಿರುದ್ಧ ದೋಷಾರೋಪ ನಿಗದಿ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ವಜಾಗೊಳಿಸಿದೆ.

ನ್ಯಾಯಮೂರ್ತಿ ವಿವೇಕ್ ಚೌಧರಿ ಮತ್ತು ಮನೋಜ್ ಜೈನ್ ಅವರ ನೇತೃತ್ವದ ನ್ಯಾಯಪೀಠವು ಆರೋಪಿಗಳ ಮನವಿಯನ್ನು ತಿರಸ್ಕರಿಸಿದೆ.

ವಿಚಾರಣಾ ನ್ಯಾಯಾಲಯವೊಂದು 2021ರಲ್ಲಿ ಆರೋಪಿಗಳ ವಿರುದ್ಧ ದೋಷಾರೋಪ ನಿಗದಿ ಮಾಡಿತ್ತು. ಇದನ್ನು ಪ್ರಶ್ನಿಸಿ ಆರೋಪಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು.

2011ರಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲಾಹುದ್ದೀನ್ ಪುತ್ರರಾದ ಶಹೀದ್ ಯೂಸುಫ್‌ನನ್ನು 2017ರಲ್ಲಿ ಮತ್ತು ಸೈಯದ್ ಅಹ್ಮದ್ ಶಕೀಲ್‌ನನ್ನು 2018ರಲ್ಲಿ ಬಂಧಿಸಲಾಗಿದೆ.

ಪುಷ್ಪಗಿರಿ ಮಠದಲ್ಲಿ ನೈಸರ್ಗಿಕ ಕೃಷಿ ಕಾರ್ಯಾಗಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ವತಿಯಿಂದ ನೈಸರ್ಗಿಕ ಕೃಷಿ ಪದ್ಧತಿಯ ಕಾರ್ಯಾಗಾರವು ಜನವರಿ 3ರಿಂದ ನಾಲ್ಕು ದಿನ ನಡೆಯಲಿದೆ.

ಬೇಲೂರು ತಾಲ್ಲೂಕಿನ ಹಳೇಬೀಡಿನಲ್ಲಿರುವ ಪುಷ್ಪಗಿರಿ ಮಠದಲ್ಲಿ ನಡೆಯಲಿರುವ ಕಾರ್ಯಾಗಾರವನ್ನು ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿಗೆ ಹೆಸರಾದ ಮಹಾರಾಷ್ಟ್ರದ ಸುಭಾಷ್ ಪಾಳೇಕರ್ ನಡೆಸಿಕೊಡಲಿದ್ದಾರೆ. ಪುಷ್ಪಗಿರಿ ಮಠದ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಅವರ ಸಹಕಾರದಲ್ಲಿ ಕಾರ್ಯಾಗಾರ ನಡೆಯಲಿದೆ ಎಂದು ಸಂಘದ ಸಂಚಾಲಕಿ ಚುಕ್ಕಿ ನಂಜುಂಡಸ್ವಾಮಿ ತಿಳಿಸಿದ್ದಾರೆ.

₹800 ಶುಲ್ಕ ಪಾವತಿಸಿ ರೈತರು ನೋಂದಣಿ ಮಾಡಿಸಿಕೊಳ್ಳಬಹುದು. ಶುಲ್ಕ ಪಾವತಿಸಲು ಕಷ್ಟವಿರುವ 100 ಸಣ್ಣ ರೈತರಿಗೆ ಉಚಿತವಾಗಿ ವ್ಯವಸ್ಥೆ ಮಾಡಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಸಂಪರ್ಕ: 76762 80136.

'ತಾಯಂದಿರ ಮರಣ ಪ್ರಮಾಣ ಗಣನೀಯ ಇಳಿಕೆ'

ಧಾರ್ (ಮಧ್ಯಪ್ರದೇಶ) (ಪಿಟಿಐ): ಭಾರತದಲ್ಲಿ ಆರೋಗ್ಯ ಸಂಸ್ಥೆಗಳಿಗೆ ಬಂದು ಹೆರಿಗೆ ಮಾಡಿಸಿಕೊಳ್ಳುವವರ ಪ್ರಮಾಣ ಶೇ 89ರಷ್ಟು ಹೆಚ್ಚಾಗಿದೆ. ಹೀಗಾಗಿ ತಾಯಂದಿರ ಮರಣ ಪ್ರಮಾಣದಲ್ಲಿ (ಎಂಎಂಆರ್) ಗಣನೀಯ ಇಳಿಕೆ ದಾಖಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಮಂಗಳವಾರ ಹೇಳಿದ್ದಾರೆ.




ಜೆ.ಪಿ.ನಡ್ಡಾ

ಧಾರ್ ಜಿಲ್ಲೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಪಾಲುದಾರಿಕೆಯಲ್ಲಿ (ಪಿಪಿಪಿ) ನಿರ್ಮಿಸಲಾಗುತ್ತಿರುವ ವೈದ್ಯಕೀಯ ಕಾಲೇಜಿಗೆ ಶಿಲಾನ್ಯಾಸ ನೆರವೇರಿಸಿ, ನಡ್ಡಾ ಈ ಹೇಳಿಕೆ ನೀಡಿದರು.

ಅಲ್ಲದೇ, ನಾಗರಿಕರಿಗೆ ಉತ್ತಮ ಆರೋಗ್ಯ ಸೌಲಭ್ಯ ಒದಗಿಸಿಕೊಡಲು ನರೇಂದ್ರ ಮೋದಿ ನೇತೃತ್ವದ ಸರ್ಕಾರ ಶ್ರಮಿಸುತ್ತಿದೆ. ಇದಕ್ಕಾಗಿ ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದಿದ್ದಾರೆ.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನೀವು ನಿದ್ದೆಯಲ್ಲಿ ಕಾಣುವುದು ಕನಸಲ್ಲ. ನಿಮ್ಮನ್ನು ನಿದ್ದೆ ಮಾಡಲು ಬಿಡದಿರುವುದೇ ನಿಜವಾದ ಕನಸು.

–ಎ.ಪಿ.ಜೆ. ಅಬ್ದುಲ್ ಕಲಾಂ

ಸಂಪಾದಕೀಯ

ಬಿಪಿಎಲ್ ಕಾರ್ಡ್: ಅರ್ಹರ ಗುರ್ತಿಸಿ ಓಲೈಕೆ ರಾಜಕಾರಣ ಕೊನೆಯಾಗಲಿ

ಕರ್ನಾಟಕದಲ್ಲಿ ಇಂದು ಆರ್ಥಿಕ ವಿರೋಧಾಭಾಸವು ಬಹಳ ಎದ್ದುಕಾಣುವಂತೆ ಇದೆ. ದೇಶದಲ್ಲಿ ಅತಿಹೆಚ್ಚಿನ ತಲಾವಾರು ಆದಾಯ ಇರುವುದು ಕರ್ನಾಟಕದಲ್ಲಿ ಎಂದು ರಾಜ್ಯ ಸರ್ಕಾರವು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದೆ. ಇಲ್ಲಿನ ಸರಾಸರಿ ತಲಾ ಆದಾಯವು ₹2,04,605ರಷ್ಟಿದೆ. ಇದು ರಾಷ್ಟ್ರೀಯ ಸರಾಸರಿ ತಲಾ ಆದಾಯವಾದ ₹1,14,710ಕ್ಕಿಂತ ಬಹಳ ಹೆಚ್ಚು. ಭಾರತದಲ್ಲಿ ನಾಲ್ಕನೆಯ ಅತಿದೊಡ್ಡ ಅರ್ಥವ್ಯವಸ್ಥೆ ಕರ್ನಾಟಕದ್ದು, ದೇಶದಲ್ಲಿ ಜಿಎಸ್‌ಟಿ ಕಣಜಕ್ಕೆ ಎರಡನೆಯ ಅತಿಹೆಚ್ಚಿನ ಕೊಡುಗೆ ನೀಡುವ ರಾಜ್ಯ ಕರ್ನಾಟಕ. ದೇಶದ ದೊಡ್ಡ ರಾಜ್ಯಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಕಾಣುತ್ತಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. 2024-25ರಲ್ಲಿ ರಾಜ್ಯದ ಜಿಡಿಪಿ (ಜಿಎಸ್‌ಡಿಪಿ) ಶೇ 12.8ರಷ್ಟು ಬೆಳವಣಿಗೆ ಸಾಧಿಸಿದೆ. ರಾಜ್ಯದಲ್ಲಿ 2013–14ರಲ್ಲಿ ಶೇ 16.55ರಷ್ಟು ಬಹುಆಯಾಮಗಳ ಬಡತನದ ಪ್ರಮಾಣವು 2025ರಲ್ಲಿ ಶೇ 5.67ಕ್ಕೆ ಇಳಿಕೆ ಕಂಡಿದೆ. ಹೀಗಿದ್ದೂ ವಿಚಿತ್ರವೆನಿಸುವ ಸಂಗತಿಯೆಂದರೆ ಭಾರತದಲ್ಲಿ ಅತಿಹೆಚ್ಚಿನ ಸಂಖ್ಯೆಯಲ್ಲಿ ಬಿಪಿಎಲ್ ಪಡಿತರ ಚೀಟಿಗಳು ಇರುವುದು ಕರ್ನಾಟಕದಲ್ಲೇ! ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ವಿಧಾನಸಭೆಯಲ್ಲೇ ಒಪ್ಪಿಕೊಂಡಿರುವ ಪ್ರಕಾರ ರಾಜ್ಯದ ಶೇಕಡ 73ರಿಂದ ಶೇ 75ರಷ್ಟು ಮಂದಿ ಬಿಪಿಎಲ್ ಪಡಿತರ ಚೀಟಿ ಹೊಂದಿದ್ದಾರೆ. ಉತ್ತಮವಾಗಿರುವ ಸರಾಸರಿ ತಲಾ ಆದಾಯ ಹೊಂದಿರುವ ರಾಜ್ಯದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಬಿಪಿಎಲ್ ಪಡಿತರ ಚೀಟಿಗಳನ್ನು ನೀಡಿರುವುದು ಸಾಮಾನ್ಯ ಸಂಗತಿಯಲ್ಲ. ಇದು ಆಡಳಿತಾತ್ಮಕ ಲೋಪ ಅಲ್ಲ; ಇದು ವ್ಯವಸ್ಥೆಯ ಸೋಲಿನ ಸೂಚಕ. ವಾರ್ಷಿಕ ₹1.2 ಲಕ್ಷಕ್ಕಿಂತ ಕಡಿಮೆ ಆದಾಯ ಇರುವ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿ ಪಡೆಯಲು ಅರ್ಹ. ರಾಜ್ಯದಲ್ಲಿ 4.44 ಕೋಟಿ ಜನ ಈ 'ಆದ್ಯತಾ ಕುಟುಂಬ'ಗಳ ಅಡಿಯಲ್ಲಿ ಗುರುತಿಸಿಕೊಂಡಿದ್ದಾರೆ. ಆದರೆ, ಇವರಲ್ಲಿ ಹಲವರು ಬಿಪಿಎಲ್ ಕಾರ್ಡ್ ಪಡೆಯಲು ಅರ್ಹರಲ್ಲ. ರಾಜ್ಯದಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವವರ ಪೈಕಿ 7.76 ಲಕ್ಷ ಮಂದಿ ಆ ಸೌಲಭ್ಯಕ್ಕೆ ಅರ್ಹರಲ್ಲ ಎಂಬ ಅನುಮಾನವನ್ನು ಕೇಂದ್ರ ವ್ಯಕ್ತಪಡಿಸಿದೆ.



ತಲಾ ಆದಾಯದಲ್ಲಿ ಕರ್ನಾಟಕ ದೇಶದಲ್ಲೇ ಮುಂಚೂಣಿಯಲ್ಲಿದೆ. ಆದರೆ, ಬಿಪಿಎಲ್ ಪಡಿತರ ಚೀಟಿಗಳು ಕೂಡ ರಾಜ್ಯದಲ್ಲಿ ದಾಖಲೆ ಪ್ರಮಾಣದಲ್ಲಿವೆ. ಈ ವಿರೋಧಾಭಾಸ ಕೊನೆಗೊಳ್ಳಬೇಕು.

ಅರ್ಹರಲ್ಲದವರಿಗೆ ಬಿಪಿಎಲ್ ಕಾರ್ಡ್ ನೀಡುವುದರ ಪರಿಣಾಮಗಳು ಬಹಳ ಗಂಭೀರವಾದವು. ಬಡವರಿಗಾಗಿ ರೂಪಿಸಿದ ಅಭಿವೃದ್ಧಿ ಯೋಜನೆಗಳ ಪ್ರಯೋಜನವನ್ನು ಉಳ್ಳವರು ಹೆಚ್ಚಿನ ಪ್ರಮಾಣದಲ್ಲಿ ಪಡೆದುಕೊಂಡಾಗ, ಬಡವರಿಗೆ ಅದು ಅಗತ್ಯ ಪ್ರಮಾಣದಲ್ಲಿ ಸಿಗದಂತಾಗುತ್ತದೆ. ಅನ್ನಭಾಗ್ಯ ಯೋಜನೆಯ ಅಡಿಯಲ್ಲಿ ನೀಡುವ ಅಕ್ಕಿಯನ್ನು ಉಳ್ಳವರು ಪಡೆದುಕೊಂಡಾಗಲೆಲ್ಲ, ಅದರ ಅಗತ್ಯವು ನಿಜವಾಗಿಯೂ ಇದ್ದವರಿಗೆ ವಂಚನೆ ಎಸಗಿದಂತಾಗುತ್ತದೆ. ನೆರವಿನ ಅಗತ್ಯ ಇಲ್ಲದವರೂ ಬಿಪಿಎಲ್ ಕಾರ್ಡ್ ಮೂಲಕ ಸರ್ಕಾರದ ನೆರವು ಪಡೆದುಕೊಂಡಾಗ, ರಾಜ್ಯವು ಅಭಿವೃದ್ಧಿಯ ಉದ್ದೇಶದಿಂದ ಖರ್ಚು ಮಾಡಬೇಕಿದ್ದ ಹಣವನ್ನು ಸಬ್ಸಿಡಿಗಳಿಗೆ ಬಳಸಬೇಕಾಗುತ್ತದೆ. ಗ್ಯಾರಂಟಿ ಯೋಜನೆಗಳು ಹಣಕಾಸಿನ ದೃಷ್ಟಿಯಿಂದ ಸುಸ್ಥಿರವಾಗಿ ಉಳಿಯುವುದಿಲ್ಲ. ಈ ಹಣವನ್ನು ಬದಲು ಶಾಲೆ, ಆಸ್ಪತ್ರೆ, ಮೂಲಸೌಕರ್ಯ ನಿರ್ಮಾಣಕ್ಕೆ ಬಳಸುವುದು ಹೆಚ್ಚು ಸೂಕ್ತವಾದದ್ದು ಆಗಿತ್ತು.

ಅನರ್ಹ ಬಿಪಿಎಲ್ ಕಾರ್ಡುದಾರರನ್ನು ಗುರುತಿಸಿ, ಅಂತಹ ಕಾರ್ಡ್‌ಗಳನ್ನು ರದ್ದುಪಡಿಸಲು ಸರ್ಕಾರ ನಡೆಸಿರುವ ಅಭಿಯಾನವು ಬಹಳ ಅಗತ್ಯವಾಗಿತ್ತು. ಅಭಿಯಾನ ಶುರುವಾದದ್ದು ಬಹಳ ವಿಳಂಬವಾಗಿ ಆಯಿತು. ಆಧಾರ್ ಸಂಖ್ಯೆಯ ಜೊತೆ ಜೋಡಣೆ ಮಾತ್ರದಿಂದಲೇ ವ್ಯಕ್ತಿ ಅಥವಾ ಕುಟುಂಬದ ಆದಾಯವನ್ನು ಪತ್ತೆ ಮಾಡಲು ಸಾಧ್ಯವಿಲ್ಲ. ಹೀಗಾಗಿ ಸರ್ಕಾರವು ತಂತ್ರಜ್ಞಾನವನ್ನು ಬಳಸಿಕೊಂಡು ಇತರ ಮಾರ್ಗಗಳನ್ನೂ ಅನುಸರಿಸಿ ಉಳ್ಳವರನ್ನು ಗುರುತಿಸಬೇಕು. ಆದಾಯ ತೆರಿಗೆ ಪಾವತಿ ದಾಖಲೆಗಳ ಪರಿಶೀಲನೆ, ಜಮೀನು ದಾಖಲೆಗಳ ಪರಿಶೀಲನೆ, ವಾಹನ ನೋಂದಣಿ ಪರಿಶೀಲನೆ ನಡೆಸಿ ಅರ್ಹರ ಪಟ್ಟಿಯನ್ನು ಅಂತಿಮಗೊಳಿಸಬೇಕು. ಇದು ಸರ್ಕಾರವು ತನ್ನ ಸಾಂವಿಧಾನಿಕ ಹಾಗೂ ಹಣಕಾಸಿನ ಹೊಣೆಗಾರಿಕೆಯನ್ನು ಸರಿಯಾಗಿ ನಿಭಾಯಿಸುವ ಕೆಲಸವಾಗುತ್ತದೆ. ಸಮೃದ್ಧಿ ಹೊಂದಿರುವ ರಾಜ್ಯವೊಂದು ಬಡತನಕ್ಕೆ ಸಂಬಂಧಿಸಿದ ಸುಳ್ಳು ಅಂಕಿಅಂಶಗಳ ದತ್ತಾಂಶವನ್ನು ಇಟ್ಟುಕೊಳ್ಳುವುದು ಸರಿಯಲ್ಲ. ಪ್ರತಿಯೊಂದು ಬೋಗಸ್ ಬಿಪಿಎಲ್ ಕಾರ್ಡ್ ಕೂಡ ಸಾರ್ವಜನಿಕರ ಹಣ ಪೋಲಾಗಲು ಕಾರಣವಾಗುತ್ತದೆ, ಸರ್ಕಾರದ ನೆರವು ನಿಜವಾಗಿಯೂ ಬೇಕಿರುವವರಿಂದ ಏನನ್ನೋ ಕಿತ್ತುಕೊಳ್ಳುತ್ತಿರುತ್ತದೆ. ಬಡತನದ ನಿಜವಾದ ನಿರ್ಮೂಲನೆ ಹಾಗೂ ಉಳ್ಳವರಿಗೆ ಇನ್ನಷ್ಟು ಸೌಲಭ್ಯಗಳನ್ನು ಕಲ್ಪಿಸಿಕೊಡುವುದರ ನಡುವೆ ತನ್ನ ಆಯ್ಕೆ ಯಾವುದು ಎಂಬುದನ್ನು ರಾಜ್ಯ ಸರ್ಕಾರ ತೀರ್ಮಾನಿಸಬೇಕು. ಆದರೆ, ದುರದೃಷ್ಟದ ಸಂಗತಿಯೆಂದರೆ, ಮತ ಬ್ಯಾಂಕ್ ರಾಜಕಾರಣವು ಆಡಳಿತದಲ್ಲಿನ ಪ್ರಾಮಾಣಿಕತೆಗಿಂತ ಮಿಗಿಲಾಗಿ ನಿಲ್ಲುತ್ತದೆ. ಅಭಿವೃದ್ಧಿ ಉದ್ದೇಶದ ಯೋಜನೆಗಳನ್ನು ಬಡವರನ್ನು ಮೇಲಕ್ಕೆ ಎತ್ತುವ ಯೋಜನೆಗಳನ್ನಾಗಿಸುವ ಬದಲು, ಕೆಲವರ ಓಲೈಕೆಗೆ ಇರುವ ಯೋಜನೆಗಳನ್ನಾಗಿಸುತ್ತದೆ.

ಜಾಲತಾಣ

ಮೈಲಿಗೆ ಯಾವುದು?



ಶೂದ್ರ, ದಲಿತರ ದೇವಾಲಯ ಪ್ರವೇಶದಿಂದ ಮೈಲಿಗೆ ಆಗುವುದಾದರೆ, ಅವರ ಮನೆಗಳಲ್ಲಿ ದೇವರ ಫೋಟೊ ಇಟ್ಟರೂ ದೇವರಿಗೆ ಮೈಲಿಗೆ ಆಗುತ್ತದೆಯಲ್ಲವೆ?

ರಂಗಸ್ವಾಮಿ ಎನ್., 'ಎಕ್ಸ್'ನಿಂದ

ಕಿಡಿನುಡಿ



ರಾಹುಲ್ ಗಾಂಧಿ ಅವರಿಗೆ ವಿದೇಶದಲ್ಲಿ ಭಾರತವನ್ನು ಹೀಯಾಳಿಸುವುದು, ಕೆಟ್ಟದಾಗಿ ಬಿಂಬಿಸುವುದೇ ಕೆಲಸ. ದೇಶದ ಸುಧಾರಣೆ ಕುರಿತು ಸಂಸತ್‌ನಲ್ಲಿ ಚರ್ಚಿಸಬೇಕಿದೆ. ವಿದೇಶಿಗರು ಭಾರತಕ್ಕೆ ಬಂದು ಸುಧಾರಣೆ ಮಾಡುತ್ತಾರೆಯೇ?

ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

25 ವರ್ಷಗಳ ಹಿಂದೆ

ಭಾನುವಾರ, 24-12-2000

• ಟೆನಿಸ್‌ಗೆ ಅಂಟಿಕೊಂಡ 'ಮೋಸದಾಟ'

ನವದೆಹಲಿ, ಡಿ. 23– ಇದುವರೆಗೆ ಕ್ರಿಕೆಟ್ ಅನ್ನು ಅಂಟಿಕೊಂಡಿದ್ದ ಮೋಸದಾಟ ಇಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಟೆನಿಸ್ ಟೂರ್ನಿಗೂ ಅಂಟಿಕೊಂಡು ಟೆನಿಸ್ ಜಗತ್ತಿನಲ್ಲಿ ಅಲ್ಲೋಲ–ಕಲ್ಲೋಲಕ್ಕೆ ಕಾರಣವಾಯಿತು.

ಏಷ್ಯನ್ ಟೆನಿಸ್ ಟೂರ್ನಿಯ ಅಂತಿಮ ರೌಂಡ್ ರಾಬಿನ್ ಲೀಗ್ ಪಂದ್ಯದಲ್ಲಿ ಕೊರಿಯ ತಂಡವು ತನ್ನ ಎದುರಾಳಿ ಥಾಯ್‌ಲೆಂಡ್‌ಗೆ ಪಂದ್ಯ 'ಬಿಟ್ಟುಕೊಟ್ಟು' ಭಾರತ ತಂಡವು ಫೈನಲ್ ಪ್ರವೇಶಿಸದಂತೆ ತಡೆಯಲು ಯಶಸ್ವಿಯಾಯಿತು.

• 147 ಸ್ಥಳೀಯ ಸಂಸ್ಥೆಗಳಿಗೆ ಜ. 28ರಂದು ಚುನಾವಣೆ

ಬೆಂಗಳೂರು, ಡಿ. 23– ರಾಜ್ಯದ ನಾಲ್ಕು ಮಹಾನಗರ ಪಾಲಿಕೆಗಳು ಸೇರಿದಂತೆ ಒಟ್ಟು 147 ಸ್ಥಳೀಯ ಸಂಸ್ಥೆಗಳಿಗೆ ನಡೆಯಲಿರುವ ಮೊದಲ ಹಂತದ ಚುನಾವಣೆಗೆ ಜನವರಿ 28ರಂದು ಮತದಾನ ನಡೆಯಲಿದೆ ಎಂದು ರಾಜ್ಯ ಚುನಾವಣಾ ಆಯೋಗ ಪ್ರಕಟಿಸಿದೆ.

ಜನವರಿ 8ರಂದು ಅಧಿಸೂಚನೆ ಹೊರಡಿಸಲಾಗುತ್ತದೆ ಎಂದು ರಾಜ್ಯ ಚುನಾವಣಾ ಆಯೋಗ ತಿಳಿಸಿದೆ.

75 ವರ್ಷಗಳ ಹಿಂದೆ

ಭಾನುವಾರ, 24-12-1950

• ವಯಸ್ಕರ ಮತದಾನ ಪದ್ಧತಿಯ ಪ್ರಪ್ರಥಮ ಪರಿಚಯ

ಬೆಂಗಳೂರು, ಡಿ. 23– ಭಾರತದ ಭವ್ಯ ಇತಿಹಾಸದಲ್ಲಿ ಪ್ರಪ್ರಥಮವಾಗಿ ಇಂದು ನಡೆದ ನಗರ ಕಾರ್ಪೊರೇಷನ್ ಚುನಾವಣೆಯಲ್ಲಿ ವಯಸ್ಕರು ಮತದಾನ ಮಾಡಿದರು.

ಸುಮಾರು 2 ಲಕ್ಷ 20 ಸಾವಿರ ಜನತೆಗೆ ಮತದಾನ ಮಾಡುವ ಅವಕಾಶ ಇಂದು ದೊರಕಿದ್ದು, ಶೇ 50ಕ್ಕಿಂತ ಹೆಚ್ಚು ಮಂದಿ ಓಟುದಾರರು 275 ಕೇಂದ್ರಗಳಿಗೆ ಹೋಗಿ 146 ಉಮೇದುವಾರರಲ್ಲಿ ತಾವು ಒಪ್ಪಿದ 'ಬಣ್ಣ'ದವರಿಗೆ ಮತವಿತ್ತರು.

ಇಂದು ಬೆಳಿಗ್ಗೆ 7ರಿಂದ 12ರವರೆಗೆ ಮತ್ತು 1ರಿಂದ 6ರವರೆಗೆ ಕಾರ್ಪೊರೇಷನ್ ಚುನಾವಣೆ ನಡೆಯಿತು.

ಧ್ವನಿವರ್ಧಕ ಯಂತ್ರಗಳ ಕಾಟ ಹೆಚ್ಚಾಗಿಲ್ಲದಿದ್ದರೂ, ಇಡೀ ನಗರ ಚುನಾವಣಾ ವಾತಾವರಣದಲ್ಲಿ ಸಿಲುಕಿತ್ತು. ಸುಮಾರು ಒಂದು ತಿಂಗಳಿನಿಂದ ಚುನಾವಣಾ ಪ್ರಚಾರಕ್ಕೆ ಪಳಗಿ ಹೋಗಿದ್ದ ನಗರದ ಓಟುದಾರರು ಸ್ವಲ್ಪ ಸಾವಕಾಶವಾಗಿಯೇ ಓಟು ಮಾಡಿದರು.

ಪರಿಸರ: ಸರ್ಕಾರಕ್ಕೆ ಸದರ!



ವಿಶ್ಲೇಷಣೆ

ಜ್ಯೋತಿ

> ಜಿ.ಡಿ. ಅಗರ್ವಾಲ್ ಅವರ ಬಲಿದಾನ ಹಾಗೂ ಸೋನಮ್ ವಾಂಗ್ಚುಕ್‌ರ ಬಂಧನ, ಈ ದೇಶದ ಪರಿಸರ ಹೋರಾಟದ ಹಲವು ಕಥೆಗಳನ್ನು ಹೇಳುವಂತಿವೆ. ಪರಿಸರ ಕಾಳಜಿಯ ಬಗೆಗಿನ ವ್ಯವಸ್ಥೆಯ ತೀವ್ರ ಉದಾಸೀನ ಹಾಗೂ ಪ್ರತಿಭಟನೆಗಳನ್ನು ಹತ್ತಿಕ್ಕುವಲ್ಲಿನ ಕ್ರೌರ್ಯದ ಜೊತೆಗೆ, ಸಮಾಜದ ಸಂವೇದನಾರಾಹಿತ್ಯ ಸ್ಥಿತಿಯನ್ನು ಈ ಘಟನೆಗಳು ಸಂಕೇತಿಸುವಂತಿವೆ.

ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮ ಗಾಂಧೀಜಿ ಅವರ ಚಾರಿತ್ರಿಕ ಉಪವಾಸ ಸತ್ಯಾಗ್ರಹಗಳಿಂದ ಹಿಡಿದು, ಸ್ವಾತಂತ್ರ್ಯೋತ್ತರ ಭಾರತದ ಪರಿಸರ ಹೋರಾಟಗಳವರೆಗೆ ನಾವು ಈ ನೆಲದಲ್ಲಿ ಸಾಕಷ್ಟು ಪ್ರತಿಭಟನೆ, ಸತ್ಯಾಗ್ರಹಗಳನ್ನು ನೋಡಿದ್ದೇವೆ. ದೇಶದ ಪರಿಸರಕ್ಕಾಗಿ ಹೋರಾಡಿದ ಇಬ್ಬರು ಶ್ರೇಷ್ಠ ಎಂಜಿನಿಯರ್‌ಗಳ ಉದಾಹರಣೆಗಳನ್ನು ವರ್ತಮಾನದಲ್ಲಿ ಕಂಡಿದ್ದೇವೆ. ಗಂಗಾ ನದಿಯ ಸ್ವಚ್ಛತೆಗಾಗಿ ಹೋರಾಡುತ್ತಲೇ ದೇಹತ್ಯಾಗ ಮಾಡಿದ ಜಿ.ಡಿ. ಅಗರ್ವಾಲ್ ಮತ್ತು ಲಡಾಖ್‌ನ ಸೂಕ್ಷ್ಮ ಹಿಮಾಲಯ ತಪ್ಪಲಿನ ಉಳಿವಿಗಾಗಿ ಹೋರಾಡಿ ಜೈಲು ಸೇರಿರುವ ಸೋನಮ್ ವಾಂಗ್ಚುಕ್ ಹಲವು ಕಾರಣಗಳಿಂದಾಗಿ ನಮಗೆ ಮಾದರಿ.

2018ರ ಅಕ್ಟೋಬರ್‌ನಲ್ಲಿ, ಐಐಟಿ ಕಾನ್ಪುರದ ಪರಿಸರ ಎಂಜಿನಿಯರಿಂಗ್‌ನ ನಿವೃತ್ತ ಪ್ರಾಧ್ಯಾಪಕ ಜಿ.ಡಿ. ಅಗರ್ವಾಲ್ ತಮ್ಮ ನೂರು ದಿನಗಳ ಅಮರಣಾಂತ ಉಪವಾಸದ ನಂತರ ನಿಧನರಾದರು. ಗಂಗಾ ನದಿಯನ್ನು ಮುಕ್ತವಾಗಿ ಹರಿಯಲು ಬಿಡಿ, ಮಾಲಿನ್ಯ, ವಿನಾಶಕಾರಿ ಜಲವಿದ್ಯುತ್ ಯೋಜನೆಗಳು ಮತ್ತು ಅಕ್ರಮ ಗಣಿಗಾರಿಕೆಯಿಂದ ರಕ್ಷಿಸಿ, ಮತ್ತು ನದಿಯನ್ನು ಕೇವಲ ಸಂಪನ್ಮೂಲಕ್ಕಿಂತ ಹೆಚ್ಚಾಗಿ ಜೀವಂತ ಪರಿಸರ ಘಟಕವಾಗಿ ಪರಿಗಣಿಸಿ ಎನ್ನುವುದು ಅವರ ಬೇಡಿಕೆಯಾಗಿತ್ತು. ಅಗರ್ವಾಲ್ ಅವರ ಮರಣದ ಏಳು ವರ್ಷಗಳ ನಂತರ, 2025ರಲ್ಲಿ ತನ್ನ ಶೈಕ್ಷಣಿಕ ಆವಿಷ್ಕಾರಗಳು ಮತ್ತು ಸುಸ್ಥಿರ ನೀರಿನ ಪರಿಹಾರಗಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾದ ಸೋನಮ್ ವಾಂಗ್ಚುಕ್, ಲಡಾಖ್‌ನ ಜನರನ್ನು ತಮ್ಮ ಭೂಮಿ, ಪರಿಸರ ಮತ್ತು ಸಾಂವಿಧಾನಿಕ ರಕ್ಷಣೆಗಾಗಿ ಒತ್ತಾಯಿಸಲು ಸಜ್ಜುಗೊಳಿಸಿದ್ದಕ್ಕಾಗಿ ಬಂಧನಕ್ಕೊಳಗಾಗಿದ್ದಾರೆ.

ಅಗರ್ವಾಲ್ ಅವರ ಬಲಿದಾನ ಮತ್ತು ವಾಂಗ್ಚುಕ್ ಅವರ ಬಂಧನದ ಪ್ರಕರಣಗಳು, ದೇಶದ ಆಡಳಿತ ವ್ಯವಸ್ಥೆಗಳು ಅಭಿವೃದ್ಧಿಯ ಹೆಸರಲ್ಲಿ ಪ್ರಕೃತಿ ರಕ್ಷಕರ ಸದ್ದಡಗಿಸುವ ಕೆಲಸವನ್ನು ಮಾಡುತ್ತಿವೆ ಎನ್ನುವುದಕ್ಕೆ ನಿದರ್ಶನದಂತಿವೆ.

ಅಗರ್ವಾಲ್ ವೃತ್ತಿಯಲ್ಲಿ ಎಂಜಿನಿಯರ್ ಆಗಿದ್ದವರು. ಐಐಟಿ ಕಾನ್ಪುರದಲ್ಲಿ ಬೋಧಿಸಿದ ಶಿಕ್ಷಣತಜ್ಞ ಮತ್ತು ಕೇಂದ್ರದ ಮಾಲಿನ್ಯ ನಿಯಂತ್ರಣ ಮಂಡಳಿಯ ಮೊದಲ ಸದಸ್ಯ ಕಾರ್ಯದರ್ಶಿ. ದೇಶದ ಅಭಿವೃದ್ಧಿ ಯೋಜನೆಗಳು ಪರಿಸರ ನಾಶಕ್ಕೆ ಕಾರಣವಾಗುತ್ತಿರುವುದರಿಂದ ಅವರು ಭ್ರಮನಿರಸನಗೊಂಡಿದ್ದರು. ಹಲವಾರು 'ಸ್ವಚ್ಛತಾ ಕಾರ್ಯಾಚರಣೆ'ಗಳ ಹೊರತಾಗಿಯೂ, ಗಂಗಾ ನದಿಯು ಕಲುಷಿತಗೊಳ್ಳುತ್ತಿರುವುದು ಬರೀ ನೀತಿಯ ವೈಫಲ್ಯವಲ್ಲ, ನೈತಿಕ ಕುಸಿತ ಎಂದವರು ಭಾವಿಸಿದ್ದರು. ಪ್ರಾಪಂಚಿಕ ಆಗುಹೋಗುಗಳಿಂದ ಭ್ರಮನಿರಸನಗೊಂಡ ಅವರು ತಮ್ಮ ಲೌಕಿಕ ಜೀವನವನ್ನು ತ್ಯಜಿಸಿ ಸನ್ಯಾಸತ್ವ ಪಡೆದರು.

ಗಂಗಾ ನದಿಯ ರಕ್ಷಣೆಗಾಗಿ ಅಗರ್ವಾಲ್, ಉಪವಾಸ ಸತ್ಯಾಗ್ರಹಗಳ ಮೂಲಕ ನದಿಯ ಪರಿಸರಕ್ಕೆ ಹಾನಿಕಾರಕ ಜಲವಿದ್ಯುತ್ ಯೋಜನೆಗಳ ರದ್ದತಿ, ಮರಳು ಗಣಿಗಾರಿಕೆಯ ನಿಷೇಧ ಮತ್ತು ನದಿ ರಕ್ಷಣೆಗಾಗಿ ಸಮಗ್ರ ಕಾನೂನು ಚೌಕಟ್ಟು ಬೇಕೆಂಬ ಸ್ಪಷ್ಟ ಬೇಡಿಕೆಗಳೊಂದಿಗೆ ಸರ್ಕಾರಕ್ಕೆ ಎಚ್ಚರಿಕೆ ಮತ್ತು ಜನಸಾಮಾನ್ಯರಲ್ಲಿ ಅರಿವು ಮೂಡಿಸಲು ಪ್ರಯತ್ನಿಸಿದರು. 2018ರ ಜೂನ್‌ನಲ್ಲಿ ಪ್ರಾರಂಭವಾದ ಅವರ ಅಂತಿಮ ಉಪವಾಸವನ್ನು 86ನೇ ವಯಸ್ಸಿನಲ್ಲಿ ಕೈಗೊಂಡರು. ಸರ್ಕಾರವು ಅವರಿಗೆ ಯಾವುದೇ ಖಚಿತ ಭರವಸೆ ನೀಡುವುದರಿಂದ ನುಣುಚಿಕೊಂಡಿತು. 2018ರ ಅ. 11ರಂದು ಉಪವಾಸ ನಿರತರಾಗಿದ್ದಲೇ ಸಂಭವಿಸಿದ ಅವರ ಸಾವು, ಪರಿಸರ ಕಾಳಜಿಗೆ ದೇಶದ ಆಡಳಿತ ವ್ಯವಸ್ಥೆ ಎಷ್ಟು ಸೀಮಿತ ಬದ್ಧತೆ ಹೊಂದಿದೆ ಎಂಬುದನ್ನು ಬಹಿರಂಗಪಡಿಸಿತು.

ಅಗರ್ವಾಲ್ ಅವರ ನಿಧನವು ಒಂದು ಅಹಿತಕರ ಪ್ರಶ್ನೆಯನ್ನು ಹುಟ್ಟು ಹಾಕಿದೆ. ಗಂಗೆಯನ್ನು ತಾಯಿಯಾಗಿ ಗೌರವಿಸುವ ಈ ದೇಶದಲ್ಲಿ ಅವಳ ರಕ್ಷಣೆಗಾಗಿ ಹೋರಾಡಿದ ಒಬ್ಬ ಸಂತನನ್ನು ಮೌನವಾಗಿ ಸಾಯಲು ಏಕೆ ಬಿಡಲಾಯಿತು?

ಹಿಂದಿ ಸಿನಿಮಾ '3 ಈಡಿಯೆಟ್ಸ್' ಪಾತ್ರಕ್ಕೆ ಪ್ರೇರಣೆಯಾಗಿ ಪ್ರಸಿದ್ಧರಾದ ಸೋನಮ್ ವಾಂಗ್ಚುಕ್, ದೇಶದ ಪರಿಸರವಾದದ ಕುರಿತಂತೆ ಒಂದು ವಿಭಿನ್ನ ಮತ್ತು ಮಹತ್ವದ ಎಳೆಯನ್ನು ಪ್ರತಿನಿಧಿಸುತ್ತಾರೆ. ಶಿಕ್ಷಣ, ಸುಸ್ಥಿರತೆ ಮತ್ತು ಸ್ಥಳೀಯ ಜ್ಞಾನದ ಪ್ರಸಾರದಲ್ಲಿ ಅವರು ದೀರ್ಘಕಾಲ ಕೆಲಸ ಮಾಡಿದ್ದಾರೆ. ಪರಿಸರ ಸಮತೋಲನಕ್ಕಾಗಿ ಅಭಿವೃದ್ಧಿಯ ಪರ್ಯಾಯ ಮಾದರಿಗಳನ್ನು ರಚಿಸಿದ್ದಾರೆ.


ಕೇಂದ್ರ ಸರ್ಕಾರವು ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸಿದ ನಂತರ ಲಡಾಖ್ ರಾಜಕೀಯದಲ್ಲಿ ವಾಂಗ್ಚುಕ್ ಅವರ ಪಾತ್ರವು ನಾಟಕೀಯವಾಗಿ ಬದಲಾಯಿತು. ಸೂಕ್ಷ್ಮ ಪರಿಸರ ವ್ಯವಸ್ಥೆ ಮತ್ತು ವಿಶೇಷವಾಗಿ ಬುಡಕಟ್ಟು ಜನಸಂಖ್ಯೆ ಹೊಂದಿರುವ ಲಡಾಖ್ ಪ್ರದೇಶವು ತನ್ನ ಭೂಮಿ, ಸಂಪನ್ಮೂಲ ಮತ್ತು ಉದ್ಯೋಗಾವಕಾಶಗಳ ಮೇಲೆ ಶಾಸಕಾಂಗದ ರಕ್ಷಣೆಗಳಿಲ್ಲದ ಪರಿಸ್ಥಿತಿಯನ್ನು ಎದುರಿಸಿತು. ಆದ್ದರಿಂದ, ಲಡಾಖ್‌ಗೆ ಸಾಂವಿಧಾನಿಕ ರಕ್ಷಣೆಯನ್ನು ಒತ್ತಾಯಿಸುವ ಪ್ರಮುಖ ಧ್ವನಿಯಾಗಿ ವಾಂಗ್ಚುಕ್ ಹೊರಹೊಮ್ಮಿದರು. ಇವರ ಮುಂದಾಳತ್ವದಲ್ಲಿ ನಡೆದ ಸಾಮುದಾಯಿಕ ಮೆರವಣಿಗೆ, ಉಪವಾಸ, ಮುಷ್ಕರ ಮತ್ತು ಸಾರ್ವಜನಿಕ ಸಂವಾದದ ಮೂಲಕ ಪ್ರಜಾಸತ್ತಾತ್ಮಕ ಹಕ್ಕುಗಳ ಪ್ರತಿಪಾದನೆಯನ್ನು, ಆಡಳಿತ ವ್ಯವಸ್ಥೆಯು ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಯಾಗಿ ಬಿಂಬಿಸಿತು. ವಾಂಗ್ಚುಕ್ ಅವರ ಬಂಧನ ಮತ್ತು ಅವರೊಂದಿಗೆ ಸಂಬಂಧ ಹೊಂದಿರುವ ಸಂಸ್ಥೆಗಳ ವಿರುದ್ಧ ತೆಗೆದುಕೊಂಡ ಶಿಕ್ಷಾರ್ಹ ಕ್ರಮಗಳು, ಸರ್ಕಾರವು ತನ್ನ ನಾಗರಿಕರ ಭಿನ್ನಾಭಿಪ್ರಾಯವನ್ನು ಗ್ರಹಿಸುವ ವಿಧಾನದಲ್ಲಿ ಆಗಿರುವ ಬದಲಾವಣೆಯನ್ನು ಸೂಚಿಸುತ್ತವೆ. ಪರಿಸರ ಮತ್ತು ಪ್ರಾದೇಶಿಕ ಬೇಡಿಕೆಗಳನ್ನು ಕಾನೂನುಬದ್ಧ ಪ್ರಜಾಪ್ರಭುತ್ವ ಹೋರಾಟಗಳಾಗಿ ಪರಿಗಣಿಸದೆ, ರಾಷ್ಟ್ರೀಯ ಭದ್ರತೆ ಮತ್ತು ಪ್ರಾದೇಶಿಕ ಸಮಗ್ರತೆಗೆ ಬೆದರಿಕೆಗಳಾಗಿ ನೋಡಲಾಗುತ್ತಿದೆ.

ಅಗರ್ವಾಲ್ ಒಬ್ಬ ಪರಿಸರವಾದಿಯಾಗಿ ಸಂತನಂತೆ ಕಾಣಿಸಿದರೆ, ವಾಂಗ್ಚುಕ್ ಒಂದು ವಿಶಿಷ್ಟ ಸಾಂಸ್ಕೃತಿಕ ಮತ್ತು ಪರಿಸರ ಅಸ್ಮಿತೆಯನ್ನು ಹೊಂದಿರುವ ಪ್ರದೇಶದ ಪ್ರತಿನಿಧಿಯಾಗಿ ಮಾತನಾಡುತ್ತಾರೆ. ಈ ಎರಡೂ ಪ್ರಕರಣಗಳು, ಪರಿಸರ ಕಾಳಜಿಯ ಪ್ರಶ್ನೆಗಳು ಮತ್ತು ಅಧಿಕಾರ ಕೇಂದ್ರವನ್ನು ಪ್ರಶ್ನಿಸುವುದು ಬೇರೆ ಬೇರೆಯಲ್ಲ ಎನ್ನುವುದನ್ನು ಹೇಳುವಂತಿವೆ. ಗಂಗಾ ನದಿಯು, ದೇಶದ ಸಾಂಸ್ಕೃತಿಕ ಮತ್ತು ಧಾರ್ಮಿಕ ಪರಿಕಲ್ಪನೆಯ ಕೇಂದ್ರದಲ್ಲಿದೆ. ಆದರೆ, ಅದಕ್ಕೆ ಸಂಬಂಧಿಸಿದ ಪರಿಸರ ಹೋರಾಟಕ್ಕೆ ಅಧಿಕಾರ ವ್ಯವಸ್ಥೆಯು ಸೂಕ್ತ ಗಮನ ಹರಿಸುತ್ತಿಲ್ಲ. ಲಡಾಖ್, ಭೌಗೋಳಿಕವಾಗಿ ಅಧಿಕಾರ ಕೇಂದ್ರದಿಂದ ದೂರವಿದ್ದರೂ ದೇಶದ ಭೌಗೋಳಿಕ ರಾಜಕೀಯಕ್ಕೆ ಮಹತ್ವದ ಪ್ರದೇಶವಾಗಿದೆ. ಈ ಎರಡೂ ಪ್ರಕರಣಗಳಲ್ಲಿ, ಪರಿಸರ ಕಾಳಜಿಯು ಆರ್ಥಿಕ ಬೆಳವಣಿಗೆ ಅಥವಾ ಕಾರ್ಯತಂತ್ರದ ಹಿತಾಸಕ್ತಿಗಳ ಅಧೀನದಲ್ಲಿದೆ. ಇಲ್ಲೊಂದು ಪ್ರಶ್ನೆ ಕೇಳಿಕೊಳ್ಳಬೇಕು: ರಾಜಕೀಯ ವಿಕೇಂದ್ರೀಕರಣವಾಗದ ಅಥವಾ ಪ್ರಾದೇಶಿಕ ಧ್ವನಿಗಳಿಗೆ ಗೌರವ ಕೊಡದ ಕೇಂದ್ರೀಕೃತ ವ್ಯವಸ್ಥೆಯಲ್ಲಿ ಪರಿಸರ ನ್ಯಾಯ ಸಾಧ್ಯವೇ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳದಿದ್ದರೆ, ಪರಿಸರ ರಕ್ಷಣೆ ಘೋಷಣೆಯಾಗಿಯಷ್ಟೇ ಉಳಿಯುತ್ತದೆ.

ಅಗರ್ವಾಲ್‌ರ ಬಲಿದಾನವು ದೇಶದ ಪರಿಸರ ಕಾಳಜಿ, ಚಳವಳಿಗಳಿಗೆ ಮಹತ್ವದ ತಿರುವು ನೀಡಬೇಕಿತ್ತು. ಬದಲಾಗಿ, ಅದು ಮರೆತುಹೋದ ಅಧ್ಯಾಯವಾಗಿದೆ. ಅದೇ ರೀತಿ, ವಾಂಗ್ಚುಕ್ ಅವರ ಬಂಧನವು ಪರಿಸರ ಹಕ್ಕು ಮತ್ತು ಪ್ರಜಾಪ್ರಭುತ್ವಕ್ಕಾಗಿ ಧ್ವನಿ ಎತ್ತಲು ಧೈರ್ಯ ಮಾಡುವವರಿಗೆ ಒಂದು ಎಚ್ಚರಿಕೆಯ ಸಂಕೇತವಾಗಿದೆ. ಭಾರತದ ಸುಸ್ಥಿರ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವದ ಭವಿಷ್ಯಕ್ಕಾಗಿ, ಅದು ತನ್ನ ಆತ್ಮಸಾಕ್ಷಿಯನ್ನು ಎಚ್ಚರಗೊಳಿಸುವವರನ್ನು ಮೌನಗೊಳಿಸುವ ಬದಲು ಅವರ ಪರಿಸರ ಕಾಳಜಿಗಳನ್ನು ಆಲಿಸಲು ಕಲಿಯಬೇಕು. ನದಿ, ಪರ್ವತ, ಗಾಳಿ, ಮಣ್ಣು, ಮತ್ತು ಪ್ರಾಣಿ– ಪಕ್ಷಿಗಳು ಮನುಷ್ಯನ ಭಾಷೆಯಲ್ಲಿ ತಮಗಾಗಿ ಮಾತನಾಡಲು ಸಾಧ್ಯವಿಲ್ಲ. ಸದಾ ವೇಗವಾಗಿ ಮುನ್ನುಗ್ಗುವ ನಮಗೆ ಅವುಗಳ ಭಾಷೆಯನ್ನು ಗಮನಿಸುವಷ್ಟು ವ್ಯವಧಾನ ನಮಗಿಲ್ಲ. ಆದ್ದರಿಂದ, ಅವು ಆತ್ಮಸಾಕ್ಷಿ ಉಳಿಸಿಕೊಂಡಿರುವ ಮನುಷ್ಯರ ಧ್ವನಿಯನ್ನು ಅವಲಂಬಿಸಿವೆ.

ವಾಂಗ್ಚುಕ್ ಎಚ್ಚರಿಸಿದಂತೆ, 'ಹಿಮನದಿಗಳ ಕರಗುವಿಕೆ ಮತ್ತು ಅದರೊಂದಿಗೆ ಅರಣ್ಯನಾಶ ಮುಂದುವರಿದರೆ, ನಮ್ಮ ಪವಿತ್ರ ನದಿಗಳಾದ ಗಂಗಾ, ಬ್ರಹ್ಮಪುತ್ರ ಮತ್ತು ಸಿಂಧೂ ಭವಿಷ್ಯದಲ್ಲಿ ಋತುಮಾನದ ನದಿಗಳಾಗಬಹುದು. ಅಗರ್ವಾಲ್ ಅವರು ತಮ್ಮ ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಳ್ಳುವಾಗ ಹೇಳಿದ, 'ಗಂಗಾ ನದಿಯನ್ನು ಉಳಿಸುವ ಪ್ರಕ್ರಿಯೆಯಲ್ಲಿ ನಾನು ಸತ್ತರೂ ನನಗೆ ಯಾವುದೇ ವಿಷಾದವಿಲ್ಲ. ನನ್ನ ಜೀವನದ ಅಂತ್ಯವು ನದಿಯನ್ನು ಉಳಿಸಲು ಕೈಗೊಳ್ಳುತ್ತಿರುವ ಪ್ರಯತ್ನಗಳ ಅಂತ್ಯವೆಂದು ನಾನು ಅರ್ಥೈಸುವುದಿಲ್ಲ' ಎನ್ನುವ ಮಾತಿನ ಅರ್ಥವನ್ನು ನಾವು ಗಮನಿಸಬೇಕು. ಪ್ರಸ್ತುತ, 'ಅರಾವಳಿ ಬೆಟ್ಟಗಳನ್ನು ಅಕ್ರಮ ಗಣಿಗಾರಿಕೆಯಿಂದ ಉಳಿಸಿ' ಎನ್ನುವ ಜನಜಾಗೃತಿ ಸದ್ದು ಮಾಡುತ್ತಿದೆ. ಪರಿಸರ ರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿ ಜೊತೆಯಾಗಿ ಹೋಗದಿದ್ದರೆ ಈ ಜಗತ್ತಿಗೆ ಉಳಿಗಾಲವಿಲ್ಲ ಎನ್ನುವುದನ್ನು ಪ್ರಕೃತಿಯು ನಮಗೆ ಮತ್ತೆ ಮತ್ತೆ ಮನದಟ್ಟು ಮಾಡುತ್ತಿದ್ದರೂ, ನಾವು ಕಿವುಡರಾಗಿದ್ದೇವೆ, ಕುರುಡರಾಗಿದ್ದೇವೆ.

ನಮ್ಮ ಲೋಕದೃಷ್ಟಿ ಕಿರಿದಾದಂತೆ, ಪರಿಸರದ ಉಳಿವಿಗಾಗಿ ಧ್ವನಿಯಾಗುವವರ ಬವಣೆಗಳು ಏಕಾಂಗಿ ಹೋರಾಟವಾಗಿ ಉಳಿಯುವುದು ಅಥವಾ ಸದ್ದಿಲ್ಲದೇ ಕಣ್ಮರೆಯಾಗುವುದು ವರ್ತಮಾನದ ದುರಂತ. ಅಗರ್ವಾಲ್ ಅವರ ಮೌನ ಹೋರಾಟಕ್ಕೆ ಬಂದ ದಾರುಣ ಅಂತ್ಯ ಸೋನಮ್ ವಾಂಗ್ಚುಕ್ ಅವರಿಗೆ ಅಥವಾ ಇನ್ನಾವುದೇ ಪರಿಸರ ಹೋರಾಟಗಾರರಿಗೆ ಪುನರಾವರ್ತನೆ ಆಗಬಾರದು. ಅದುವೇ ನಮ್ಮ ಕಾಲದ ತುರ್ತು ನೈತಿಕ ಜವಾಬ್ದಾರಿ.



ವಾಚಕರ ವಾಣಿ

ಒಂದೇ ದಿನ 2 ಪರೀಕ್ಷೆ: ಗೊಂದಲ ಸೃಷ್ಟಿ

ಕೇಂದ್ರೀಯ ವಿದ್ಯಾಲಯ, ಜವಾಹರ್ ನವೋದಯ ವಿದ್ಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಜನವರಿ 10 ಮತ್ತು 11ರಂದು ಸ್ಪರ್ಧಾತ್ಮಕ ಪರೀಕ್ಷೆ ನಿಗದಿಯಾಗಿದೆ. ಇದರಿಂದ ಈ ಎರಡೂ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಿ ಸಿದ್ಧತೆ ನಡೆಸಿರುವ ಉದ್ಯೋಗಾಕಾಂಕ್ಷಿಗಳಲ್ಲಿ ಗೊಂದಲ ಏರ್ಪಟ್ಟಿದೆ.

ಈ ಕುರಿತು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಕರೆ ಮಾಡಿದರೆ ಈಗಾಗಲೇ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ. ನಿಮಗೆ ಯಾವ ಹುದ್ದೆ ಅಗತ್ಯವಿದೆಯೋ ಆ ಪರೀಕ್ಷೆ ಬರೆಯಿರಿ ಎಂಬ ಉತ್ತರ ನೀಡುತ್ತಾರೆ. ದಿನಾಂಕ ಮುಂದೂಡಿಕೆ ಆಗದಿದ್ದರೆ ಎರಡೂ ಪರೀಕ್ಷೆಗಳಿಗೆ ಶುಲ್ಕ ಪಾವತಿಸಿದವರಿಗೆ ತೊಂದರೆಯಾಗಲಿದೆ. ರಾಜ್ಯ ಸರ್ಕಾರ ಉದ್ಯೋಗಾಕಾಂಕ್ಷಿಗಳ ಹಿತ ಕಾಪಾಡಲು ತ್ವರಿತ ಕ್ರಮಕ್ಕೆ ಮುಂದಾಗಬೇಕಿದೆ.

ಶಾಂತಕುಮಾರಿ ಕೆ., ಬೆಂಗಳೂರು

ಪ್ರಯಾಣಿಕರ ಜತೆ ಅನುಚಿತ ವರ್ತನೆ ಸಲ್ಲ

ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಇತ್ತೀಚೆಗೆ ನಿಗದಿತ ಸಂಖ್ಯೆಗಿಂತ ಹೆಚ್ಚು ಜನ ಪ್ರಯಾಣಿಸುವುದು ಸರ್ವೇಸಾಮಾನ್ಯ. ಈ ಕಾರಣದಿಂದ ಜನರನ್ನು ನಿಯಂತ್ರಿಸಲು ಕೆಲವು ನಿಲ್ದಾಣಗಳಲ್ಲಿ ಚಾಲಕರು ಬಸ್ ನಿಲ್ಲಿಸದೆ ಹೋಗುವುದುಂಟು. ಇದರಿಂದ ಶಾಲಾ– ಕಾಲೇಜು ವಿದ್ಯಾರ್ಥಿಗಳಿಗೆ ನಿಗದಿತ ಸಮಯಕ್ಕೆ ಗಮ್ಯ ಸ್ಥಾನ ತಲಪಲು ತೊಂದರೆಯಾಗುತ್ತಿದೆ. ಕೆಲವು ನಿರ್ವಾಹಕರು ಬಸ್‌ನಲ್ಲಿ ಪ್ರಯಾಣಿಸುವ ವಯೋವೃದ್ಧರು, ವಿದ್ಯಾರ್ಥಿಗಳು ಹಾಗೂ ಮಹಿಳೆಯರನ್ನು ಬಸ್ ಹತ್ತುವಾಗ, ಇಳಿಯುವಾಗ ಏಕವಚನದಲ್ಲಿ ಗದರಿಸುತ್ತಾರೆ. ಸರಿಯಾಗಿ ಚಿಲ್ಲರೆ ನೀಡುವುದಿಲ್ಲ. ಚಿಲ್ಲರೆಗಾಗಿ ವಾದ, ವಿವಾದ ನಡೆದು ಜಗಳ ತಾರಕಕ್ಕೇರಿರುವ ಉದಾಹರಣೆಗಳಿವೆ. ಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸುವಂತೆ ನಿರ್ವಾಹಕರು ಮತ್ತು ಚಾಲಕರಿಗೆ ನಿಗಮದ ಹಿರಿಯ ಅಧಿಕಾರಿಗಳು ಸೂಚಿಸಬೇಕಿದೆ.

ದರ್ಶನ್ ಚಂದ್ರ ಎಂ.ಪಿ., ಚಾಮರಾಜನಗರ

ಪಠ್ಯದಲ್ಲಿ ಭಗವದ್ಗೀತೆ: ಔಚಿತ್ಯದ ಪ್ರಶ್ನೆ

ಶಾಲಾ ಪಠ್ಯದಲ್ಲಿ ಭಗವದ್ಗೀತೆ ಸೇರ್ಪಡೆ ಕುರಿತಂತೆ ಗಂಭೀರ ಚರ್ಚೆ ನಡೆಯುತ್ತಿದೆ. ಈ ಕುರಿತಂತೆ ಭಾರತೀಯ ಪುರಾಣ, ತತ್ತ್ವ, ಸಾಹಿತ್ಯ, ಪರಂಪರೆ ಇತ್ಯಾದಿ ಕುರಿತು ಸಾಮಾನ್ಯ ಅರಿವು ಇಲ್ಲದವರು ಬಾಲಿಶ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ತಲೆಮಾರಿನಿಂದ ರೂಢಿಗತವಾಗಿ ಹರಿದು ಬಂದ ಜನರಲ್ಲಿ ಸಾಮಾಜಿಕ ಹಿತದ ಅನನ್ಯ ವಿವೇಕ ತುಂಬಿದ ಜನಪದ ತತ್ತ್ವ ಚಿಂತನೆಗಳಿವೆ. ಲೋಕಕ್ಕೆ ಜ್ಞಾನದ ಬೆಳಕು ನೀಡುವ ಉಪನಿಷತ್ ನುಡಿಗಳಿವೆ. ಕುವೆಂಪು ಅವರ ವಿಶ್ವಮಾನವ ಚಿಂತನೆ ಇದೆ. ಭಾರತೀಯ ಸಂವಿಧಾನವಿದೆ. ಇಂದಿನ, ಮುಂದಿನ ಎಲ್ಲಾ ಕಾಲಕ್ಕೂ ಓದಿ ಬದುಕಿಗೆ ಬೆಳಕು ನೀಡುವ ಹಲವು ಪಠ್ಯಗಳಿವೆ.

ಹಾಗಿರುವಾಗ ಕೇವಲ ಭಗವದ್ಗೀತೆಯೊಂದನ್ನೇ ಕುರಿತು ಮಾತಾಡುವುದರ ಹಿತಾಸಕ್ತಿ ಏನಿದೆ; ಅಷ್ಟಕ್ಕೂ ಭಗವದ್ಗೀತೆಯಲ್ಲಿ ಯಾವ ಭಾಗವನ್ನು ಪಠ್ಯ ಮಾಡಬೇಕು? ಈಗ ಮಠಗಳಲ್ಲಿ ಏನನ್ನು ಬಾಯಿಪಾಠ ಮಾಡಿಸಲಾಗುತ್ತಿದೆ ಎಂಬುದನ್ನಾದರೂ ಸ್ಪಷ್ಟಪಡಿಸಿದರೆ ಒಳ್ಳೆಯದಲ್ಲವೇ.

ಟಿ. ಗೋವಿಂದರಾಜು, ಬೆಂಗಳೂರು

ಮರ್ಯಾದೆಗೇಡು ಹತ್ಯೆಗೆ ಕೊನೆ ಎಂದು?

ಹುಬ್ಬಳ್ಳಿ ತಾಲ್ಲೂಕಿನ ಇನಾಂ ವೀರಾಪುರ ಗ್ರಾಮದಲ್ಲಿ ಗರ್ಭಿಣಿಯ ಮರ್ಯಾದೆಗೇಡು ಹತ್ಯೆಯಾಗಿರುವುದು ಅಮಾನವೀಯ. ಆಧುನಿಕ ಯುಗದಲ್ಲೂ ಮರ್ಯಾದೆಯ ಹೆಸರಿನಲ್ಲಿ ಮಹಿಳೆಯರ ಹತ್ಯೆ ನಡೆಯುತ್ತಿದೆ. ಸಮಾಜದಲ್ಲಿ ಆಳವಾಗಿ ಬೇರೂರಿರುವ ಜಾತಿ ವ್ಯವಸ್ಥೆಗೆ ಈ ಪ್ರಕರಣಗಳು ಕನ್ನಡಿ ಹಿಡಿದಿವೆ. ತಮ್ಮಿಷ್ಟದಂತೆ ಬದುಕುವ ಹಕ್ಕು ಎಲ್ಲರಿಗೂ ಇದೆ. ಮರ್ಯಾದೆಗೆ ಧಕ್ಕೆಯಾಯಿತು ಎಂದು ಅನೈತಿಕತೆಯ ದಂಡವನ್ನು ಕೈಗೆ ತೆಗೆದುಕೊಂಡು ಶಿಕ್ಷಿಸುವ ಅಧಿಕಾರ ಯಾರಿಗೂ ಇಲ್ಲ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಲು ಸರ್ಕಾರ ಮುಂದಾಗಬೇಕಿದೆ. ಜೊತೆಗೆ, ಅಂತರ್ಜಾತಿ ವಿವಾಹವಾಗಿ ಜೀವಭಯ ಇರುವವರಿಗೆ ಸೂಕ್ತ ರಕ್ಷಣೆಯನ್ನೂ ನೀಡಬೇಕಿದೆ.

ರೇಣುಕಾ ಹನ್ನುರ್, ಕಲಬುರಗಿ

ಬಿಸಿಯೂಟ ವಿಸ್ತರಣೆ ಕ್ರಮ ಸ್ವಾಗತಾರ್ಹ

ಎಲ್‌ಕೆಜಿ, ಯುಕೆಜಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೂ ಬಿಸಿಯೂಟ ವಿಸ್ತರಿಸಲು ನಿರ್ಧರಿಸಿರುವ ರಾಜ್ಯ ಸರ್ಕಾರದ ಕ್ರಮ ಸ್ವಾಗತಾರ್ಹವಾದುದು. ವಿದ್ಯಾರ್ಥಿಗಳಿಗೆ ಬಿಸಿಯೂಟ, ನೋಟ್‌ಬುಕ್, ಪಠ್ಯಪುಸ್ತಕ, ಶೂ, ಸಾಕ್ಸ್, ಹಾಲು, ಮೊಟ್ಟೆ ವಿತರಿಸುವುದರಿಂದ ಶಾಲಾ- ಕಾಲೇಜುಗಳಲ್ಲಿ ಹಾಜರಾತಿ ಹೆಚ್ಚಲಿದೆ. ಇದು ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟದ ಸುಧಾರಣೆಗೆ ಸಹಕಾರಿಯಾಗಲಿದೆ. ಆಹಾರ ಕಿಟ್‌ನಂತೆ ಪುಸ್ತಕ ಕಿಟ್ ನೀಡಿದರೆ ಗ್ರಾಮೀಣ ಬಡ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಯೋಜನವಾಗಲಿದೆ.

ಸಾಗರ್ ಗೌಡ ದರೂರ್, ಬಳ್ಳಾರಿ

ರಾಜ್ಯದಲ್ಲಿ ಬೆಲೆ ಏರಿಕೆ: ಖರ್ಗೆ ಮೌನವೇಕೆ?

ಒಂದೇ ವರ್ಷದಲ್ಲಿ ಮೋದಿ ಸರ್ಕಾರ ಎರಡು ಬಾರಿ ರೈಲು ಪ್ರಯಾಣ ದರ ಏರಿಸಿದೆ. ಜನಸಾಮಾನ್ಯರನ್ನು ಲೂಟಿ ಹೊಡೆಯುವುದಕ್ಕೆ ಯಾವುದೇ ಅವಕಾಶ ನೀಡುವುದಿಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಅವರದೇ ಪಕ್ಷ ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿದೆ. ಬಸ್ ದರ, ಇಂಧನ, ದಸ್ತಾವೇಜು ಪತ್ರ, ಹಾಲು, ಮೊಸರು, ಮದ್ಯದ ಬೆಲೆ ಏರಿಕೆ ಮಾಡಿದೆ. ಬೆಲೆ ಏರಿಕೆಯ ಬಾಣಲೆಯಲ್ಲಿ ಬಿದ್ದು ಜನರು ವಿಲವಿಲ ಒದ್ದಾಡುತ್ತಿದ್ದಾರೆ. ಇದನ್ನು ನೋಡಿಯೂ ಖರ್ಗೆಯವರು ಸುಮ್ಮನಿರುವುದೇಕೆ? ಗಾಜಿನ ಮನೆಯಲ್ಲಿ ನಿಂತು ಇತರರಿಗೆ ಕಲ್ಲು ಬೀಸಬಾರದಲ್ಲವೇ?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಚುರುಮುರಿ

ಗಾಂಧಿ ಗಾಯಬ್!



• ಮಣ್ಣೆ ರಾಜು

'ರೀ, ಸ್ಕೂಲ್ ಡೇಗೆ ಮಗನಿಗೆ ಗಾಂಧಿ ವೇಷ ಹಾಕಬೇಕು, ಕಾಸ್ಟ್ಯೂಮ್ಸ್ ತನ್ನಿ' ಅಂದಳು ಸುಮಿ.

'ಗಾಂಧಿಗೆ ಕಿರೀಟ, ಗದೆ, ಕತ್ತಿ- ಗುರಾಣಿ, ಬಿಲ್ಲು- ಬಾಣ ಬೇಕಾಗಿಲ್ಲ, ಕಚ್ಚೆ ಉಡಿಸಿ, ವಸ್ತ್ರ ಹೊದಿಸಿ, ಕೈಗೊಂದು ಕೋಲು ಕೊಟ್ಟರೆ ಸಾಕು' ಎಂದ ಶಂಕ್ರಿ.

'ನಿಮಗೆಲ್ಲಾ ಗಾಂಧೀಜಿ ಸಸ್ತಾ, ಸದರ, ಸರಳ ಆಗಿಬಿಟ್ಟಿದ್ದಾರೆ ಕಣ್ರೀ' ಸುಮಿಗೆ ಸಿಟ್ಟು.

'ನಮಗೇ ಅಲ್ಲ, ರಾಜಕೀಯ ಪಕ್ಷಗಳು ಗಾಂಧಿಯನ್ನು ಇನ್ನೂ ಸಸ್ತಾ ಮಾಡಿಕೊಂಡುಬಿಟ್ಟಿವೆ. ಮುಂದಿನ ದಿನಗಳಲ್ಲಿ ಗಾಂಧಿ ಬ್ರ್ಯಾಂಡಿನ ಸರ್ಕಾರಿ ಯೋಜನೆಗಳ ಹೆಸರು ಬದಲಾಗಬಹುದು'.

'ಗಾಂಧಿ ಬಗ್ಗೆ ದ್ವೇಷಭಕ್ತಿ ಹರಡುವವರು ಹೆಚ್ಚಾಗುತ್ತಿದ್ದರೆ ಇನ್ನೇನಾಗುತ್ತೆ...'

'ಕೆಲವರಿಗೆ ಗಾಂಧಿ ತತ್ತ್ವ, ಸತ್ವ ಸಪ್ಪೆ ಎನಿಸಿದೆಯಂತೆ. ಅಭಿರುಚಿ ಬದಲಾಯಿಸುವ ಪ್ರಯತ್ನ ನಡೆದಿದೆ. ಮುಂದೆ ಗಾಂಧಿ ರಸ್ತೆ, ಗಾಂಧಿ ವೃತ್ತ, ಗಾಂಧಿ ಮಂದಿರ, ಗಾಂಧಿ ನಗರದ ಹೆಸರುಗಳೂ ಬದಲಾಗಬಹುದು, ನೆಲೆನಿಂತಿರುವ ಗಾಂಧಿ ಪುತ್ಥಳಿಗಳೂ ಪಲಾಯನ ಆಗಿಬಿಡಬಹುದು!'

'ಏನೇ ಬದಲಾದರೂ ರೂಪಾಯಿ ನೋಟಿನಲ್ಲಿರುವ ಗಾಂಧಿ ಫೋಟೊ ಬದಲಾಗದು, ಗಾಂಧಿ ನೋಟು ಎಲ್ಲರಿಗೂ ಬೇಕು'.

'ನೋಟು ಎಲ್ಲರಿಗೂ ಬೇಕು, ನೋಟಿನೊಳಗಿನ ಗಾಂಧಿ ಬೇಕಾಗಿಲ್ಲ, ಗಾಂಧಿ ಬದಲಾವಣೆ ಪರ್ವ ಮುಂದುವರಿದರೆ ನೋಟಿನ ಗಾಂಧಿ ಫೋಟೊವೂ ಬದಲಾಗಬಹುದು. ಸಂಪೂರ್ಣ ಡಿಜಿಟಲ್ ಪೇಮೆಂಟ್ ವ್ಯವಹಾರ ಶುರುವಾದರೆ ನೋಟೂ ಇಲ್ಲ, ಗಾಂಧಿಯೂ ಇಲ್ಲ!'

'ಇತಿಹಾಸ ತಿರುಚುವ, ಪರಚುವ ಪ್ರಯತ್ನವಾದರೆ ಮಕ್ಕಳ ಇತಿಹಾಸ ಪಠ್ಯದಿಂದಲೂ ಗಾಂಧಿ ಗಾಯಬ್ ಆಗಬಹುದಲ್ವಾ?!'

'ಆಗಬಹುದು. ಸರ್ಕಾರಿ ಸಿಲೆಬಸ್‌ನಿಂದಲೂ ಗಾಂಧಿ ಕಣ್ಮರೆಯಾದರೆ ಗಾಂಧಿ ಜಯಂತಿ, ಹುತಾತ್ಮರ ದಿನಾಚರಣೆಗಳು ನಿಂತುಹೋದರೂ ಆಶ್ಚರ್ಯವಿಲ್ಲ. ಗಾಂಧಿ ಭಕ್ತರು ಪಿತೃಪಕ್ಷದಲ್ಲಿ ರಾಷ್ಟ್ರಪಿತನ ಫೋಟೊ ಮುಂದೆ ಎಡೆ ಇಟ್ಟು ಮನೆಮಟ್ಟಿಗೆ ಗಾಂಧಿ ಹಬ್ಬ ಆಚರಿಸಿಕೊಳ್ಳಬಹುದು!' ಎಂದ ಶಂಕ್ರಿ.

ಸಂಗತ

ದ್ವೇಷವಾದಿಗಳ ಕೈಗೆ ಅಪಾಯಕಾರಿ ಅಸ್ತ್ರ?

ದ್ವೇಷ ಭಾಷಣ ತಡೆಯುವ ಉದ್ದೇಶದ ಮಸೂದೆ ದ್ವೇಷವಾದಿಗಳ ಕೈಗೆ ಸಿಕ್ಕರೆ ಗತಿ ಏನು? ತರಾತುರಿಯಲ್ಲಿ ಮಸೂದೆ ಜಾರಿ ಅಪಾಯಕ್ಕೆ ಕಾರಣವಾಗಬಹುದು.

• ಬಿ. ಶ್ರೀಪಾದ ಭಟ್

ಕಳೆದ ಹನ್ನೊಂದು ವರ್ಷಗಳ ಅವಧಿಯಲ್ಲಿ 'ದ್ವೇಷ ಭಾಷಣ'ಗಳ ಪ್ರಮಾಣ ದೇಶದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದು ಆತಂಕಕಾರಿ ಬೆಳವಣಿಗೆ.

ಬಹಿರಂಗ ಸಮಾವೇಶಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ, ಮಾಧ್ಯಮಗಳಲ್ಲಿ ದ್ವೇಷ ಭಾಷಣದ ಕ್ರೌರ್ಯ ಪ್ರದರ್ಶನವಾಗುತ್ತಿದೆ. ಅದು ಹಲ್ಲೆ, ಗುಂಪುಹತ್ಯೆಗೆ ಕಾರಣ ಆಗುತ್ತಿದೆ. ಹತ್ತು ವರ್ಷಗಳ ಹಿಂದೆ ಉತ್ತರ ಪ್ರದೇಶದ ದಾದ್ರಿಯಲ್ಲಿ ಅಖ್ಲಾಕ್ ಎನ್ನುವ ವ್ಯಕ್ತಿಯನ್ನು ಗೋವಿನ ಮಾಂಸ ಸಂಗ್ರಹಿಸಿಟ್ಟಿದ್ದಾರೆ ಎನ್ನುವ ಗಾಳಿಸುದ್ದಿ ಕಾರಣಕ್ಕೆ ಗುಂಪುಹತ್ಯೆ ಮಾಡಲಾಯಿತು. ಇಪ್ಪತ್ತು ವರ್ಷಗಳ ಹಿಂದೆ ಕರ್ನಾಟಕದ ಆದಿ ಉಡುಪಿಯಲ್ಲಿ ಗೋ ರಕ್ಷಕರ ಹೆಸರಿನಲ್ಲಿ ಹಾಜಬ್ಬ, ಹಸನಬ್ಬ ಎಂಬ ತಂದೆ–ಮಗನ ಮೇಲೆ ಮಾರಣಾಂತಿಕ ಹಲ್ಲೆ ನಡೆದಿತ್ತು, ಬೆತ್ತಲೆ ಮೆರವಣಿಗೆ ಮಾಡಲಾಗಿತ್ತು.

'ಇಂಡಿಯಾ ಸ್ಪೆಂಡ್' ಸಂಸ್ಥೆ ನಡೆಸಿದ ದ್ವೇಷ ಭಾಷಣ ಆಧಾರಿತ ಘಟನೆಗಳ ಅಧ್ಯಯನದ ಪ್ರಕಾರ 2010–2017ರ ಅವಧಿಯಲ್ಲಿ– ಗೋವು ಸಂಬಂಧ ನಡೆಸಲಾದ ಹಲ್ಲೆ, ಹತ್ಯೆಗೆ ಒಳಗಾದವರಲ್ಲಿ ಶೇ 80ರಷ್ಟು ಮುಸ್ಲಿಮರಾಗಿದ್ದಾರೆ.

ಚರ್ಚ್ ಮೇಲೆ ದಾಳಿ, ದಲಿತರ ಮೇಲಿನ ದೌರ್ಜನ್ಯಗಳ ಹಲವು ಪ್ರಕರಣಗಳಲ್ಲಿ ಸಹ ದ್ವೇಷ ಭಾಷಣ ಮುಖ್ಯ ಕಾರಣ ಆಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು 'ದ್ವೇಷ ಭಾಷಣ, ದ್ವೇಷ ಅಪರಾಧ ನಿಯಂತ್ರಣ ಮಸೂದೆ 2025' ಅನ್ನು ಈ ಬಾರಿಯ ವಿಧಾನ ಮಂಡಲ ಅಧಿವೇಶನದಲ್ಲಿ ಮಂಡಿಸಿ ಅಂಗೀಕಾರ ಪಡೆದುಕೊಂಡಿದೆ.



ಮಸೂದೆಯ ಉದ್ದೇಶ ಉತ್ತಮ ಆಗಿದೆ. ಆದರೆ, ಸ್ಪಷ್ಟತೆ ಇಲ್ಲದ ಅಂಶಗಳು, ಅಪಾರದರ್ಶಕತೆ ಆತಂಕಕ್ಕೆ ಕಾರಣವಾಗಿದೆ. ದ್ವೇಷ ಭಾಷಣವು ನಂತರದಲ್ಲಿ ಗುಂಪು ಹತ್ಯೆ, ಹಿಂಸೆಗೆ ಕಾರಣವಾಗುತ್ತದೆ ಎನ್ನುವ ವಾಸ್ತವವನ್ನು ಮಸೂದೆ ಸ್ಪಷ್ಟವಾಗಿ ಹೇಳುವುದಿಲ್ಲ.

ಇಲ್ಲೊಂದು ಪ್ರಶ್ನೆಯೂ ಇದೆ. ಮತಧರ್ಮಾಂಧತೆ, ದ್ವೇಷ ಹರಡುವುದನ್ನು ತಡೆಯಲು ಕಾನೂನು ಅಗತ್ಯವಿರುವುದು ನಿಜ. ಆದರೆ, ಈಗಿರುವ ಕಾನೂನಿನ ಅಡಿಯಲ್ಲಿ ದ್ವೇಷ ಭಾಷಣವನ್ನು ನಿಯಂತ್ರಿಸಲು ಸಾಧ್ಯವಿಲ್ಲ ಎಂದು ಸರ್ಕಾರಕ್ಕೆ ಅನಿಸಿದೆಯೆ?

ಪರಿಣತರ ಜೊತೆಗೆ ಮಸೂದೆ ಕುರಿತು ಸರ್ಕಾರ ಚರ್ಚೆ ನಡೆಸಿದಂತೆ ಕಾಣುತ್ತಿಲ್ಲ. ವಿಧಾನಮಂಡಲದ ಸದನಗಳಲ್ಲಿಯೂ ಮಸೂದೆ ಕುರಿತು ವಿಸ್ತೃತ ಚರ್ಚೆ ನಡೆಸಲಿಲ್ಲ. ಬಿಜೆಪಿಯವರ ನಿರಂಕುಶ ಪ್ರಭುತ್ವದ ದಾರಿಯನ್ನು ರಾಜ್ಯ ಸರ್ಕಾರವೂ ಅನುಸರಿಸಿರುವುದು ಸರಿಯೆ?

ಮುಖ್ಯವಾಗಿ, ಯಾವುದು ದ್ವೇಷ ಭಾಷಣ ಎಂದು ನಿರ್ಧರಿಸಲು ಇರುವ ಮಾನದಂಡಗಳೇನು? ಮತಧರ್ಮಾಂಧರ ದುಷ್ಟತನ ಪ್ರತಿಯೊಬ್ಬರಿಗೂ ಅರ್ಥವಾಗುತ್ತದೆ. ಮುಂದೆ ಬಿಜೆಪಿ ಅಧಿಕಾರಕ್ಕೆ ಬಂದರೆ ಹಿಂದುತ್ವ ರಾಜಕಾರಣ, ಬ್ರಾಹ್ಮಣಶಾಹಿ ಎಂದು ವಿಮರ್ಶೆ ಮಾಡಿದರೆ ಅದನ್ನು ದ್ವೇಷ ಭಾಷಣ ಎಂದು ಬಂಧಿಸುವುದಿಲ್ಲ ಎನ್ನುವುದಕ್ಕೇನು ಗ್ಯಾರಂಟಿ? ಚಾತುರ್ವರ್ಣ ವ್ಯವಸ್ಥೆ, ಮನುಸ್ಮೃತಿಯನ್ನು ಟೀಕಿಸಿದರೆ ಅದು ದ್ವೇಷ ಭಾಷಣ ಎಂದು ಪರಿಗಣಿಸುವುದಿಲ್ಲ ಎನ್ನುವುದಕ್ಕೆ ಖಾತರಿ ಇಲ್ಲ. ಏಕೆಂದರೆ, ಅದನ್ನು ನಿರ್ಧರಿಸುವ ಮಾನದಂಡಗಳೇನು? ಬಿಜೆಪಿ ಕೈಯಲ್ಲಿ ಇದು ಎಂತಹ ಅಸ್ತ್ರ ಆಗಬಹುದು?

ಕೋರ್ಟ್ ವಿಚಾರಣೆಯಲ್ಲಿ ಆರೋಪಿತರು 'ತಮ್ಮದು ದ್ವೇಷ ಭಾಷಣವಲ್ಲ' ಎಂದು ತಾತ್ತ್ವಿಕವಾಗಿ, ಸೈದ್ಧಾಂತಿಕವಾಗಿ ಸಾಬೀತುಪಡಿಸಲು ಸಾಧ್ಯವೆ? ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಪ್ರಗತಿಪರರು, ಸಾಮಾಜಿಕ ಹೋರಾಟಗಾರರ ಮೇಲೆ ಈ ಕಾಯ್ದೆ ಯಾವ ರೀತಿ ಪ್ರಯೋಗವಾಗಬಹುದು ಎಂದು ನಮ್ಮೆಲ್ಲರ ಅನುಭವಕ್ಕೆ ಬಂದಿದೆ.

ಯುಪಿಎ ಅವಧಿಯಲ್ಲಿ ತಂದ ಯುಎಪಿಎ, ಪಿಎಂಎಲ್‌ಎ ಕಾಯ್ದೆ ಇಂದಿನ ಕೇಂದ್ರ ಸರ್ಕಾರದ ಆಡಳಿತದಲ್ಲಿ ಇಂತಹ ಕರಾಳ ಶಾಸನಗಳಾಗಿವೆ ಎಂದು ಕಾಂಗ್ರೆಸ್ ಪಕ್ಷಕ್ಕೆ ಗೊತ್ತಿದೆಯಲ್ಲವೆ? ಈ ಮಸೂದೆಯೂ ಅದೇ ರೀತಿ ದುರ್ಬಳಕೆಯಾಗದೆ ಇರುವುದೆ?

ನೋಂದಣಿಯಾಗದ ಸಂಸ್ಥೆ, ಸಂಘಟನೆಗಳು ದ್ವೇಷ ಭಾವನೆ ಬಿತ್ತಿದರೆ ಬಂಧಿಸಬಹುದು ಎಂದು ಮಸೂದೆಯಲ್ಲಿ (clause 5) ಇದೆ; ಹೀಗಾಗಿ ಆರ್‌ಎಸ್‌ಎಸ್ ಸಹ ಇದರಿಂದ ಬಚಾವಾಗಲು ಸಾಧ್ಯವಿಲ್ಲ ಎಂದು ಹೇಳಬಹುದು. ಆದರೆ, ಇದೇ ರೀತಿ ನೋಂದಣಿಯಾಗದ ಅನೇಕ ಜನಪರ ವೇದಿಕೆ, ಸಂಘಟನೆಗಳಿವೆ. ದುರ್ಜನರು, ಸಜ್ಜನರು ಇಬ್ಬರನ್ನೂ ಒಂದೇ ತಕ್ಕಡಿಯಲ್ಲಿ ತೂಗಿದರೆ ಪ್ರಜಾಪ್ರಭುತ್ವ ಉಳಿದೀತೆ?

ಮಸೂದೆಯಲ್ಲಿ ಪೊಲೀಸರಿಗೆ– ವ್ಯಕ್ತಿ, ಸಂಘಟನೆಗಳು ದ್ವೇಷ ಭಾಷಣ ಮಾಡುತ್ತಾರೆ ಎಂದು ಮುಂಚಿತವಾಗಿ ಅನಿಸಿದರೆ, ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬಹುದು ಎಂದು ಹೇಳಲಾಗಿದೆ. ಇದು ಮತಧರ್ಮಾಂಧರ ಜೊತೆಗೆ ಸರ್ಕಾರದ ಸಿದ್ಧಾಂತವನ್ನು, ನೀತಿಯನ್ನು ವಿಮರ್ಶಿಸುವ ಪ್ರಗತಿಪರ ಚಿಂತಕರು, ಸಾಮಾಜಿಕ ಕಾರ್ಯಕರ್ತರ ಮೇಲೂ ಪ್ರಯೋಗಗೊಳ್ಳಬಹುದು. ಇದು, 'ಪೊಲೀಸ್ ರಾಜ್'ಗೆ ಮುನ್ನುಡಿ ಆಗಬಹುದಲ್ಲವೇ? ಸಂವಿಧಾನದ ವಿಧಿ 19(1)ರ ಉಲ್ಲಂಘನೆಯಲ್ಲವೆ?

ದ್ವೇಷ ಭಾಷಣ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ನಡುವೆ ಸಾಕಷ್ಟು ವ್ಯತ್ಯಾಸವಿದೆ. ಆ ಗೆರೆಯನ್ನು ಪ್ರಸಕ್ತ ಮಸೂದೆ ಅಳಿಸಿಹಾಕಬಹುದು.

ಮತ್ತದೇ ಪ್ರಶ್ನೆ: ಈಗಿರುವ ಕಾನೂನನ್ನು ಸಮರ್ಥವಾಗಿ ಬಳಸಿಕೊಳ್ಳಲು ಸಾಧ್ಯವಿಲ್ಲವೆ? ಪ್ರಸಕ್ತ ಕಾನೂನಿನಲ್ಲಿ ವೈಫಲ್ಯ ಎಲ್ಲಿದೆ ಎಂದು ಪತ್ತೆ ಹಚ್ಚಬೇಕಲ್ಲವೆ?

ಮಸೂದೆಯನ್ನು ತರಾತುರಿಯಲ್ಲಿ ಜಾರಿಗೊಳಿಸುವುದು ಬೇಡ; ಕೂಲಂಕಷವಾಗಿ ಸಮಾಲೋಚನೆ ಹಾಗೂ ಸಂವಾದವೇ ವಿವೇಕಯುತ ದಾರಿ ಎನ್ನುವುದನ್ನು ರಾಜ್ಯ ಸರ್ಕಾರ ಮರೆಯಬಾರದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಈ ವರ್ಷ ದೇಶದ ರಾಜಕೀಯದಲ್ಲಿ ಹಲವು ಮಹತ್ತರ ವಿದ್ಯಮಾನಗಳು ಘಟಿಸಿವೆ. ದೆಹಲಿ ಮತ್ತು ಬಿಹಾರದಲ್ಲಿ ವಿಧಾನಸಭಾ ಚುನಾವಣೆಗಳು ನಡೆದವು. ಉಪರಾಷ್ಟ್ರಪತಿ ಹುದ್ದೆಗೆ ಅನಿರೀಕ್ಷಿತವಾಗಿ ಚುನಾವಣೆ ನಡೆಸಬೇಕಾಯಿತು. ಹೊಸ ಕಾಯ್ದೆಗಳು, ಮಸೂದೆಗಳಿಗೆ ಸಂಬಂಧಿಸಿದಂತೆ ಆಡಳಿತ ಪಕ್ಷ ಹಾಗೂ ವಿಪಕ್ಷಗಳ ನಡುವಣ ಜಟಾಪಟಿ ಗಮನ ಸೆಳೆಯಿತು. ಭಾರತೀಯ ಚುನಾವಣಾ ಆಯೋಗ ಬಿಹಾರದಲ್ಲಿ ನಡೆಸಿದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ವಿವಾದಕ್ಕೆ ಗುರಿಯಾಯಿತು. ಮತಕಳವು ಆರೋಪ ಭಾರಿ ಸದ್ದು ಮಾಡಿತು. ಹೊಸ ವರ್ಷದ ಅರುಣೋದಯಕ್ಕೂ ಮುನ್ನ, 2025ರಲ್ಲಿ ದೇಶದ ರಾಜಕೀಯದಲ್ಲಿ ಸದ್ದು ಮಾಡಿದ ಬೆಳವಣಿಗೆಗಳತ್ತ ಒಂದು ನೋಟ

ಬಿಜೆಪಿ ಗೆಲುವು, ಎನ್‌ಡಿಎಗೆ ಬಲ

• ಮಹಮ್ಮದ್ ನೂಮಾನ್

ನವೆಂಬರ್‌ನಲ್ಲಿ ನಡೆದ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಭಾರಿ ಬಹುಮತದೊಂದಿಗೆ ಎನ್‌ಡಿಎ ಮತ್ತೆ ಅಧಿಕಾರಕ್ಕೇರಿತು. ಪ್ರಬಲ ಪೈಪೋಟಿ ನೀಡಬಹುದು ಎಂದು ಭಾವಿಸಿದ್ದ ವಿರೋಧ ಪಕ್ಷಗಳ 'ಮಹಾಘಟಬಂಧನ' ಮುಖಭಂಗ ಅನುಭವಿಸಿತು. ಆಡಳಿತಾರೂಢ ಹಾಗೂ ವಿರೋಧ ಪಕ್ಷಗಳ ಪ್ರಮುಖ ನಾಯಕರ ತುರುಸಿನ ಪ್ರಚಾರ, ಆರೋಪ–ಪ್ರತ್ಯಾರೋಪಗಳಿಂದಾಗಿ ಈ ಚುನಾವಣೆ ಇಡೀ ದೇಶದ ಗಮನ ಸೆಳೆಯಿತು.

ಬಿಹಾರ ನಿತೀಶ್‌ಗೆ ಮತ್ತೆ ಪಟ್ಟ

243 ಸದಸ್ಯಬಲದ ವಿಧಾನಸಭೆಯಲ್ಲಿ ಎನ್‌ಡಿಎ 202 ಸ್ಥಾನಗಳನ್ನು ಜಯಿಸಿತು. ಬಿಹಾರ ಚುನಾವಣೆಯಲ್ಲಿ ಬಿಜೆಪಿ ಇದೇ ಮೊದಲ ಬಾರಿಗೆ ಅತಿಹೆಚ್ಚು (89) ಸ್ಥಾನಗಳನ್ನು ಗೆದ್ದಿತು. ನಿತೀಶ್ ಕುಮಾರ್ ಅವರು 10ನೇ ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಸಾಮ್ರಾಟ್ ಚೌಧರಿ ಮತ್ತು ವಿಜಯ್ ಕುಮಾರ್ ಸಿನ್ಹಾ ಉಪ ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡರು.

- ಚುನಾವಣೆಯಲ್ಲಿ ಹೀನಾಯವಾಗಿ ಸೋಲುಂಡ ಬೆನ್ನಲ್ಲೇ, ಕಾಂಗ್ರೆಸ್ ಹಾಗೂ ಆರ್‌ಜೆಡಿ ಪಕ್ಷಗಳ ಮುಖಂಡರು ಆರೋಪ–ಪ್ರತ್ಯಾರೋಪ ನಡೆಸಿದರು
- ಲಾಲೂ ಪ್ರಸಾದ್ ಅವರ ಕುಟುಂಬದ 'ಕದನ' ಕೂಡಾ ಬೀದಿಗೆ ಬಂತು. 'ನಾನು ರಾಜಕೀಯವನ್ನು ತೊರೆಯುತ್ತಿದ್ದೇನೆ ಮತ್ತು ಕುಟುಂಬವನ್ನು ತ್ಯಜಿಸುತ್ತಿದ್ದೇನೆ' ಎಂದು ಲಾಲೂ ಅವರ ಕಿರಿಯ ಮಗಳು ರೋಹಿಣಿ ಘೋಷಿಸಿದರು
- ಇದೀಗ 18 ರಾಜ್ಯಗಳು (ರಾಷ್ಟ್ರಪತಿ ಆಳ್ವಿಕೆಯಿರುವ ಮಣಿಪುರ ಹೊರತುಪಡಿಸಿ) ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ ಎನ್‌ಡಿಎ ಅಧಿಕಾರದಲ್ಲಿದೆ

ದೆಹಲಿಯಲ್ಲಿ ಅರಳಿದ 'ಕಮಲ'

ದೇಶದ ರಾಜಧಾನಿ ದೆಹಲಿಯ ವಿಧಾನಸಭೆಗೆ ಫೆಬ್ರುವರಿಯಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ಗೆದ್ದು ಬೀಗಿತು. ಕಳೆದ ಎರಡು ಚುನಾವಣೆಗಳಲ್ಲಿ ಒಂದಂಕಿ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದ್ದ ಕಮಲ ಪಾಳಯವು ಮೂರನೇ ಎರಡು ಬಹುಮತದೊಂದಿಗೆ ದೆಹಲಿಯ ಗದ್ದುಗೆ ಹಿಡಿಯಿತು.

ಆಮ್ ಆದ್ಮಿ ಪಕ್ಷದ (ಎಎಪಿ) ಬಲಿಷ್ಠ ಕೋಟೆ ಎನ್ನಲಾಗಿದ್ದ ದೆಹಲಿಯಲ್ಲಿ ಆ ಪಕ್ಷದ 10 ವರ್ಷಗಳ ಆಡಳಿತ ಕೊನೆಗೊಂಡಿತು. ಬಿಜೆಪಿಯು 27 ವರ್ಷಗಳ ನಂತರದಲ್ಲಿ ಅಧಿಕಾರಕ್ಕೆ ಮರಳಿದರೆ, ಕಾಂಗ್ರೆಸ್ ಪಕ್ಷವು ಸತತ ಮೂರನೇ ಬಾರಿಗೆ ಶೂನ್ಯ ಸಂಪಾದಿಸಿತು. 70 ಸ್ಥಾನಗಳಲ್ಲಿ 48ರಲ್ಲಿ ಬಿಜೆಪಿ ಗೆದ್ದರೆ, 22ರಲ್ಲಿ ಎಎಪಿ ಜಯಿಸಿತು. ಶಾಲಿಮಾರ್ ಬಾಗ್ ಕ್ಷೇತ್ರದ ಶಾಸಕಿ ರೇಖಾ ಗುಪ್ತಾ ಅವರು ಫೆಬ್ರುವರಿ 20ರಂದು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.



2025ರ ಪ್ರಮುಖ ರಾಜಕೀಯ ವಿದ್ಯಮಾನಗಳು


ಧನಕರ್ ದಿಢೀರ್ ರಾಜೀನಾಮೆ

ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ವೈದ್ಯಕೀಯ ಕಾರಣಗಳನ್ನು ನೀಡಿ ಜುಲೈನಲ್ಲಿ ತಮ್ಮ ಹುದ್ದೆಗೆ ದಿಢೀರ್ ರಾಜೀನಾಮೆ ನೀಡಿದರು. 'ಆರೋಗ್ಯದ ಮೇಲೆ ಹೆಚ್ಚಿನ ಗಮನಹರಿಸಲು ಮತ್ತು ವೈದ್ಯಕೀಯ ಸಲಹೆಯನ್ನು ಪಾಲಿಸಲು ಈ ನಿರ್ಧಾರ ತೆಗೆದುಕೊಂಡಿದ್ದೇನೆ' ಎಂದು ರಾಷ್ಟ್ರಪತಿ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದರು.

ಅವರ ಅಧಿಕಾರದ ಅವಧಿ 2027ರ ವರೆಗೂ ಇತ್ತು. ಆದರೆ, ಸಂಸತ್ತಿನ ಮುಂಗಾರು ಅಧಿವೇಶನದ ಮೊದಲ ದಿನ ರಾಜೀನಾಮೆ ಸಲ್ಲಿಸಿದ್ದು ಹಲವು ಪ್ರಶ್ನೆಗಳನ್ನು ಮೂಡಿಸಿತು. ಅವರ ಅನಿರೀಕ್ಷಿತ ರಾಜೀನಾಮೆಗೆ ಕಾರಣಗಳು ಏನಿರಬಹುದು ಎಂಬ ಬಗ್ಗೆ, ಸರ್ಕಾರ ಮತ್ತು ಉಪ ರಾಷ್ಟ್ರಪತಿಯ ಕಚೇರಿ ನಡುವಿನ ಸಂಬಂಧ ಹಾಗೂ ನಮ್ಮ ಸಂಸದೀಯ ವ್ಯವಸ್ಥೆಯಲ್ಲಿ ಈ ಸ್ಥಾನಕ್ಕೆ ಇರುವ ಸ್ವಾಯತ್ತೆಯ ಬಗ್ಗೆ ಚರ್ಚೆಗಳು ನಡೆದವು.

ನ್ಯಾಯಮೂರ್ತಿಗಳಾದ ಯಶವಂತ ವರ್ಮಾ ಮತ್ತು ಶೇಖರ್ ಕುಮಾರ್ ಯಾದವ್ ಅವರ ಪದಚ್ಯುತಿಗೆ ಸಂಬಂಧಿಸಿದ ವಿಷಯವನ್ನು ಧನಕರ್ ಅವರು ನಿಭಾಯಿಸಿದ ರೀತಿ ಕೇಂದ್ರ ಸರ್ಕಾರಕ್ಕೆ ಸಮಾಧಾನ ತಂದಿರಲಿಲ್ಲ ಎಂಬ ಮಾತುಗಳು ಕೇಳಿಬಂದವು.

ಅಲ್ಲದೆ, ಧನಕರ್ ಅವರು ಸಾರ್ವಜನಿಕವಾಗಿ ಆಡಿದ ಕೆಲವು ಮಾತುಗಳು ಕೂಡ ಸರ್ಕಾರಕ್ಕೆ ಸರಿಕಂಡಿರಲಿಲ್ಲ ಎಂಬ ವಾದ ಇದೆ. ಅವರ ರಾಜೀನಾಮೆಯನ್ನು ಮುಂದಿಟ್ಟುಕೊಂಡು ವಿಪಕ್ಷಗಳು ಸರ್ಕಾರವನ್ನು ಟೀಕಿಸಿದವು.



ರಾಧಾಕೃಷ್ಣನ್ ಉಪರಾಷ್ಟ್ರಪತಿ

ಜಗದೀಪ್ ಧನಕರ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಉಪರಾಷ್ಟ್ರಪತಿ ಹುದ್ದೆಗೆ ಸೆಪ್ಟೆಂಬರ್ 9ರಂದು ನಡೆದ ನಡೆದ ಚುನಾವಣೆಯಲ್ಲಿ ಆಡಳಿತಾರೂಢ ಎನ್‌ಡಿಎ ಅಭ್ಯರ್ಥಿ ಸಿ.ಪಿ.ರಾಧಾಕೃಷ್ಣನ್ ಗೆಲುವು ಸಾಧಿಸಿದರು. ಅವರು, ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿ ಬಿ.ಸುದರ್ಶನ ರೆಡ್ಡಿ ಅವರಿಗಿಂತ 152 ಹೆಚ್ಚು ಮತಗಳನ್ನು ಪಡೆದು ದೇಶದ 15ನೇ ಉಪರಾಷ್ಟ್ರಪತಿಯಾಗಿ ಚುನಾಯಿತರಾದರು.

ಇಬ್ಬರೂ ಅಭ್ಯರ್ಥಿಗಳ ನಡುವೆ ಸ್ಪರ್ಧೆ ಇದ್ದರೂ ಎನ್‌ಡಿಎ ಮೈತ್ರಿಕೂಟದ ಬಳಿ ಬಹುಮತ ಇದ್ದ ಕಾರಣ ರಾಧಾಕೃಷ್ಣನ್ ಗೆಲುವು ಖಚಿತವಾಗಿತ್ತು. ರಾಧಾಕೃಷ್ಣನ್ ಪರವಾಗಿ ಒಟ್ಟು 452 ಮತಗಳು ಚಲಾವಣೆಯಾಗಿದ್ದರೆ, ಪ್ರತಿಸ್ಪರ್ಧಿ ಸುದರ್ಶನ ರೆಡ್ಡಿ ಅವರಿಗೆ 300 ಮತಗಳು ಬಂದವು.



ಮತ ಕಳವು ವಿವಾದದ ಸುತ್ತ...

• ಸುಕೃತ ಎಸ್.

'ಮತಗಳ್ಳತನ' ಮತ್ತು 'ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್)– ಇವು, ದೇಶದ ಒಟ್ಟು ರಾಜಕಾರಣದ ಸಂಕಥನವನ್ನೇ ಬದಲು ಮಾಡಿದ ಎರಡು ವಿಚಾರಗಳು.

'ಚುನಾವಣಾ ಆಯೋಗವು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಕೈಗೊಂಬೆಯಾಗಿದೆ' ಎನ್ನುವುದು ವಿರೋಧ ಪಕ್ಷಗಳ ಗಂಭೀರ ಆರೋಪ. 'ಆಯೋಗವು ಸ್ವತಂತ್ರವಾಗಿದೆ' ಎನ್ನುವುದು ಬಿಜೆಪಿಯ ಸಮರ್ಥನೆ.

ದೆಹಲಿ ವಿಧಾನಸಭೆ ಚುನಾವಣೆ ವೇಳೆ ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರು ತಾವು ಸ್ಪರ್ಧಿಸಿದ ನವದೆಹಲಿ ಕ್ಷೇತ್ರದಲ್ಲಿ ಬೇರೆ ಕ್ಷೇತ್ರದ ಮತದಾರರನ್ನು ಸೇರಿಸಲಾಗಿದೆ ಮತ್ತು ತಮ್ಮ ಕ್ಷೇತ್ರದ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಆರೋಪಿಸಿದರು. ಈ ಬಳಿಕ, ವಿರೋಧ ಪಕ್ಷದ ಒಬ್ಬೊಬ್ಬರೇ ನಾಯಕರು ಇಂಥ ಆರೋಪಗಳನ್ನು ಮಾಡಿದರು.

ಮಹಾರಾಷ್ಟ್ರ ಚುನಾವಣೆಯಲ್ಲಿ ಮತದಾರರ ಪಟ್ಟಿಯಲ್ಲಿ ಮಹಾಮೋಸ ನಡೆದಿದೆ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿ, ಪತ್ರಿಕೆಗಳಿಗೆ ಲೇಖನಗಳನ್ನೂ ಬರೆದರು. ಬಿಹಾರ ಚುನಾವಣೆಯಲ್ಲಿಯೂ ಚುನಾವಣಾ ಆಯೋಗವು ಅಕ್ರಮ ನಡೆಸಲಿದೆ; ಜೊತೆಗೆ, ಲೋಕಸಭೆ ಚುನಾವಣೆಯಲ್ಲಿ 70–100 ಸ್ಥಾನಗಳಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿದರು.

ಕಂಪ್ಯೂಟರ್ ಪರಿಶೀಲಿಸಬಹುದಾದ ಮತದಾರರ ಪಟ್ಟಿಯನ್ನು, ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿಗಳನ್ನು ನೀಡಿ ಎಂದು ಕಾಂಗ್ರೆಸ್ ಮನವಿ ಮಾಡಿತ್ತು. ಆದರೆ, ಇಂಥ ಮಾಹಿತಿಗಳನ್ನು ನೀಡುವುದರಿಂದ ಮತದಾರರ ಖಾಸಗಿತನಕ್ಕೆ ಧಕ್ಕೆಯಾಗುತ್ತದೆ ಎಂದು ಚುನಾವಣಾ ಆಯೋಗವು ಪ್ರತಿಕ್ರಿಯಿಸಿತ್ತು.

ಆದರೆ, ಮತಗಳ್ಳತನ ಸ್ವರೂಪದ ಬಗ್ಗೆ ಆಗಸ್ಟ್‌ನಿಂದ ರಾಹುಲ್ ಗಾಂಧಿ ಅವರು ಪಿಪಿಟಿ ಪ್ರೆಸೆಂಟೇಷನ್ ರೀತಿಯಲ್ಲಿ ಪತ್ರಿಕಾಗೋಷ್ಠಿಗಳನ್ನು ನಡೆಸಿದರು. ಈ ಪತ್ರಿಕಾಗೋಷ್ಠಿಗಳಲ್ಲಿ ರಾಹುಲ್ ಅವರು ಮಾಡಿದ ಎಲ್ಲ ಆರೋಪಗಳನ್ನು ಚುನಾವಣಾ ಆಯೋಗ ತಳ್ಳಿಹಾಕಿತು. 'ಆರೋಪಗಳನ್ನು ಏಳು ದಿನಗಳಲ್ಲಿ ಸಾಬೀತು ಮಾಡದೆ ಇದ್ದಲ್ಲಿ ಕ್ಷಮೆ ಕೇಳಬೇಕು' ಎಂದೂ ಆಯೋಗವು ರಾಹುಲ್ ಅವರಿಗೆ ತಾಕೀತು ಮಾಡಿತು.

ಮತಗಳ್ಳತನವನ್ನು ವಿರೋಧಿಸಿ ದೇಶದಾದ್ಯಂತ ಕಾಂಗ್ರೆಸ್ ಪ್ರತಿಭಟನೆ, ಸಹಿ ಸಂಗ್ರಹ ಅಭಿಯಾನ ಮಾಡಿತು. ಸಂಸತ್ ಅಧಿವೇಶನಗಳ ವೇಳೆಯೂ ಈ ಬಗ್ಗೆ ಚರ್ಚೆಗೆ ಅವಕಾಶ ಕೋರಲಾಯಿತು. ಆದರೆ, ಇದಕ್ಕೆ ಕೇಂದ್ರ ಸರ್ಕಾರವು ಅವಕಾಶ ಮಾಡಿಕೊಡಲಿಲ್ಲ. ವಿರೋಧ ಪಕ್ಷಗಳು ಸಂಸತ್ತಿನ ಎದುರು ಹಲವು ದಿನ ಪ್ರತಿಭಟನೆ ನಡೆಸಿದವು.



ಸದ್ದು ಮಾಡಿದ ಎಸ್‌ಐಆರ್ : ಮತಕಳವು ಬಗ್ಗೆ ಚರ್ಚೆ ನಡೆಯುತ್ತಿದ್ದಂತೆಯೇ ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸುವುದಾಗಿ ಚುನಾವಣಾ ಆಯೋಗವು ಘೋಷಿಸಿತು. ಇದು ವಿರೋಧ ಪಕ್ಷಗಳ ತೀವ್ರ ಆಕ್ರೋಶಕ್ಕೆ ಕಾರಣವಾಯಿತು. 'ನಿರ್ದಿಷ್ಟ ಮತದಾರರನ್ನು ಪಟ್ಟಿಯಿಂದ ಕೈಬಿಡುವ ತಂತ್ರವಿದು' ಎಂದು ವಿರೋಧ ಪಕ್ಷಗಳು ದೂರಿದವು.

ಈ ಬಳಿಕ, ದೇಶದಾದ್ಯಂತ ಈ ಪ್ರಕ್ರಿಯೆ ನಡೆಸಲು ಆಯೋಗ ಮುಂದಾಯಿತು. ಸದ್ಯ 9 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಯುತ್ತಿದೆ. ಅಸ್ಸಾಂನಲ್ಲಿ ಬೇರೆಯೇ ವಿಧಾನದಲ್ಲಿ ಎಸ್‌ಐಆರ್ ಅನ್ನು ಆಯೋಗ ನಡೆಸುತ್ತಿದೆ. ಇದನ್ನು ಕೂಡ ಕಾಂಗ್ರೆಸ್ ತೀವ್ರವಾಗಿ ವಿರೋಧಿಸಿದೆ.

ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರಾಗಿ ಜ್ಞಾನೇಶ್ ಕುಮಾರ್ ಅವರು ಇದೇ ವರ್ಷ ಅಧಿಕಾರ ವಹಿಸಿಕೊಂಡರು. ಮುಖ್ಯ ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡುವ ಸಮಿತಿಯಲ್ಲಿ ಪ್ರಧಾನಿ, ಲೋಕಸಭೆ ವಿಕ್ಷದ ನಾಯಕ ಹಾಗೂ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಇದ್ದರು. ಈ ನಿಯಮ ಬದಲಾಯಿಸಿರುವ ಕೇಂದ್ರ ಸರ್ಕಾರವು, ಮುಖ್ಯ ನ್ಯಾಯಮೂರ್ತಿಯನ್ನು ತೆಗೆದು, ಸಂಪುಟದ ಸಚಿವರನ್ನು ಸೇರಿಸಿದ್ದಾರೆ. ಈ ಸಮಿತಿಯೇ ಜ್ಞಾನೇಶ್ ಕುಮಾರ್ ಅವರು ಆಯ್ಕೆ ಮಾಡಿದೆ. ಆದರೆ, ಈ ಆಯ್ಕೆ ಮತ್ತು ಸಮಿತಿಯಲ್ಲಿ ಮಾಡಿದ ಬದಲಾವಣೆಯನ್ನು ರಾಹುಲ್ ಗಾಂಧಿ ಸೇರಿ ಎಲ್ಲ ವಿರೋಧ ಪಕ್ಷಗಳು ನಾಯಕರೂ ವಿರೋಧಿಸಿದ್ದಾರೆ.

ಪ್ರತಿ ವಿಧಾನಸಭೆ ಚುನಾವಣೆಯಲ್ಲಿಯೂ ರಾಜ್ಯದಲ್ಲಿ ನುಸುಳುಕೋರರು ಸೇರಿಕೊಂಡಿದ್ದಾರೆ ಎಂದು ಆರೋಪಿಸುವ ಬಿಜೆಪಿಯು ಎಸ್‌ಐಆರ್ ಪ್ರಕ್ರಿಯೆಯನ್ನು ಸಮರ್ಥಿಸಿಕೊಂಡಿದೆ. ಆದರೆ, ಮತಗಳ್ಳತನಕ್ಕೆ ಅನುವು ಮಾಡಿಕೊಡುವ ಚುನಾವಣಾ ಆಯೋಗವು ಬಿಜೆಪಿಯೊಂದಿಗೆ ಶಾಮೀಲಾಗಿದೆ, ಆ ಮೂಲಕ ಸಂವಿಧಾನವನ್ನು, ಸಾಂವಿಧಾನಿಕ ಸಂಸ್ಥೆಯನ್ನು ಹಾಳುಗೆಡವುತ್ತಿದೆ ಎನ್ನುವುದು ವಿರೋಧ ಪಕ್ಷಗಳ ಆರೋಪ. 2025ರಲ್ಲಿ ಇವೇ ವಿಚಾರಗಳು ರಾಜಕಾರಣ ಚರ್ಚೆಯ ಪ್ರಮುಖ ವಿಚಾರಗಳಾಗಿದ್ದವು.

- 2025ರ ವಕ್ಫ್ (ತಿದ್ದುಪಡಿ) ಕಾಯ್ದೆಯು ದೇಶದ ರಾಜಕಾರಣದಲ್ಲಿ ದೊಡ್ಡ ಸಂಚಲನವನ್ನು ಸೃಷ್ಟಿಸಿತು. ಕೇಂದ್ರ ಸರ್ಕಾರ ಮತ್ತು ವಿರೋಧ ಪಕ್ಷಗಳ ಮಧ್ಯೆ ದೊಡ್ಡ ಆರೋಪ ಪ್ರತ್ಯಾರೋಪ ನಡೆಯಿತು. ಪಶ್ಚಿಮ ಬಂಗಾಳ ಸೇರಿ ದೇಶದ ಹಲವು ಭಾಗಗಳಲ್ಲಿ ಹಿಂಸಾಚಾರವೂ ನಡೆಯಿತು
- ಗಣತಿಯೊಂದಿಗೆ ಜಾತಿ ಗಣತಿಯನ್ನೂ ಮಾಡುವುದಾಗಿ ಕೇಂದ್ರವು ಘೋಷಿಸಿತು
- ಲೋಕಸಭಾ ಕ್ಷೇತ್ರ ಮರುವಿಂಗಡಣೆ ಚರ್ಚೆಯು ಈ ವರ್ಷ ದೇಶದಲ್ಲಿ ನಡೆದ ದೊಡ್ಡ ಮಟ್ಟದಲ್ಲಿ ಚರ್ಚೆಗಳಲ್ಲಿ ಒಂದು. ಡಿಎಂಕೆ, ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ಈ ಪ್ರಕ್ರಿಯೆಯ ಕುರಿತು ಭಾರಿ ವಿರೋಧ ವ್ಯಕ್ತಪಡಿಸಿದವು
- ಮೊಬೈಲ್ ಕಂಪನಿಗಳು ಮತ್ತು ಮೊಬೈಲ್ ಸೆಟ್‌ಗಳನ್ನು ಆಮದು ಮಾಡಿಕೊಳ್ಳುವ ಕಂಪನಿಗಳು ಸಂಚಾರ ಸಾಥಿ ಆ್ಯಪ್ ಅನ್ನು ಅಳವಡಿಸುವುದು ಕಡ್ಡಾಯ ಮಾಡಿ ಕೇಂದ್ರ ದೂರಸಂಪರ್ಕ ಸಚಿವಾಲಯ ಆದೇಶ ಹೊರಡಿಸಿತ್ತು. ಭಾರಿ ಜನಾಕ್ರೋಶದ ಬಳಿಕ, ಈ ನಿಯಮವನ್ನು ಕೇಂದ್ರ ಸರ್ಕಾರವು ವಾಪಸು ಪಡೆಯಿತು
- ಮುಖ್ಯಮಂತ್ರಿ, ಪ್ರಧಾನಿ ಮತ್ತು ಸಚಿವರು ಯಾವುದೇ ಪ್ರಕರಣದಲ್ಲಿ ಸತತ 30 ದಿನಗಳವರೆಗೆ ಜೈಲುವಾಸ ಅನುಭವಿಸಿದರೆ, ಅಂಥವರನ್ನು ಪದಚ್ಯುತಿಗೊಳಿಸುವ ಸಂವಿಧಾನದ 130ನೇ ತಿದ್ದುಪಡಿ ಮಸೂದೆಯನ್ನು ಸಂಸತ್ತಿನಲ್ಲಿ ಕೇಂದ್ರ ಸರ್ಕಾರ ಮಂಡಿಸಿತ್ತು. ಇದು ವಿರೋಧ ಪಕ್ಷಗಳ ಮುಖ್ಯಮಂತ್ರಿಗಳನ್ನು ಕೆಳಗಿಳಿಸುವ ಕುತಂತ್ರ ಎಂದು ವಿರೋಧ ಪಕ್ಷಗಳು ತೀವ್ರವಾಗಿ ಆರೋಪಿಸಿದವು. ಬಳಿಕ, ಈ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ ನೀಡಲಾಯಿತು
- 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' ಬದಲಿಗೆ 'ವಿಕಸಿತ ಭಾರತ–ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ–ಜಿ ರಾಮ್ ಜಿ) ಮಸೂದೆ, 2025' ಅನ್ನು ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ಮಂಡಿಸಿತು. ವಿಪಕ್ಷಗಳ ವಿರೋಧಗಳ ಮಧ್ಯೆಯೂ ಎರಡೂ ಸದನಗಳಲ್ಲಿ ಇದು ಅಂಗೀಕಾರ ಪಡೆದು, ರಾಷ್ಟ್ರಪತಿ ಅಂಕಿತವನ್ನೂ ಪಡೆಯಿತು.

ಮಣಿಪುರ: ಮುಂದುವರಿದ ಸಂಘರ್ಷ, ಪ್ರಧಾನಿ ಭೇಟಿ


2023ರಲ್ಲಿ ಮಣಿಪುರದಲ್ಲಿ ಆರಂಭಗೊಂಡ ಜನಾಂಗೀಯ ಸಂಘರ್ಷವು 2025ರಲ್ಲಿಯೂ ಮುಂದುವರಿದಿದೆ. ಶಾಂತಿ ಮಾತುಕತೆ, ಸೌಹಾರ್ದವು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿಯನ್ನೂ ತಲುಪಿದೆ. ಮುಖ್ಯಮಂತ್ರಿಯಾಗಿದ್ದ ಬಿರೇನ್ ಸಿಂಗ್ ರಾಜೀನಾಮೆ ನೀಡಿದರು. ಬಳಿಕ, ಕೇಂದ್ರ ಸರ್ಕಾರವು ಇಲ್ಲಿಗೆ ರಾಷ್ಟ್ರಪತಿ ಆಳ್ವಿಕೆ ಹೇರಿತು. ಆದರೂ, ರಾಜ್ಯದಲ್ಲಿ ಸಂಘರ್ಷ ನಡೆಯುತ್ತಲೇ ಇದೆ.

ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರಕ್ಕೆ ಭೇಟಿ ನೀಡುತ್ತಿಲ್ಲ ಎಂದು ವಿರೋಧ ಪಕ್ಷಗಳು ಎರಡು ವರ್ಷಗಳಿಂದ ನಿರಂತರವಾಗಿ ಆರೋಪಿಸುತ್ತಲೇ ಇದ್ದವು. ₹7,300 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲು ಪ್ರಧಾನಿ ಮೋದಿ ಅವರು ಸಂಘರ್ಷ ಆರಂಭವಾದ ಎರಡು ವರ್ಷಗಳ ಬಳಿಕ ಸೆಪ್ಟೆಂಬರ್ 13ರಂದು ಮಣಿಪುರಕ್ಕೆ ಭೇಟಿ ನೀಡಿದರು. 13ರಿಂದ 15 ಸೆಪ್ಟೆಂಬರ್‌ನಲ್ಲಿ 5 ರಾಜ್ಯಗಳಿಗೆ ಪ್ರಧಾನಿ ಭೇಟಿ ನೀಡಿದ್ದರು.

ಅಯೋಧ್ಯೆಯ ರಾಮಮಂದಿರ ಸಂಕೀರ್ಣದ ನಿರ್ಮಾಣ ಕಾರ್ಯ ಪೂರ್ಣಗೊಂಡ ಸಂಕೇತವಾಗಿ ನವೆಂಬರ್ 25ರಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಮಮಂದಿರದಲ್ಲಿ ರಾಮಧ್ವಜದ ಆರೋಹಣ ಮಾಡಿದ್ದರು



75 ವರ್ಷಕ್ಕೆ ನಿವೃತ್ತಿ: ಹೇಳಿಕೆ ಹಿಂಪಡೆದ ಮೋಹನ್ ಭಾಗವತ್



'75 ವರ್ಷ ತುಂಬಿದ ಬಳಿಕ ನಿವೃತ್ತಿ ಹೊಂದಬೇಕು. ಆ ಮೂಲಕ ಯುವಕರಿಗೆ ಜಾಗ ಮಾಡಿಕೊಡಬೇಕು' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದರು. ಇದು ಪ್ರಧಾನಿ ಮೋದಿ ಅವರನ್ನು ಉದ್ದೇಶಿಸಿಯೇ ನೀಡಿದ ಹೇಳಿಕೆ ಎನ್ನಲಾಗಿತ್ತು. ಇದು ದೇಶದಲ್ಲಿ ದೊಡ್ಡ ಚರ್ಚೆಯನ್ನೇ ಹುಟ್ಟುಹಾಕಿತ್ತು. ಈ ರೀತಿಯ ಹೇಳಿಕೆಯನ್ನು ನೀಡಿಯೇ ಇಲ್ಲ ಎಂದು ಕೆಲವೇ ದಿನಗಳ ಬಳಿಕ ಮೋಹನ್ ಭಾಗವತ್ ಅವರು ಹೇಳಿದರು.

ಸಂವಿಧಾನದ ಪ್ರಸ್ತಾವನೆಯಿಂದ 'ಸಮಾಜವಾದಿ' ಮತ್ತು 'ಜಾತ್ಯಾತೀತ' ಎನ್ನುವ ಪದಗಳನ್ನು ತೆಗೆದು ಹಾಕಬೇಕು ಎಂದು ಆರ್‌ಎಸ್‌ಎಸ್‌ನ ಸರ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿಕೆ ನೀಡಿದ್ದರು. 'ಆರ್ಗನೈಸರ್' ಪತ್ರಿಕೆ ಕೂಡ ಇದನ್ನು ಸಮರ್ಥಿಸಿ ಲೇಖನ ಪ್ರಕಟಿಸಿತ್ತು. ಇದು ವಿವಾದದ ಸ್ವರೂಪ ಪಡೆದಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಾಂಗ್ಲಾದೇಶದ ವಿದ್ಯಾರ್ಥಿ ನಾಯಕ ಶರೀಫ್ ಉಸ್ಮಾನ್ ಹಾದಿ ಹತ್ಯೆಯಲ್ಲಿ ಭಾರತ ಭಾಗಿಯಾಗಿರುವುದನ್ನು ಅಲ್ ಜಝೀರಾ ಮಾಧ್ಯಮವು ದೃಢಪಡಿಸಿದೆ ಎಂದು ಪ್ರತಿಪಾದಿಸುತ್ತಾ ಅಲ್ ಜಝೀರಾದಲ್ಲಿ ಪ್ರಸಾರವಾಗಿದೆ ಎನ್ನಲಾದ ವಿಡಿಯೊ ತುಣುಕೊಂದನ್ನು ಪಾಕಿಸ್ತಾನ ಡಿಫೆನ್ಸ್ (@PakDef) ಎಂಬ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಲಾಗಿದೆ. ಅಲ್ ಜಝೀರಾದ ವರದಿಗಾರರೊಬ್ಬರು, 'ಈ ಹತ್ಯೆಯಲ್ಲಿ ಭಾರತ ಭಾಗಿಯಾಗಿರುವ ಬಗ್ಗೆ ಅನುಮಾನಗಳು ಹೆಚ್ಚಾಗಿವೆ. ಭಾರತದ ಪರವಾಗಿರುವ ಸಂಘಟನೆಗಳು ಇದರ ಹಿಂದಿವೆ' ಎಂದು ಹೇಳಿರುವುದು ವಿಡಿಯೊದಲ್ಲಿದೆ. ಆದರೆ, ಇದು ಸುಳ್ಳು ಸುದ್ದಿ.



ಇದರ ಮೂಲ ವಿಡಿಯೊಕ್ಕಾಗಿ ಇಂಟರ್‌ನೆಟ್‌ನಲ್ಲಿ ಹುಡುಕಾಟ ನಡೆಸಿದಾಗ ಅಲ್ ಜಝೀರಾದಲ್ಲಿ 'ಬಾಂಗ್ಲಾದೇಶದಲ್ಲಿ ಆಕ್ರೋಶ: ವಿದ್ಯಾರ್ಥಿ ನಾಯಕನ ಹತ್ಯೆಯ ನಂತರ ಹಿಂಸಾತ್ಮಕ ಪ್ರತಿಭಟನೆಗಳು' ಎಂಬ ತಲೆಬರಹದಲ್ಲಿ ಇದೇ 19ರಂದು ಪ್ರಕಟವಾದ ವರದಿ ಸಿಕ್ಕಿತು. ಇಡೀ ವರದಿಯನ್ನು ಪರಿಶೀಲಿಸಿದಾಗ, ಯುವನಾಯಕನ ಸಾವಿನಲ್ಲಿ ಭಾರತದ ಪಾತ್ರ ಇದೆ ಎಂಬುದರ ಪ್ರಸ್ತಾಪ ಎಲ್ಲೂ ಇರಲಿಲ್ಲ. ವಿಡಿಯೊವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ವಿಡಿಯೊದಲ್ಲಿ ಮಾತನಾಡುವ ವರದಿಗಾರನ ಮುಖದ ಹಾವಭಾವ ಮತ್ತು ಪದಗಳ ಉಚ್ಚಾರಣೆಯಲ್ಲಿ ವ್ಯತ್ಯಾಸವಿರುವುದು ಕಂಡು ಬಂತು. ಅನುಮಾನ ಬಂದು ವಿಡಿಯೊದಲ್ಲಿರುವ ಧ್ವನಿ ಮತ್ತು ವಿಡಿಯೊವನ್ನು ಪ್ರತ್ಯೇಕಿಸಿ ಡೀಪ್‌ಫೇಕ್–ಒ–ಮೀಟರ್ ಎಂಬ ಟೂಲ್ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ ಆಡಿಯೊ ಮತ್ತು ವಿಡಿಯೊ ಎರಡನ್ನೂ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿ ಸೃಷ್ಟಿಸಿರುವುದು ಗೊತ್ತಾಯಿತು. ಇದಕ್ಕೆ ಪೂರಕವಾಗಿ, ಬಾಂಗ್ಲಾದ ತನಿಖಾಧಿಕಾರಿಗಳು ಹಾದಿ ಹತ್ಯೆಯ ತನಿಖೆಯನ್ನು ಇನ್ನೂ ನಡೆಸುತ್ತಿವೆ. ಎಐ ತಂತ್ರಜ್ಞಾನವನ್ನು ಬಳಸಿಕೊಂಡು ವರದಿಯನ್ನು ತಿರುಚಿ ಭಾರತದ ವಿರುದ್ಧ ನಕಾರಾತ್ಮಕ ಕಥನವನ್ನು ಸೃಷ್ಟಿಸಲಾಗಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಕನ್ನಡಿಯಲ್ಲಿ ಕಂಡದ್ದು...



ನುಡಿ ಬೆಳಗು

ವಾಸುದೇವ ನಾಡಿಗ್

ಕಲಾವಿದ ಅ ಮ್ಯೂಸಿಯಂನ ಹಿಂಬದಿಯ ಬಾಗಿಲಿನ ಬೀಗ ಹಾಕುವುದನ್ನು ಮರೆತು ಓರೆ ಮಾಡಿ ಹೋಗಿದ್ದ. ಅಲ್ಲಿಂದ ನಾಯಿಯೊಂದು ಒಳಗೆ ಬಂದಿತ್ತು. ಆ ಇಡೀ ಮ್ಯೂಸಿಯಂ ಏಕವ್ಯಕ್ತಿ ಕಲಾವಿದನ ಗಾಜಿನ ಕಲಾಕೃತಿಗಳ ಅನಾವರಣವಾಗಿತ್ತು. ನಾಯಿ ಹೊಕ್ಕಿದ್ದ ಆ ಕೋಣೆಯಂತೂ ಅದ್ಭುತವಾದ ಕಲಾಕೃತಿಯೇ ಆಗಿತ್ತು. ಇಡೀ ಗೋಡೆಗಳಿಗೆ, ನೆಲಕ್ಕೆ ಕನ್ನಡಿಗಳನ್ನು ಅಂಟಿಸಲಾಗಿತ್ತು. ಮೇಲೆ ಕೆಳಗೆ ಅಕ್ಕಪಕ್ಕ ಎಲ್ಲ ಕಡೇ ಬರಿ ಕನ್ನಡಿಗಳೇ. ಎಲ್ಲಿ ನೋಡಿದರೂ ನಮ್ಮದೇ ಮುಖ ಕಾಣುವ ಹಾಗೆ ಕನ್ನಡಿಗಳು. ನಾಯಿ ಒಳಹೊಕ್ಕ ಕೂಡಲೇ ಕನ್ನಡಿಯನ್ನು ನೋಡಿ ಬೊಗಳಿತು, ಹಾರಿ ಗುದ್ದಿತ್ತು, ಹಲ್ಲು ಉಗುರು ತಾಕಿಸಿತು. ಎಲ್ಲಿ ನೋಡಿದರೂ ಕನ್ನಡಿಯ ಒಳಗೆ ತನ್ನ ಹಾಗೇ ಇರುವ ನಾಯಿಗಳನ್ನು ನೋಡಿ ಕ್ಯಾತೆ ತೆಗೆದು ಬೊಗಳಲು ಶುರು ಮಾಡಿತು. ಹತ್ತು ಹಲವು ಕನ್ನಡಿಗಳಲ್ಲಿ ಕಂಡ ತನ್ನದೇ ಮುಖಗಳನ್ನು ನಿಜವಾದ ನಾಯಿಗಳೇ ಅಂತ ಭಾವಿಸಿ ಬೊಗಳಲು ಶುರು ಮಾಡಿತು. ಬಿಂಬವೂ ಕೂಡಾ ಅದೇ ಬೊಗಳುವ ಶಬ್ದ ಮಾಡಿದ್ದರಿಂದ ಈ ನಾಯಿಗೆ ರೇಗಾಟ ಇನ್ನೂ ಹೆಚ್ಚೇ ಆಯಿತು. ಎಲ್ಲ ಕನ್ನಡಿಗಳಿಗೆ ತನ್ನನ್ನು ತಾನು ಗುದ್ದಿಕೊಂಡು ಸತ್ತೇ ಹೋಯಿತು.

ಮರುದಿನ ಆ ಕಲಾವಿದ ಒಳಗೆ ಬಂದು ನೋಡಿದಾಗ ನಿತ್ರಾಣವಾಗಿ ಬಿದ್ದು ಉಸಿರು ಚೆಲ್ಲಿದ್ದ ನಾಯಿಯನ್ನು ಕಂಡು ನೊಂದ.

ಈ ಲೋಕವೂ ಬಹುದೊಡ್ಡ ಕನ್ನಡಿಯೇ ಅನಿಸುತ್ತದೆ. ಕ್ರಿಯೆ ಮತ್ತು ಪ್ರತಿಕ್ರಿಯೆಗಳೇ ಬಾಳನ್ನು ನಿರ್ಧರಿಸಬಲ್ಲವು. 'ಅಯ್ಯಾ ಅಂದರೆ ಸ್ವರ್ಗ ಎಲವೋ ಎಂದರೆ ನರಕ' ಎಂಬ ವಚನದ ಹಾಗೆ ಲೋಕಕ್ಕೆ ಕೊಡುವ ಉತ್ತರ ಮತ್ತು ಕಾಣುವ ನೋಟದ ಮೇಲೆ ಬಾಳು ಸರಿದಾಡುತ್ತಿರುತ್ತದೆ. ಯಾವುದೇ ಗಾಯ ರಕ್ತಪಾತದ ಗುರುತಿರದೇ ಆ ನಾಯಿ ಪ್ರಾಣಬಿಟ್ಟ ಹಾಗೆ ಋಣಾತ್ಮಕ ಭಾವಗಳು ಸದ್ದಿಲ್ಲದೆ ಕೊಲ್ಲಬಲ್ಲದು. ಎದುರಿನವರು ಶಾಂತವಾಗಿ ಇದ್ದರೂ ಅದಾವುದೋ ಒತ್ತಡಕ್ಕೆ ಬಿದ್ದು ರೇಗಲು ಶುರುಮಾಡುವ ಹಾಗೆ ತಣ್ಣಗಿನ ವಾತಾವರಣವನ್ನು ರಾಡಿಗೊಳಿಸುತ್ತೇವೆ. ನಾಲ್ಕು ಬೂತ್ ಇರುವ ಪೆಟ್ರೋಲ್ ಬಂಕಿನಲ್ಲಿ ಪೆಟ್ರೋಲ್ ಹಾಕುವವನು 'ಇಲ್ಲಿ ಬನ್ನಿ' ಎಂದು ಕರೆದು ಕೀ ತೋರಿಸಿ ಅಲ್ಲಿ ಕಾರನ್ನು ನಿಲ್ಲಿಸಿದಾಗ 'ಇಲ್ಲಿ ಬೇಡ ಆ ಅಲ್ಲಿ ಹಿಂದಿನ ಬೂತಿಗೆ ಹೋಗಿ' ಎಂದು ಅವನು ಸಂಯಮದಿಂದ ಹೇಳಿದ್ದರೂ ಒದರಾಡಿ ಪೆಟ್ರೋಲ್ ಹಾಕಿಸಿಕೊಳ್ಳದೇ ಬಂದು ಬಿಡುವ ಶೀಘ್ರಕೋಪಿಗಳೂ ಇದ್ದಾರೆ. ವೃಥಾ ಗುದ್ದಾಡಿಕೊಂಡು ಸರದಿ ಸಾಲನು ಮುರಿದು ಮುನ್ನುಗ್ಗುವ ಜನರೂ ಇದ್ದಾರೆ. ಇಂತಹ ಕಡೆಗಳಲ್ಲೆಲ್ಲ ಅನಗತ್ಯವಾಗಿ ಗಾಸಿಗೊಂಡು ಬರುವವರೂ ಇದ್ದಾರೆ.

ಅದು ತಾನೇ ಸೃಷ್ಟಿಸಿದ ತನ್ನ ಪ್ರತಿಕ್ರಿಯೆಯೇ ಹುಟ್ಟುಹಾಕಿದ ಗದ್ದಲ, ಜಗಳ ಎಂದು ಅರಿಯದೇ ನಿತ್ರಾಣಗೊಂಡು ಮಲಗಿದ ನಾಯಿಯ ಪಾಡು ಹಲವರ ಮನಸ್ಸು. ತನ್ನಂತೆ ಪರ ಎಂಬ ಮಾತು ಹೀಗೆ ಅನ್ವಯ ಇಲ್ಲಿ. ಲೋಕವೇ ಬೃಹತ್ ಕನ್ನಡಿಯಾಗಿರುವಾಗ ನಕ್ಕರೆ ಅದು ನಗುತ್ತದೆ, ಅತ್ತರೆ ಅಳುತ್ತದೆ, ರೇಗಾಡಿದರೆ ರೇಗುತ್ತದೆ. ಸ್ಪಂದಿಸುವ ಸಮಯದ ಪಕ್ವತೆ ಮತ್ತು ಸ್ವೀಕರಿಸುವಾಗಿನ ಸಮಚಿತ್ತ ಲೋಕವೆಂಬ ಮಾಯಾಕನ್ನಡಿಯನ್ನು ಇನ್ನೂ ಅಂದಗೊಳಿಸಬಹುದಲ್ಲವೆ? ❖

ಗುಂಡಣ್ಣ




ಪದಬಂಧ 6263

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ತಾಯ್ನಾಡಿನ ಬಗೆಗೆ ಇರುವ ಅಭಿಮಾನ (6)
4. ನೆರವನ್ನು ಹೀಗೆನ್ನಿ (3)
5. 1938ರಲ್ಲಿ ಧ್ವಜ ಸತ್ಯಾಗ್ರಹ ಚಳುವಳಿ ನಡೆದ ಈ ಗ್ರಾಮ ಮದ್ದೂರಿನ ಸಮೀಪ ಶಿಂಷಾನದಿ ತೀರದಲ್ಲಿದೆ (4)
8. ಮಕ್ಕಳನ್ನು ಮಲಗಿಸುವಾಗ ಹಾಡುವ ಹಾಡು (2)
9. ನೃತ್ಯ ನಾಟಕಗಳ ಪೂರ್ವಸಿದ್ಧತೆ (5)
10. ಪ್ರಗತಿಯಲ್ಲಿರುವ ನಕಲು ಕಾಣುತ್ತಿದೆಯೇ? (2)
13. ಕತ್ತಿಯ ಅಲಗು (4)
14. ರಥದ ಚಕ್ರ (3)
15. ಅಂತರಂಗದ ಭಾವನೆಗಳನ್ನು ವಿಭಜಿಸಿ ನೋಡುವುದು (6)

ಮೇಲಿಂದ ಕೆಳಕ್ಕೆ
1. ಹೆಣ್ಣು ತನ್ನ ಗಂಡನನ್ನು ತಾನೇ ಆರಿಸಿಕೊಳ್ಳುವುದು (4)
2. ನರಿಯಲ್ಲಿ ಜೇನುತುಪ್ಪ ಸಿಕ್ಕೀತೇ? (3)
3. ಈತ ಗೆಲುವನ್ನು ಪಡೆದವನು (4)
6. ಯುದ್ಧಭೂಮಿಯಿದು (4)
7. ಮುಖ ಕೊನೆಗಿಟ್ಟರೆ ಕಪಿ ಕಾಣಿಸಿತಲ್ಲಾ! (4)
10. ನಡುವೆ ಕರವನ್ನಿಟ್ಟ ಘಟನೆ (4)
11. ತಿದ್ದುಪಡಿ ಯನ್ನು ಹೀಗೆ ಹೇಳಿ (4)
12. ದೇವಪೂಜ ತಂತ್ರವಿಧಾನವನ್ನು ತಿಳಿಸುವ ಶಾಸ್ತ್ರ (3)



6262ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಧನಸಹಾಯ 3.ಕೈಲಾಸ 5.ನಿರಪರಾಧಿ 8.ಅವ್ಯಯ 9.ಹೊಸಜೀವನ 12.ಅಗುಳು 13.ಜನನಾಯಕ 16.ನಿಸ್ತೇಜ 17.ಏಕೀಕರಣ

ಮೇಲಿಂದ ಕೆಳಕ್ಕೆ:
1.ಧಮನಿ 2.ಸಲ್ಲಾಪ 4.ಸಮಯ 6.ರತಿ 7.ರಾಕ್ಷಸ 8.ಅಶನ 9.ಹೊಕ್ಕುಳು 10.ವದನ 11.ಭಯ 12.ಅವನಿ 14.ನಾಸಿಕ 15.ಕಲ್ಯಾಣ

ಸುಡೊಕು 6647

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	8			5		9		
1			6		4			3
6	5			7			2	4
5		8	9					
	1					7	5	2
4		7					8	
2		5		9			3	
	6		3		5	2		7
3	7	9		6			4	5

6646 ಸುಡೊಕು

6	2	4	5	3	9	7	1	8
8	9	5	6	7	1	2	4	3
1	3	7	2	4	8	5	9	6
3	4	1	8	2	5	9	6	7
2	8	6	3	9	7	1	5	4
7	5	9	4	1	6	8	3	2
5	1	3	7	6	2	4	8	9
4	7	8	9	5	3	6	2	1
9	6	2	1	8	4	3	7	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

24 ಡಿಸೆಂಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಚತುರ್ಥಿ ಗಂ 13-12 ನಕ್ಷತ್ರ: ಶ್ರವಣ ಗಂ 7-08 ಯೋಗ: ಹರ್ಷಣ ಗಂ. 16-02 ಕರಣ: ವಿಷ್ಟಿ ಗಂ. 13-12 ಧನು ಮಾಸದ 09 ನೇ ದಿನ. ಮಳೆ ನಕ್ಷತ್ರ : ಮೂಲ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30 , ಸೂರ್ಯೋದಯ : 06-54 ಸೂರ್ಯಾಸ್ತ : 06-07, ಮುಸ್ಲಿಂ ದಿನಾಂಕ : 04 ರಜಬ್, ದಿನ ವಿಶೇಷ : ಕ್ರಿಸ್ಮಸ್ ಈವ್, ಅದೃಷ್ಟ ಸಂಖ್ಯೆ : 6, 10

ಮೇಷ: ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳ ಜತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಚೈತನ್ಯವು ಮೂಡಿಬರಲಿದೆ. ವ್ಯವಹಾರದಲ್ಲಿ ಕೊಂಚ ಹಿನ್ನಡೆ ಉಂಟಾಗುವ ಲಕ್ಷಣ ತೋರುವುದು.

ವೃಷಭ: ಮುಂದಾಲೋಚನೆಯಿಂದ ಬಹುಸಮಯದಿಂದ ಉಳಿದಿದ್ದ ಕೆಲಸಗಳು ಕಾರ್ಯಗತಗೊಳ್ಳಲಿವೆ. ಎಲೆಕ್ಟ್ರಿಕಲ್ ಕಂಟ್ರಾಕ್ಟ್ ಮಾಡುವವರಿಗೆ ಉತ್ತಮ ಉದ್ಯೋಗ ದೊರೆತು ಸಂತೋಷ.

ಮಿಥುನ: ಮನೆಯವರ ಆರೋಗ್ಯದಲ್ಲಿ ಹೊಟ್ಟೆಗೆ ಸಂಬಂಧಿಸಿದಂತೆ ವ್ಯತ್ಯಾಸಗಳು ಕಂಡುಬಂದಲ್ಲಿ ವೈದ್ಯರನ್ನು ಭೇಟಿಮಾಡಿ ತಪಾಸಣೆ ಮಾಡಿಸಿಕೊಳ್ಳಿ. ಸುದ್ದಿಗೋಷ್ಠಿಗಳಲ್ಲಿ ಭಾಗವಹಿಸುವ ಅವಕಾಶ ಸಿಗುವುದು.

ಕರ್ಕಾಟಕ: ಜೀವನದಲ್ಲಿ ಬಯಸಿದ ನೆಲೆಯನ್ನು ಗಟ್ಟಿಗೊಳ್ಳಿಸಿಕೊಂಡ ಸಂತೃಪ್ತಿ ತುಂಬಿರುತ್ತದೆ. ಎಂಜಿನಿಯರಿಂಗ್ ವಿದ್ಯಾರ್ಥಿಗಳು ಓದಿನ ಬಗ್ಗೆ ಗಮನ ವಹಿಸಿ. ಯಾರಿಗೂ ಜಾಮೀನುದಾರರಾಗುವುದು ಸರಿಯಲ್ಲ.

ಸಿಂಹ: ನಿರೀಕ್ಷಿಸಿದ ಉದ್ಯಮದಲ್ಲಿ ಅಲ್ಲದೆ ಬೇರೆ ಕಡೆ ಅವಕಾಶ ದೊರೆಯಲಿದೆ. ಕೆಲಸವನ್ನು ಗುತ್ತಿಗೆ ನೀಡುವ ಆಲೋಚನೆಯು ಸಮಸ್ಯೆಗೆ ದಾರಿಯಾಗುವುದು. ನಿಸ್ವಾರ್ಥ ಸೇವೆಯಿಂದ ಗೌರವಾನ್ವಿತ ಸ್ಥಾನಮಾನಗಳು ಲಭಿಸುತ್ತವೆ.

ಕನ್ಯಾ: ಉತ್ತಮ ಗುಣಗಳು ಪರಿಸ್ಥಿತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಸಹಾಯ ಮಾಡುವುದು. ಮೇಲಧಿಕಾರಿಗಳಿಗೆ ಜವಾಬ್ದಾರಿಯುತ ನಡೆಯಿಂದಾಗಿ ನಂಬಿಕೆ ಹೆಚ್ಚಾಗಲಿದೆ.

ತುಲಾ: ಕಾರ್ಯಕ್ಷೇತ್ರದಲ್ಲಿ ನೀತಿ-ನಿಯಮಗಳಿಗೆ ಬದ್ಧರಾದಲ್ಲಿ ಆಡಳಿತ ವರ್ಗದ ಸಹಾಯ ಹಸ್ತ ಅನುಭವಕ್ಕೆ ಬರಲಿದೆ. ಮನೆಯಲ್ಲಿ ಶಾಂತ ವಾತಾವರಣವಿದ್ದು, ಮನಸ್ಸಿಗೆ ತುಸು ನೆಮ್ಮದಿ ಬರುವುದು. ಅನುಕೂಲವಿದೆ.

ವೃಶ್ಚಿಕ: ಏನನ್ನಾದರೂ ಸಾಧಿಸಲೇಬೇಕೆಂದಿರುವ ಆತ್ಮವಿಶ್ವಾಸದ ಕೊರತೆ ಕಾಣಿಸದು. ಸ್ವಪ್ರಯತ್ನದಿಂದ ಕೆಲಸಗಳನ್ನು ಸಾಧಿಸಿದಲ್ಲಿ ಆರ್ಥಿಕ ಬೆಳವಣಿಗೆ ಉಂಟಾಗುವುದು. ಹೊಸ ಉದ್ಯೋಗದಲ್ಲಿ ಸ್ವಾತಂತ್ರ್ಯವಿರುವುದು.


ಧನು: ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಅಥವಾ ಉದ್ಯೋಗ ಅನ್ವೇಷಣೆಯಲ್ಲಿ ಅನುಕೂಲ ತೋರಿಬರುವುದು. ಕೆಲಸಗಳನ್ನು ಸಾಧಿಸಿಕೊಳ್ಳಲೇ ಬೇಕಿದ್ದರೆ ಅವಿರತ ಶ್ರಮ ಅಗತ್ಯ. ನಿಮ್ಮ ಈ ಶ್ರಮವು ಸಾರ್ಥಕವೆನಿಸುವುದು.

ಮಕರ: ದೈವಾನುಗ್ರಹ ನಿಮ್ಮ ಪಾಲಿಗೆ ಸಂಪೂರ್ಣವಿದ್ದು ತೊಂದರೆಗಳನ್ನು ನಿವಾರಿಸಿ ವೃತ್ತಿರಂಗದಲ್ಲಿ ಉತ್ತಮ ರೀತಿಯಲ್ಲಿ ಮುಂದುವರಿಯಿರಿ. ವೃತ್ತಿ ಮತ್ತು ಪ್ರವೃತ್ತಿಗಳಲ್ಲಿ ಸಮತೋಲನ ಕಾಯ್ದುಕೊಳ್ಳಿ.

ಕುಂಭ: ಮಾತುಗಾರಿಕೆಯ ಅಭ್ಯಾಸದಿಂದ ಇತರರನ್ನು ಗೆಲ್ಲುವ ಸಾಮರ್ಥ್ಯವಿದೆ. ದೀನರ ಸೇವೆಯಿಂದ ಅದೃಷ್ಟ ಇಮ್ಮಡಿಗೊಳ್ಳಲಿದೆ. ವ್ಯಾವಹಾರಿಕ ಪ್ರಯಾಣದಿಂದ ಆದಾಯದಲ್ಲಿ ಕೊಂಚ ವೃದ್ಧಿ ಕಂಡುಬರಲಿದೆ.

ಮೀನ: ವೃತ್ತಿಯಲ್ಲಿ ಸಾಕಷ್ಟು ಪೈಪೋಟಿ ಎದುರಿಸಬೇಕಾದರೂ ಪ್ರಯತ್ನದಿಂದ ಜಯವನ್ನು ಹೊಂದುವಿರಿ. ಮಕ್ಕಳ ಶೈಕ್ಷಣಿಕ ವಿಚಾರದಲ್ಲಿ ಮುತುವರ್ಜಿಯನ್ನು ತೋರಿಸಿ. ಕಾರ್ಖಾನೆ ಕೆಲಸಗಾರರ ಬೇಡಿಕೆಗಳು ಇತ್ಯರ್ಥವಾಗಲಿವೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	26,172
ಇಂದಿನ ಅಂತ್ಯ:	26,177
ದಿನದ ಗರಿಷ್ಠ:	26,233
	4

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು		
	100 ಕ್ಕೆ	₹705
	12 ಕ್ಕೆ	₹96
ಮೈಸೂರು:	100 ಕ್ಕೆ	₹706

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹179.50
ಆರ್‌ಎಸ್‌ಎಸ್-5	₹174.50
ಗುಡ್ ಲಾಟ್	₹162.50

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹488-780
ದ್ವಿತಳಿ (ಬಿ.ವಿ)	₹361-912

ಮುದ್ರೆಮನೆ ಕಾಫಿ	
ಎಪಿ	₹26600
ಎಸಿ	₹14840
ಆರ್‌ಪಿ	₹16500
ಆರ್‌ಸಿ	₹9350

ಇ–ವಾಣಿಜ್ಯ ವೇದಿಕೆಗಳಿಂದಲೂ ಮಾಹಿತಿ

ಹಣದುಬ್ಬರ ಸೂಚ್ಯಂಕವನ್ನು ಇನ್ನಷ್ಟು ನಿಖರ, ವಿಶ್ವಾಸಾರ್ಹ ಆಗಿಸಲು ಕ್ರಮ



ಮುಖ್ಯಾಂಶಗಳು

- ಆಯ್ದ ನಗರಗಳಲ್ಲಿನ ಇ–ವಾಣಿಜ್ಯ ವೇದಿಕೆಗಳಿಂದ ಮಾಹಿತಿ ಸಂಗ್ರಹ
- ಈಗಿನ ವ್ಯವಸ್ಥೆಯಲ್ಲಿ ಭೌತಿಕ ಮಾರುಕಟ್ಟೆಗಳಿಂದ ಮಾತ್ರ ಮಾಹಿತಿ

ನವದೆಹಲಿ (ಪಿಟಿಐ): ಹಣದುಬ್ಬರದ ಪ್ರಮಾಣವನ್ನು ಲೆಕ್ಕಹಾಕುವಾಗ ಇ-ವಾಣಿಜ್ಯ ವೇದಿಕೆಗಳಲ್ಲಿ ವಿವಿಧ ಉತ್ಪನ್ನಗಳಿಗೆ ನಿಗದಿ ಮಾಡಿರುವ ಬೆಲೆ, ವಿವಿಧ ಆನ್‌ಲೈನ್ ವೇದಿಕೆಗಳಲ್ಲಿ ನಮೂದಾಗಿರುವ ಬೆಲೆಯನ್ನು ಕೂಡ ಪರಿಗಣಿಸಲು ಕೇಂದ್ರ ಸರ್ಕಾರ ಆಲೋಚನೆ ನಡೆಸುತ್ತಿದೆ.

ಹೀಗೆ ಮಾಡುವುದರಿಂದ ಹಣದುಬ್ಬರ ಲೆಕ್ಕಹಾಕಲು ಆಶ್ರಯಿಸುವ ಗ್ರಾಹಕ ಬೆಲೆ ಸೂಚ್ಯಂಕದ (ಸಿಪಿಐ) ವಿಶ್ವಾಸಾರ್ಹತೆಯು ಸುಧಾರಿಸುತ್ತದೆ ಎಂಬುದು ಸರ್ಕಾರದ ನಿರೀಕ್ಷೆ.

ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯವು ಸಿಪಿಐ, ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ) ಮತ್ತು ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಮೂಲ ವರ್ಷವನ್ನು ಪರಿಷ್ಕರಿಸುವ ಪ್ರಕ್ರಿಯೆ ಕೈಗೆತ್ತಿಕೊಂಡಿದೆ.

ಸಚಿವಾಲಯವು ಮಂಗಳವಾರ ಸಮಾಲೋಚನಾ ಕಾರ್ಯಾಗಾರವೊಂದನ್ನು ಆಯೋಜಿಸಿತ್ತು.

ಈಗಿರುವ ವ್ಯವಸ್ಥೆಯ ಅಡಿಯಲ್ಲಿ ಭೌತಿಕ ಮಳಿಗೆಗಳಿಂದ ಬೆಲೆಯ ವಿವರ ಸಂಗ್ರಹಿಸಲಾಗುತ್ತಿದೆ. ಹೊಸ ವ್ಯವಸ್ಥೆಯ ಅಡಿಯಲ್ಲಿ ಇದರ ಜೊತೆಯಲ್ಲೇ, ಇ-ವಾಣಿಜ್ಯ ವೇದಿಕೆಗಳಿಂದಲೂ ವಿವಿಧ ಉತ್ಪನ್ನಗಳ ಬೆಲೆಯ ವಿವರ ಪಡೆಯಲಾಗುತ್ತದೆ. 25 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ 12 ಆಯ್ದ ನಗರಗಳಲ್ಲಿನ ಇ-ಕಾಮರ್ಸ್ ವೇದಿಕೆಗಳಿಂದ ಬೆಲೆ ವಿವರ ಸಂಗ್ರಹಿಸಲಾಗುತ್ತದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

ಈ ಮಾಹಿತಿಯನ್ನು ಪಡೆಯುವುದರಿಂದ ಸಿಪಿಐ ಸೂಚ್ಯಂಕವು ಹೆಚ್ಚು ಪ್ರಾತಿನಿಧಿಕವಾಗುತ್ತದೆ, ಅದು ಹೆಚ್ಚು ವಿಶ್ವಾಸಾರ್ಹವಾಗುತ್ತದೆ, ಅದರ ದತ್ತಾಂಶವು ಇನ್ನಷ್ಟು ನಿಖರವಾಗುತ್ತದೆ ಎಂದು ಸಚಿವಾಲಯ ಹೇಳಿದೆ.

ಸಚಿವಾಲಯವು ಇನ್ನಷ್ಟು ಸಂಖ್ಯೆಯ ಗ್ರಾಮೀಣ ಹಾಗೂ ನಗರ ಮಾರುಕಟ್ಟೆಗಳಿಂದ ವಿವರ ಸಂಗ್ರಹಿಸಲು ಮುಂದಾಗಿದೆ.

ಕಾರ್ಯಾಗಾರದಲ್ಲಿ ಮಾತನಾಡಿದ ಸಚಿವಾಲಯದ ಕಾರ್ಯದರ್ಶಿ ಸೌರಭ್ ಗರ್ಗ್ ಅವರು, ಫೆಬ್ರುವರಿಯಲ್ಲಿ ಹೊಸ ದತ್ತಾಂಶ ಸರಣಿಯನ್ನು ಬಿಡುಗಡೆ ಮಾಡಿದ ನಂತರದಲ್ಲಿಯೂ ಜಿಡಿಪಿ ಸಂಬಂಧಿತ ಅಂಕಿ-ಅಂಶಗಳಲ್ಲಿ ಹೆಚ್ಚಿನ ಬದಲಾವಣೆಯೇನೂ ಆಗಲಿಕ್ಕಿಲ್ಲ ಎಂದು ಹೇಳಿದ್ದಾರೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು 1,181 ಗ್ರಾಮೀಣ ಮಾರುಕಟ್ಟೆಗಳಿಂದ ಹಾಗೂ 1,114 ನಗರ ಮಾರುಕಟ್ಟೆಗಳಿಂದ ಮಾಹಿತಿ ಸಂಗ್ರಹಿಸಿ ಸಿಪಿಐ ಸೂಚ್ಯಂಕದ ಮಟ್ಟವನ್ನು ನಿರ್ಧರಿಸುತ್ತದೆ. ಸಿಪಿಐ ಆಧಾರಿತ ಚಿಲ್ಲರೆ ಹಣದುಬ್ಬರದ ಪ್ರಮಾಣ ಆಧರಿಸಿ ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ರೆಪೊ ದರ ಎಷ್ಟಿರಬೇಕು ಎಂಬುದನ್ನು ತೀರ್ಮಾನಿಸುತ್ತದೆ.

ಸಿಪಿಐ ದತ್ತಾಂಶದ ಹೊಸ ಸರಣಿಯನ್ನು ಕೇಂದ್ರವು 2026ರ ಫೆಬ್ರುವರಿ 12ರಂದು ಬಿಡುಗಡೆ ಮಾಡುವ ನಿರೀಕ್ಷೆ ಇದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಾಗೇಶ್ ಕುಮಾರ್, ಬೆಂಗಳೂರು

- **ಪ್ರಶ್ನೆ: 'ನನ್ನಲ್ಲಿ ಸುಮಾರು ₹50 ಲಕ್ಷ ಹೂಡಿಕೆಗೆ ಹಣವಿದೆ. ನಾನು ನಿವೃತ್ತನಾಗಿದ್ದು, ಈ ಮೊತ್ತ ನನ್ನ ನಿವೃತ್ತಿಯ ಸಮಯದಲ್ಲಿ ಸಿಕ್ಕಿದ್ದಾಗಿದೆ. ನಾನು ಪ್ರತಿ ತಿಂಗಳೂ ಇದರಿಂದ ನಿಗದಿತ ಆದಾಯ ಬಯಸುತ್ತೇನೆ. ನನ್ನ ವಯಸ್ಸು ಸುಮಾರು 61 ವರ್ಷ, ಯಾವುದೇ ಪಿಂಚಣಿ ಇಲ್ಲ. ನನಗೆ ಮನೆ ಮಂದಿಯ ಯಾವುದೇ ಆರ್ಥಿಕ ಜವಾಬ್ದಾರಿಗಳಿಲ್ಲ. ನನಗೆ ಸಲಹೆ ನೀಡಿ.**

ಉತ್ತರ: ನೀವು ನಿವೃತ್ತರಾಗಿರುವುದರಿಂದ ಹಾಗೂ ಪಿಂಚಣಿ ಸೌಲಭ್ಯ ಇಲ್ಲದಿರುವುದರಿಂದ ನಿಮಗೆ ಮಾಸಿಕ ಆದಾಯದ ಅಗತ್ಯವಿರುತ್ತದೆ. ಇಂತಹ ಸಂದರ್ಭದಲ್ಲಿ ನಿಶ್ಚಿತ ಆದಾಯ ನಿರೀಕ್ಷಿಸಿ ಹೂಡಿಕೆ ಮಾಡುವಾಗ, ನಮ್ಮಲ್ಲಿ ಅದಕ್ಕಾಗಿಯೇ ಮೀಸಲಿಟ್ಟ ಒಂದಿಷ್ಟು ಹಣ ಇರಬೇಕು. ಇದು ಆರ್ಥಿಕ ಸಮತೋಲನ ಕಾಪಾಡಿಕೊಳ್ಳುವ ದೃಷ್ಟಿಯಿಂದ ಪರಿಗಣಿಸಬೇಕಾದ ಬಹಳ ಮುಖ್ಯ ಅಂಶ. ನಿಮ್ಮ ವೈಯಕ್ತಿಕ ಬದುಕಿನ ಆರ್ಥಿಕ ಬೇಡಿಕೆಗಳ ಪೂರೈಕೆಗೆ ಈ ಕೆಳಗಿನ ಅಂಶಗಳನ್ನು ಪರಿಗಣಿಸಿ ನಿಗದಿತ ಆದಾಯ ನೀಡುವ ಹೂಡಿಕೆಗಳಲ್ಲಿ ಹಣ ತೊಡಗಿಸಿ.

- ನೀವು ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡುವುದಿದ್ದರೆ ವಿವಿಧ ಬ್ಯಾಂಕ್‌ಗಳನ್ನು ಆರಿಸಿಕೊಳ್ಳಿ ಮತ್ತು ಹೂಡಿಕೆಯನ್ನು ಒಂದೇ ಉತ್ಪನ್ನದಲ್ಲಿ ಇಡುವುದನ್ನು ತಪ್ಪಿಸಿ. ಪ್ರತಿ ಬ್ಯಾಂಕ್‌ನಲ್ಲಿ ಈ ಮೊತ್ತ ₹5 ಲಕ್ಷ ಮೀರದಿರಲಿ. ನಿಮ್ಮ ಹೆಚ್ಚುವರಿ ಮೊತ್ತವನ್ನು, ಹೆಚ್ಚುವರಿ ಬಡ್ಡಿ ನೀಡುವ ಯೋಜನೆಗಳಲ್ಲಿ ಹೂಡಿಕೆ ಮಾಡಿ.
- ಅಂಚೆ ಇಲಾಖೆಯ ಹಿರಿಯ ನಾಗರಿಕರ ಉಳಿತಾಯ ಖಾತೆಗಳಲ್ಲಿ ವ್ಯಕ್ತಿಯೊಬ್ಬನ ಇಂತಹ ಎಲ್ಲಾ ಖಾತೆಗಳ ಒಟ್ಟು ಮೊತ್ತ ₹30 ಲಕ್ಷ ಮೀರದಂತೆ ಹೂಡಿಕೆ ಮಾಡಬಹುದು. ಈ ಹೂಡಿಕೆ ಸುಮಾರು ಶೇ 8.2ರಷ್ಟು ಬಡ್ಡಿ ನೀಡುತ್ತಿದ್ದು, ಮೂರು ತಿಂಗಳಿಗೊಮ್ಮೆ ಬಡ್ಡಿ ಮೊತ್ತ ಸಿಗುತ್ತದೆ. ಹೂಡಿಕೆದಾರರಿಗೆ ನಿಯಮಿತ ಆದಾಯ ಒದಗಿಸುತ್ತದೆ. ಐದು ವರ್ಷದ ಅವಧಿಯ ಈ ಖಾತೆಯಿಂದ ಹೂಡಿಕೆದಾರರು ಯಾವುದೇ ಸಮಯದಲ್ಲಿ ಹಣ ಹಿಂಪಡೆಯಬಹುದು. ಆದರೆ ಒಂದು ವರ್ಷದೊಳಗೆ ಮುಚ್ಚಿದರೆ ಬಡ್ಡಿ ನೀಡಲಾಗುವುದಿಲ್ಲ ಮತ್ತು ನೀಡಿದ ಬಡ್ಡಿಯನ್ನು ವಾಪಸ್ ಪಡೆಯಲಾಗುತ್ತದೆ. 1-2 ವರ್ಷಗಳಲ್ಲಿ ಮುಚ್ಚಿದರೆ ಠೇವಣಿಯ ಶೇ 1.5ರಷ್ಟು ಕಡಿತ ಹಾಗೂ 2 ವರ್ಷಗಳ ನಂತರ ಶೇ 1ರಷ್ಟು ಕಡಿತ ಇರುತ್ತದೆ. ವಿಸ್ತರಣೆ ಬಳಿಕ 1 ವರ್ಷದೊಳಗೆ ಮುಚ್ಚಿದರೆ ಶೇ 1ರಷ್ಟು ಕಡಿತ ಅನ್ವಯಿಸುತ್ತದೆ.
- ತಿಂಗಳ ಆದಾಯದ ಗಳಿಕೆಗಾಗಿ ಅಂಚೆ ಇಲಾಖೆಯ ಮಾಸಿಕ ಆದಾಯ ಯೋಜನೆಯಲ್ಲಿ ನೀವು ₹9 ಲಕ್ಷದ ತನಕ ಹೂಡಿಕೆ ಮಾಡಬಹುದು. ಇದಕ್ಕೆ ಶೇ 7.4ರಷ್ಟು ಬಡ್ಡಿ ಸಿಗುತ್ತದೆ. ಇದು ಐದು ವರ್ಷಗಳ ಅವಧಿಯ ಹೂಡಿಕೆಯಾಗಿರುತ್ತದೆ. ಮೊದಲ ಮೂರು ವರ್ಷಗಳ ಅವಧಿಯಲ್ಲಿ ಖಾತೆಯಲ್ಲಿರುವ ಹಣ ಹಿಂಪಡೆದರೆ ಶೇ 2ರ ದಂಡ ಹಾಗೂ ನಂತರ ಪೂರ್ಣಾವಧಿ ಪೂರೈಸುವುದರೊಳಗೆ ಖಾತೆ ಮುಚ್ಚಿದರೆ ಶೇ 1ರ ದಂಡ ಇರುತ್ತದೆ.

ಈ ವಿಚಾರಗಳನ್ನು ಪರಿಗಣಿಸಿ ನಿಮ್ಮ ಹೂಡಿಕೆಯ ಮೊತ್ತವನ್ನು ನಿರ್ಧರಿಸಿ. ನೀವು ವಾರ್ಷಿಕವಾಗಿ ₹4 ಲಕ್ಷದ ತನಕ ಆದಾಯ ಗಳಿಸಬಹುದು.

ರಾಜು ಎಂ.ಆರ್., ರಾಜಾಜಿನಗರ, ಬೆಂಗಳೂರು

- **ಪ್ರಶ್ನೆ: ನನ್ನ ಮಗ ಸರ್ಕಾರಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾನೆ. ಕಂಪನಿಯ ನೌಕರರ ಹಿತದೃಷ್ಟಿಯಿಂದ ಕುಟುಂಬದ ಸದಸ್ಯರ ವೈದ್ಯಕೀಯ ವೆಚ್ಚವನ್ನು ಭರಿಸುವ ಸೌಲಭ್ಯ ಅಲ್ಲಿ ಇದೆ. ಆತನ ತಾಯಿಯ ಆರೋಗ್ಯ ಹದಗೆಟ್ಟಿದ್ದು ನರದೌರ್ಬಲ್ಯ ಕಾಯಿಲೆಯಿಂದ ಬಳಲುತ್ತಿದ್ದಾಳೆ. ಇದರ ಚಿಕಿತ್ಸೆಗೆ ಬಹಳಷ್ಟು ಹಣ ವೆಚ್ಚ ಮಾಡಿದ್ದೇವೆ. ಕಂಪನಿಯವರು ಬಿಲ್ ಆಧಾರದ ಮೇಲೆ ಹಣವನ್ನು ಆತನಿಗೆ ನೀಡುವವರಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಇದಕ್ಕೆ ತೆರಿಗೆ ಅನ್ವಯಿಸುತ್ತದೆಯೇ?**

ಉತ್ತರ: ನಿಮ್ಮ ಮಗ ಸರ್ಕಾರಿ ಕಂಪನಿಯಲ್ಲಿ ಉದ್ಯೋಗದಲ್ಲಿದ್ದು, ಕಂಪನಿಯು ನೌಕರರ ಕಲ್ಯಾಣಕ್ಕಾಗಿ ವೈದ್ಯಕೀಯ ವೆಚ್ಚ ಭರಿಸುವ ಸೌಲಭ್ಯ ನೀಡುತ್ತಿದೆ ಎಂದು ತಿಳಿಸಿರುತ್ತೀರಿ. ಆತನ ತಾಯಿ ನರದೌರ್ಬಲ್ಯ ಕಾಯಿಲೆಯಿಂದ ಬಳಲುತ್ತಿದ್ದು, ಅದಕ್ಕಾಗಿ ಆಗಿರುವ ವೈದ್ಯಕೀಯ ವೆಚ್ಚವನ್ನು ಬಿಲ್ ಆಧಾರದ ಮೇಲೆ ಕಂಪನಿಯವರು ಮರುಪಾವತಿ ಮಾಡುತ್ತಿರುವುದಾಗಿ ತಿಳಿಸಿರುವಿರಿ. ಆದಾಯ ತೆರಿಗೆ ಕಾಯ್ದೆ-1961ರ ಸೆಕ್ಷನ್ 17(2)ರ ಅಡಿ 'ಪರ್ಕ್ವಿಸಿಟ್' ಎಂಬ ಪರಿಕಲ್ಪನೆಯ ಅಡಿ ವೈದ್ಯಕೀಯ ಸೌಲಭ್ಯಗಳನ್ನೂ ಸೇರಿಸಲಾಗಿದೆ. ಇದರಲ್ಲಿ, ಕೆಲವು ವಿಶೇಷ ವೈದ್ಯಕೀಯ ಚಿಕಿತ್ಸೆಗಳಿಗಾಗಿ ನೀಡುವ ಸೌಲಭ್ಯಗಳಿಗೆ ತೆರಿಗೆಯಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ.

ಆದಾಯ ತೆರಿಗೆ ಕಾನೂನಿನ ನಿಯಮ 3ಎ ಅಡಿ ನಿರೂಪಿಸಿರುವ ಕಾಯಿಲೆಗಳ ಪಟ್ಟಿಯಲ್ಲಿ ನರ ಸಂಬಂಧಿತ ಕಾಯಿಲೆಗಳೂ ಒಳಗೊಂಡಿವೆ. ಇಂತಹ ಕಾಯಿಲೆಗಳಿಗೆ ಸರ್ಕಾರಿ ಆಸ್ಪತ್ರೆ ಅಥವಾ ಆದಾಯ ತೆರಿಗೆಯ ಮುಖ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಲ್ಲಿ, ಆ ಚಿಕಿತ್ಸೆಗೆ ಕಂಪನಿಯೇ ನೇರವಾಗಿ ಮಾಡಿದ ವೈದ್ಯಕೀಯ ವೆಚ್ಚ ಅಥವಾ ಬಿಲ್‌ಗಳ ಮರುಪಾವತಿಯನ್ನು 'ಪರ್ಕ್ವಿಸಿಟ್' ಎಂದು ಪರಿಗಣಿಸಲಾಗುವುದಿಲ್ಲ. ಅಂದರೆ, ಅಂತಹ ಮೊತ್ತವನ್ನು ನೌಕರನ ತೆರಿಗೆ ಆದಾಯದಲ್ಲಿ ಸೇರಿಸುವ ಅಗತ್ಯವಿಲ್ಲ.

ಆದರೆ ಈ ತೆರಿಗೆ ವಿನಾಯಿತಿಗೆ ಕೆಲವು ಷರತ್ತುಗಳಿವೆ. ಚಿಕಿತ್ಸೆ ಪಡೆದ ಆಸ್ಪತ್ರೆಯ ವಿಶೇಷ ವೈದ್ಯರಿಂದ ನೀಡಲಾದ ಪ್ರಮಾಣಪತ್ರ ಇರಬೇಕು; ಅದರಲ್ಲಿ ಕಾಯಿಲೆಯ ಸ್ವರೂಪ, ರೋಗಿಯ ವಿವರಗಳು ಸ್ಪಷ್ಟವಾಗಿರಬೇಕು. ಈ ದಾಖಲೆಗಳ ಆಧಾರದ ಮೇಲೆ ಕಂಪನಿಯವರು ಮರುಪಾವತಿ ಮಾಡಿದರೆ, ಅದು ಸಂಪೂರ್ಣ ತೆರಿಗೆ ವಿನಾಯಿತಿಯ ವೈದ್ಯಕೀಯ ಸೌಲಭ್ಯವಾಗುತ್ತದೆ. ಹೀಗಾಗಿ, ನಿಮ್ಮ ಮಗನಿಗೆ ಕಂಪನಿಯಿಂದ ದೊರಕುವ ಈ ವೈದ್ಯಕೀಯ ವೆಚ್ಚ ಮರುಪಾವತಿಯು ಮೇಲ್ಕಂಡ ಕಾನೂನು ಷರತ್ತುಗಳನ್ನು ಪೂರೈಸಿದರೆ, ಅಂತಹ ಮೊತ್ತ ಆದಾಯ ತೆರಿಗೆಗೆ ಒಳಪಡುವುದಿಲ್ಲ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1400-2800
ಮಧ್ಯಮ	₹1000-1400
ಸಣ್ಣ	₹200-1000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1570 (1570)
ಸೋಯಾ (ರಿಫೈನ್ಡ್)	₹1270 (1270)
ಸೂರ್ಯಕಾಂತಿ (ರಿಫೈನ್ಡ್)	₹1485 (1485)
ಪಾಮೋಲಿನ್	₹1245 (1245)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹27000-27000
ದಾವಣಗೆರೆ	₹11800-11800
ಪುತ್ತೂರು	₹5000-22500

ಮುಂಬೈ ಧಾರಣೆ (ಶೇಂಗಾ) 23-12-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1580 (1580)
ಒಂದು ವಾರದ ಡೆಲಿವರಿ	1575 (1575)
ಪಾಮ್ ವಾರದ ಡೆಲಿವರಿ	1243 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1420 (1420)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,35,600 (1,33,800)
ಬೆಳ್ಳಿ ಕೆ.ಜಿಗೆ	2,12,200 (2,07,800)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

5 ವರ್ಷದಲ್ಲಿ ಐದು ಇ.ವಿ: ಟಾಟಾ



ನವದೆಹಲಿ (ಪಿಟಿಐ): '2029-30ರ ಮೊದಲು ಐದು ಹೊಸ ವಿದ್ಯುತ್ ಚಾಲಿತ ವಾಹನಗಳನ್ನು (ಇ.ವಿ) ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು' ಎಂದು ಟಾಟಾ ಮೋಟರ್ಸ್ ಪ್ಯಾಸೆಂಜರ್ ವೆಹಿಕಲ್ಸ್ (ಟಿಎಂಪಿವಿ) ಮಂಗಳವಾರ ತಿಳಿಸಿದೆ.

2029-30ರೊಳಗೆ ₹16 ಸಾವಿರ ಕೋಟಿಯಿಂದ ₹18 ಸಾವಿರ ಕೋಟಿಯಷ್ಟು ಮೊತ್ತವನ್ನು ವಿದ್ಯುತ್ ಚಾಲಿತ ವಾಹನಗಳ ವ್ಯವಹಾರದಲ್ಲಿ ಹೂಡಿಕೆ ಮಾಡಲಾಗುವುದು. ಈ ಹೂಡಿಕೆಯು ದೇಶದಲ್ಲಿ ಚಾರ್ಜಿಂಗ್ ಕೇಂದ್ರಗಳನ್ನು 10 ಲಕ್ಷಕ್ಕೆ ಹೆಚ್ಚಿಸುವುದಕ್ಕೂ ಬಳಕೆಯಾಗಲಿದೆ ಎಂದು ತಿಳಿಸಿದೆ.

ಮುಂದಿನ ವರ್ಷದಲ್ಲಿ ಕಂಪನಿಯು ಸಿಯಾರಾ. ಇವಿ ಮತ್ತು ಹೊಸ ಪಂಚ್.ಇ.ವಿ ಮತ್ತು ವರ್ಷದ ಅಂತ್ಯದ ವೇಳೆಗೆ ಬಹುನಿರೀಕ್ಷಿತ ಅವಿನ್ಯಾ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದೆ.

ಇಲ್ಲಿಯವರೆಗೆ ಟಾಟಾ ಮೋಟರ್ಸ್ 2.5 ಲಕ್ಷ ವಿದ್ಯುತ್ ಚಾಲಿತ ವಾಹನಗಳನ್ನು ಮಾರಾಟ ಮಾಡಿದೆ. ದೇಶದಲ್ಲಿ ಮಾರಾಟವಾಗುವ ವಿದ್ಯುತ್ ಚಾಲಿತ ಪ್ರಯಾಣಿಕ ವಾಹನಗಳ ಪೈಕಿ ಶೇ 66 ರಷ್ಟು ಪಾಲನ್ನು ಟಿಎಂಪಿವಿ ಹೊಂದಿದೆ.

'ವಿದ್ಯುತ್ ಚಾಲಿತ ವಾಹನಗಳ ಬಳಕೆಯನ್ನು ಹೆಚ್ಚಿಸಲು, ಎಲ್ಲ ವಿಭಾಗಗಳಲ್ಲಿ ವಿದ್ಯುತ್ ಚಾಲಿತ ವಾಹನಗಳನ್ನು ಲಭ್ಯವಾಗುವಂತೆ ಮಾಡಲಾಗುವುದು' ಎಂದು ಟಿಎಂಪಿವಿ ಎಂ.ಡಿ ಮತ್ತು ಸಿಇಒ ಶೈಲೇಶ್ ಚಂದ್ರ ಹೇಳಿದ್ದಾರೆ.

ಅಡಿಕೆ ಧಾರಣೆ

ಮಾರುಕಟ್ಟೆ	ವಿಧ	ಧಾರಣೆ
ಚಿತ್ರದುರ್ಗ	ಆಪಿ	53600-54000
	ಬೆಟ್ಟೆ	36600-37000
	ಕೆಂಪುಗೋಟು	30600-31000
	ರಾಶಿ	53100-53500
ಪುತ್ತೂರು	ಕೋಕ	20000-35000
	ಹೊಸತು	26000-41500
	ಹಳತು	40000-53500
ಸಾಗರ	ಬಿಳಿಗೋಟು	8909-8909
	ರಾಶಿ	54409-54409
	ಸಿಪ್ಪೆಗೋಟು	22599-23596
	ಕೋಕ	9309-9309
ಸಿದ್ದಾಪುರ	ಬಿಳಿಗೋಟು	26109-36809
	ಚಾಲಿ	42089-47500
	ಕೋಕ	21689-33099
	ಹೊಸಚಾಲಿ	33989-45899
	ಕೆಂಪುಗೋಟು	31619-34099
	ರಾಶಿ	46699-54500
	ತಟ್ಟೆಬೆಟ್ಟೆ	33700-48099
ಶಿರಸಿ	ಬೆಟ್ಟೆ	37899-52609
	ಬಿಳಿಗೋಟು	23199-39299
	ಚಾಲಿ	40099-48672
	ಕೆಂಪುಗೋಟು	24699-35219
	ರಾಶಿ	48061-58106
ಯಲ್ಲಾಪುರ	ಆಪಿ	59930-70021
	ಬಿಳಿಗೋಟು	16899-36199
	ಕೋಕ	14909-27212
	ಹಳೆಚಾಲಿ	37209-48201
	ಹೊಸಚಾಲಿ	34099-37151
	ಕೆಂಪುಗೋಟು	16786-37969
	ರಾಶಿ	51199-63519
	ತಟ್ಟೆಬೆಟ್ಟೆ	38800-50989

10 ಗ್ರಾಂ ಚಿನ್ನ ದರ ₹1.40 ಲಕ್ಷ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆ ಆಗಿದೆ.



10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹2,650ರಷ್ಟು ಹೆಚ್ಚಳವಾಗಿ, ₹1,40,850ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹2,750ರಷ್ಟು ಏರಿಕೆಯಾಗಿ, ₹2,17,250ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಕಳೆದ ಡಿಸೆಂಬರ್ 31ರಂದು 10 ಗ್ರಾಂ ಚಿನ್ನದ ದರವು ₹78,950 ಇತ್ತು. ಇದುವರೆಗೆ ₹61,900 ಏರಿಕೆ (ಶೇ 78.40ರಷ್ಟು) ಆಗಿದೆ. ಕೆ.ಜಿ ಬೆಳ್ಳಿ ದರವು 2024ರ ಡಿಸೆಂಬರ್ 31ರಂದು ₹89,700 ಇತ್ತು. ಇದುವರೆಗೆ ₹1,27,550 ಹೆಚ್ಚಳ (ಶೇ 142) ಆಗಿದೆ.

'ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತ ಮಾಡುವ ನಿರೀಕ್ಷೆ, ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ರಾಜಕೀಯ ಬಿಕ್ಕಟ್ಟಿನಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನ ಮತ್ತು ಬೆಳ್ಳಿ ಕಡೆ ಮುಖ ಮಾಡಿದ್ದಾರೆ. ಇದೇ ಬೆಲೆ ಏರಿಕೆಗೆ ಕಾರಣ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಕೇಂದ್ರದ ಕ್ರಮ ಖಂಡಿಸಿ ಮುಷ್ಕರಕ್ಕೆ ಕರೆ

ನವದೆಹಲಿ (ಪಿಟಿಐ): ಕಾರ್ಮಿಕರು, ಅಣುಶಕ್ತಿ ವಲಯ ಮತ್ತು ಗ್ರಾಮೀಣ ಉದ್ಯೋಗ ಖಾತರಿಗೆ ಸಂಬಂಧಿಸಿದ ಕಾನೂನುಗಳನ್ನು ಬದಲಾಯಿಸಲು ಮುಂದಾಗಿರುವ ಕೇಂದ್ರ ಸರ್ಕಾರದ ಕ್ರಮ ವಿರೋಧಿಸಿ ಫೆಬ್ರುವರಿಯಲ್ಲಿ ರಾಷ್ಟ್ರದಾದ್ಯಂತ ಮುಷ್ಕರ ನಡೆಸಲು ಕಾರ್ಮಿಕ ಸಂಘಟನೆಗಳು ನಿರ್ಧರಿಸಿವೆ.

ಕಾರ್ಮಿಕ ಸಂಹಿತೆಗಳನ್ನು ವಿರೋಧಿಸಿ, ಕೇಂದ್ರ ಸರ್ಕಾರವು ಜನರ ಹಕ್ಕುಗಳ ಮೇಲೆ ನಡೆಸುತ್ತಿರುವ ಆಕ್ರಮಣವನ್ನು ವಿರೋಧಿಸಿ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯು ಫೆಬ್ರುವರಿ 12ರಂದು ಸಾಮೂಹಿಕ ಮುಷ್ಕರಕ್ಕೆ ಕರೆ ನೀಡಲು ತೀರ್ಮಾನಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಡೆಲ್ಲಿ ಕ್ಯಾಪಿಟಲ್ಸ್‌ಗೆ ಜೆಮಿಮಾ ನಾಯಕಿ



ಜೆಮಿಮಾ ರಾಡ್ರಿಗಸ್

ನವದೆಹಲಿ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ತಾರಾ ಬ್ಯಾಟರ್ ಜೆಮಿಮಾ ರಾಡ್ರಿಗಸ್ ಅವರು ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ನಲ್ಲಿ ಆಡುವ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕಿಯಾಗಿ ನೇಮಕಗೊಂಡಿದ್ದಾರೆ.

ಜೆಮಿಮಾ ಅವರು 2026ರ ಆವೃತ್ತಿಯಲ್ಲಿ ಡೆಲ್ಲಿ ತಂಡವನ್ನು ಮುನ್ನಡೆಸಲಿದ್ದಾರೆ ಎಂದು ಫ್ರಾಂಚೈಸಿಯು ಮಂಗಳವಾರ ಘೋಷಿಸಿದೆ.

'ಡೆಲ್ಲಿ ತಂಡದ ನಾಯಕಿಯಾಗಿ ನೇಮಕವಾಗಿರುವುದು ಗೌರವದ ವಿಷಯ. ನನ್ನ ಮೇಲೆ ವಿಶ್ವಾಸವಿಟ್ಟು, ತಂಡವನ್ನು ಮುನ್ನಡೆಸುವ ಜವಾಬ್ದಾರಿ ನೀಡಿದ ಫ್ರಾಂಚೈಸಿಯ ಮಾಲೀಕರು ಹಾಗೂ ಕೋಚ್ ಸಿಬ್ಬಂದಿಗೆ ಆಭಾರಿಯಾಗಿರುವೆ' ಎಂದು 25 ವರ್ಷ ವಯಸ್ಸಿನ ಜೆಮಿಮಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಬ್ಲ್ಯುಪಿಎಲ್ ಮೊದಲ ಆವೃತ್ತಿಯಿಂದ (2023) ಈವರೆಗೆ ನಾಯಕಿಯಾಗಿದ್ದ ಆಸ್ಟ್ರೇಲಿಯಾದ ದಿಗ್ಗಜ ಆಟಗಾರ್ತಿ ಮೆಗ್ ಲ್ಯಾನಿಂಗ್ ಅವರನ್ನು ನವೆಂಬರ್‌ನಲ್ಲಿ ನಡೆದ ಬಿಡ್‌ಗೆ ಮೊದಲು ತಂಡದಿಂದ ಕೈಬಿಡಲಾಗಿತ್ತು.

ಜೆಮಿಮಾ ಅವರು ನವೆಂಬರ್‌ನಲ್ಲಿ ನಡೆದ ಐಸಿಸಿ ಮಹಿಳಾ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಅಜೇಯ ಶತಕ ಬಾರಿಸಿ, ಭಾರತದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು.

ಭಾರತಕ್ಕೆ ನಿರಾಯಾಸ ಜಯ

ಲಂಕಾ ವಿರುದ್ಧ 2ನೇ ಟಿ20: ಶ್ರೀಚರಣಿ, ವೈಷ್ಣವಿ ಸ್ಪಿನ್ ಮೋಡಿ • ಶಫಾಲಿ ಅಬ್ಬರ



ವಿಶಾಖಪಟ್ಟಣಂ (ಪಿಟಿಐ): ಸ್ಪಿನ್ ತ್ರಿವಳಿಗಳ ಮೋಡಿ ಮತ್ತು ಶಫಾಲಿ ವರ್ಮಾ ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ ಭಾರತ ಮಹಿಳೆಯರ ತಂಡವು ಶ್ರೀಲಂಕಾ ಎದುರಿನ ಟಿ20 ಕ್ರಿಕೆಟ್ ಪಂದ್ಯದಲ್ಲಿ ಸುಲಭ ಜಯ ಸಾಧಿಸಿತು.

ಎಸಿಎ-ವಿಡಿಸಿಎ ಕ್ರಿಕೆಟ್ ಮೈದಾನದಲ್ಲಿ ಮಂಗಳವಾರ ನಡೆದ ಎರಡನೇ ಪಂದ್ಯದಲ್ಲಿ ಭಾರತ ತಂಡವು 7 ವಿಕೆಟ್‌ಗಳಿಂದ ಜಯಿಸಿತು. ಐದು ಪಂದ್ಯಗಳ ಸರಣಿಯಲ್ಲಿ 2-0 ಮುನ್ನಡೆ ಪಡೆಯಿತು.

ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಶ್ರೀಚರಣಿ (23ಕ್ಕೆ2), ವೈಷ್ಣವಿ ಶರ್ಮಾ (32ಕ್ಕೆ2) ಹಾಗೂ ಸ್ನೇಹ ರಾಣಾ (11ಕ್ಕೆ1) ಅವರ ದಾಳಿಯ ಮುಂದೆ ಲಂಕಾ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 128 ರನ್ ಗಳಿಸಿತು. ತಂಡದ ಹರ್ಷಿತಾ ಸಮರವಿಕ್ರಮ (33 ರನ್) ಮತ್ತು ನಾಯಕಿ ಚಾಮರಿ ಅಟಪಟ್ಟು (31 ರನ್) ಅವರ ಆಟದಿಂದಾಗಿ ತಂಡವು ಮೂರಂಕಿ ಮೊತ್ತ ದಾಟಲು ಸಾಧ್ಯವಾಯಿತು.

ಈ ಸಾಧಾರಣ ಗುರಿ ಬೆನ್ನಟ್ಟಿದ ಭಾರತ ತಂಡವು ಕೇವಲ 11.5 ಓವರ್‌ಗಳಲ್ಲಿ ಗೆಲುವು ಸಾಧಿಸಿತು. ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ (ಅಜೇಯ 69; 34ಎ, 4X11, 6X1) ಅವರು 202ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

ಈಚೆಗೆ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮಿಂಚಿದ್ದ ಶಫಾಲಿ ಇಲ್ಲಿ ಎಲ್ಲ ಬೌಲರ್‌ಗಳನ್ನೂ ದಂಡಿಸಿದರು. ಅವರೊಂದಿಗೆ ಇನಿಂಗ್ಸ್ ಆರಂಭಿಸಿದ ಸ್ಮೃತಿ ಮಂದಾನ (14; 11ಎ) ಒಂದು ಬೌಂಡರಿ, ಒಂದು ಸಿಕ್ಸರ್ ಹೊಡೆದು ಭರವಸೆ ಮೂಡಿಸಿದರು. ಆದರೆ ನಾಲ್ಕನೇ ಓವರ್‌ನಲ್ಲಿ ಕವಿಶಾ ದಿಲ್ಹರಿ ಎಸೆತದಲ್ಲಿ ಸ್ಮೃತಿ ಅವರು ಕವಿನಿದಿ ಅವರಿಗೆ ಕ್ಯಾಚಿತ್ತರು. ಆದರೆ ಶಫಾಲಿ ಆಟಕ್ಕೆ ಕಡಿವಾಣ ಹಾಕಲು ಯಾವುದೇ ಬೌಲರ್‌ಗೂ ಸಾಧ್ಯವಾಗಲಿಲ್ಲ. ಜೆಮಿಮಾ 26 ರನ್ ಗಳಿಸಿ ಔಟಾದರು. ನಾಯಕಿ ಹರ್ಮನ್‌ಪ್ರೀತ್ ಕೌರ್ 10 ರನ್ ಕಾಣಿಕೆ ನೀಡಿದರು.

ಶಫಾಲಿ ಅವರಿಗೆ ಪಂದ್ಯದ ಆಟಗಾರ್ತಿ ಪ್ರಶಸ್ತಿ ನೀಡಲಾಯಿತು. ಟಿ20 ಕ್ರಿಕೆಟ್‌ನಲ್ಲಿ ಅವರು ಈ ಗೌರವಕ್ಕೆ ಪಾತ್ರರಾಗುತ್ತಿರುವುದು 8ನೇ ಬಾರಿ. ಅತಿ ಹೆಚ್ಚು ಪಂದ್ಯ ಆಟಗಾರ್ತಿ ಪ್ರಶಸ್ತಿ ಪಡೆದ ಭಾರತೀಯ ಆಟಗಾರ್ತಿಯರ ಪಟ್ಟಿಯಲ್ಲಿ 3ನೇ ಸ್ಥಾನ ಪಡೆದರು.

ಮಿಥಾಲಿ ರಾಜ್ (12) ಮತ್ತು ಹರ್ಮನ್ ಪ್ರೀತ್ ಕೌರ್ (11) ಅವರು ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನದಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರ್‌ಗಳಲ್ಲಿ 9ಕ್ಕೆ128 (ಚಾಮರಿ ಅಟಪಟ್ಟು 31, ಹಸಿನಿ ಪೆರೇರಾ 22, ಹರ್ಷಿತಾ ಸಮರವಿಕ್ರಮ 33, ವೈಷ್ಣವಿ ಶರ್ಮಾ 32ಕ್ಕೆ2, ಶ್ರೀ ಚರಣಿ 23ಕ್ಕೆ2) ಭಾರತ: 11.5 ಓವರ್‌ಗಳಲ್ಲಿ 3ಕ್ಕೆ129 (ಶಫಾಲಿ ವರ್ಮಾ ಔಟಾಗದೆ 69, ಜೆಮಿಮಾ ರಾಡ್ರಿಗಸ್ 26, ಕವಿಶಾ ದಿಲ್ಹರಿ 15ಕ್ಕೆ1, ಮಾಲ್ಕಿ ಮದಾರಾ 22ಕ್ಕೆ1, ಕಾವ್ಯಾ ಕವಿಂದಿ 32ಕ್ಕೆ1) ಫಲಿತಾಂಶ: ಭಾರತ ತಂಡಕ್ಕೆ 7 ವಿಕೆಟ್‌ಗಳ ಜಯ. ಸರಣಿಯಲ್ಲಿ 2-0 ಮುನ್ನಡೆ.

123

ಭಾರತ ತಂಡದ ಆಲ್‌ರೌಂಡರ್ ದೀಪ್ತಿ ಶರ್ಮಾ ಅವರು 2022ರ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಬಳಿಕ ನಡೆದ 123 ಪಂದ್ಯಗಳಲ್ಲಿ (ಮೂರೂ ಮಾದರಿ ಸೇರಿ) ಆಡುವ 11ರಲ್ಲಿ ನಿರಂತರವಾಗಿ ಸ್ಥಾನ ಪಡೆದಿದ್ದರು. ಆದರೆ, ಅನಾರೋಗ್ಯದಿಂದಾಗಿ ಅವರು ಈ ಪಂದ್ಯಕ್ಕೆ ಅಲಭ್ಯರಾದರು

ಸೈಕ್ಲಿಂಗ್: ಶ್ರೀನಿವಾಸಗೆ ಸ್ವರ್ಣ, ಛಾಯಾಗೆ ರಜತ

ಪ್ರಜಾವಾಣಿ ವಾರ್ತೆ



ಶ್ರೀನಿವಾಸ




ಛಾಯಾ

ಬೆಂಗಳೂರು: ಕರ್ನಾಟಕದ ಶ್ರೀನಿವಾಸ ರಜಪೂತ ಹಾಗೂ ಛಾಯಾ ನಾಗಶೆಟ್ಟಿ ಅವರು ಉತ್ತರಾಖಂಡದ ರುದ್ರಾಪುರದಲ್ಲಿ ಸೋಮವಾರ ಮುಕ್ತಾಯಗೊಂಡ 77ನೇ ಹಿರಿಯರ, 54ನೇ ಕಿರಿಯರ ಮತ್ತು 40ನೇ ಅತಿ ಕಿರಿಯರ ರಾಷ್ಟ್ರೀಯ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಪದಕ ಜಯಿಸಿದರು.

ವಿಜಯಪುರದ ಸರ್ಕಾರಿ ಸೈಕ್ಲಿಂಗ್ ಕ್ರೀಡಾ ನಿಲಯದ ಅಥ್ಲೀಟ್ ಶ್ರೀನಿವಾಸ ಅವರು 18 ವರ್ಷದೊಳಗಿನ ಬಾಲಕರ ವಿಭಾಗದ 20 ಕಿ.ಮೀ. ಪಾಯಿಂಟ್ ರೇಸ್‌ನಲ್ಲಿ 48 ಅಂಕಗಳನ್ನು ಪಡೆದುಕೊಂಡು ಅಗ್ರಸ್ಥಾನಿಯಾದರು. ವಿಜಯಪುರದ ಮತ್ತೊಬ್ಬ ಅಥ್ಲೀಟ್ ಛಾಯಾ ಅವರು 18 ವರ್ಷದೊಳಗಿನ ಬಾಲಕಿಯರ ವಿಭಾಗದ 16 ಕಿ.ಮೀ. ಪಾಯಿಂಟ್ ರೇಸ್ ಸ್ಪರ್ಧೆಯಲ್ಲಿ 15 ಅಂಕಗಳನ್ನು ಪಡೆದುಕೊಂಡರು. ಅದರೊಂದಿಗೆ ಕಂಚಿನ ಪದಕವನ್ನು ಕೊರಳಿಗೇರಿಸಿಕೊಂಡರು.

ಆ್ಯಷಸ್: ಕಮಿನ್ಸ್, ಲಯನ್ ಅಲಭ್ಯ



ಪ್ಯಾಟ್ ಕಮಿನ್ಸ್



ಲಯನ್

ಮೆಲ್ಬರ್ನ್ (ಎಎಫ್‌ಪಿ): ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಮತ್ತು ನೇಥನ್ ಲಯನ್ ಅವರು ಆ್ಯಷಸ್ ಸರಣಿಯ ಉಳಿದ ಎರಡು ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ಮಂಡಿರಜ್ಜು ನೋವಿನಿಂದ ಬಳಲುತ್ತಿರುವ ಲಯನ್ ಅವರು ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದಾರೆ.

ನಾಲ್ಕನೇ ಟೆಸ್ಟ್‌ಗೆ ಮಂಗಳವಾರ ತಂಡವನ್ನು ಪ್ರಕಟಿಸಲಾಯಿತು. ವೇಗದ ಬೌಲರ್ ಜೇ ರಿಚರ್ಡ್ಸನ್ ಮತ್ತು ಸ್ಪಿನ್ನರ್ ಟಾಡ್ ಮರ್ಫಿ ಅವರನ್ನು ಕಮಿನ್ಸ್ ಮತ್ತು ಲಯನ್ ಸ್ಥಾನಕ್ಕೆ ಸೇರ್ಪಡೆ ಮಾಡಲಾಗಿದೆ. ಆಸ್ಟ್ರೇಲಿಯಾ, ಇಂಗ್ಲೆಂಡ್ ವಿರುದ್ಧ ಐದು ಪಂದ್ಯಗಳ ಸರಣಿಯಲ್ಲಿ 3-0 ಮುನ್ನಡೆ ಪಡೆದಿದೆ. ನಾಲ್ಕನೇ ಟೆಸ್ಟ್ ಶುಕ್ರವಾರ ಮೆಲ್ಬರ್ನ್‌ನಲ್ಲಿ ಆರಂಭವಾಗಲಿದೆ.

'ಕಮಿನ್ಸ್ ಅವರು ಸರಣಿಯ ಉಳಿದ ಪಂದ್ಯಗಳಲ್ಲಿ ಆಡುವುದಿಲ್ಲ' ಎಂದು ಕೋಚ್ ಆ್ಯಂಡ್ರೂ ಮೆಕ್‌ಡೊನಾಲ್ಡ್ ಕ್ರಿಕೆಟ್.ಕಾಮ್.ಎಯು.ಗೆ ತಿಳಿಸಿದ್ದಾರೆ. ಬೆನ್ನುನೋವಿಗೆ ಒಳಗಾದ ನಂತರ ಅವರು ಜುಲೈನಿಂದ ಆಡಿರಲಿಲ್ಲ. ನಾಲ್ಕನೇ ಟೆಸ್ಟ್ ಪಂದ್ಯಕ್ಕೆ ಪುನರಾಗಮನ ಮಾಡಿದ್ದರು. ಆರು ವಿಕೆಟ್‌ಗಳನ್ನೂ ಪಡೆದಿದ್ದರು.

ನಾಯಕತ್ವವನ್ನು ಸ್ಟೀವ್ ಸ್ಮಿತ್ ಅವರಿಗೆ ಮರಳಿ ವಹಿಸಲಾಗಿದೆ. ವರ್ಟಿಗೊ ಲಕ್ಷಣಗಳು ಕಾಣಿಸಿಕೊಂಡ ಕಾರಣ ಸ್ಮಿತ್ ನಾಲ್ಕನೇ ಟೆಸ್ಟ್ ಆಡಿರಲಿಲ್ಲ.

ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ಈ ಸರಣಿಯಲ್ಲಿ ಇದುವರೆಗೆ 22 ವಿಕೆಟ್‌ಗಳನ್ನು (17.04 ಸರಾಸರಿ) ಪಡೆದಿದ್ದಾರೆ. ಕೆಳಕ್ರಮಾಂಕದಲ್ಲಿ ಆಡಿ 150 ರನ್ ಸಹ ಗಳಿಸಿದ್ದಾರೆ.

ಅಗ್ರಸ್ಥಾನಕ್ಕೆ ದೀಪ್ತಿ ಶರ್ಮಾ

ದುಬೈ (ಪಿಟಿಐ): ಭಾರತ ತಂಡದ ಪ್ರಮುಖ ಆಲ್‌ರೌಂಡರ್ ದೀಪ್ತಿ ಶರ್ಮಾ ಅವರು ಮಂಗಳವಾರ ಪ್ರಕಟವಾದ ಐಸಿಸಿ ಮಹಿಳಾ ಟಿ20 ರ‍್ಯಾಂಕಿಂಗ್‌ನಲ್ಲಿ ಬೌಲರ್‌ಗಳ ವಿಭಾಗದಲ್ಲಿ ಅಗ್ರಸ್ಥಾನಕ್ಕೇರಿದರು.

28 ವರ್ಷ ವಯಸ್ಸಿನ ದೀಪ್ತಿ, ಶ್ರೀಲಂಕಾ ವಿರುದ್ಧ ಮೊದಲ ಟಿ20 ಪಂದ್ಯದಲ್ಲಿ 20 ರನ್ನಿಗೆ 1 ವಿಕೆಟ್ ಪಡೆದಿದ್ದರು. ಭಾರತದ ಆಫ್‌ಸ್ಪಿನ್ನರ್ ಆ ಮೂಲಕ ಒಟ್ಟು 737 ಅಂಕ ಗಳಿಸಿ ಆಸ್ಟ್ರೇಲಿಯಾದ ವೇಗಿ ಅನ್ನಾಬೆಲ್ ಸದರ್‌ಲ್ಯಾಂಡ್ ಅವರನ್ನು ಹಿಂದೆಹಾಕಿದರು.

ಮಧ್ಯಮ ವೇಗಿ ಅರುಂಧತಿ ರೆಡ್ಡಿ ಐದು ಸ್ಥಾನ ಬಡ್ತಿ ಪಡೆದು 36ನೇ ಸ್ಥಾನಕ್ಕೇರಿದರೆ, ಸ್ಪಿನ್ನರ್ ಶ್ರೀ ಚರಣಿ 19 ಸ್ಥಾನಗಳಷ್ಟು ಮೇಲೇರಿ 69ನೇ ಸ್ಥಾನದಲ್ಲಿದ್ದಾರೆ.

ಮೊದಲ ಪಂದ್ಯದಲ್ಲಿ ಅಜೇಯ 69 ರನ್ ಗಳಿಸಿ ಪಂದ್ಯದ ಆಟಗಾರ್ತಿಯಾದ ಜೆಮಿಮಾ ರಾಡ್ರಿಗಸ್ ಅವರು ಬ್ಯಾಟರ್‌ಗಳ ವಿಭಾಗದಲ್ಲಿ ಐದು ಸ್ಥಾನ ಬಡ್ತಿ ಪಡೆದು ಒಂಬತ್ತನೇ ಸ್ಥಾನಕ್ಕೇರಿದ್ದಾರೆ. ತಂಡದ ಉಪನಾಯಕಿ ಸ್ಮೃತಿ ಮಂದಾನ ಮೂರನೇ ಸ್ಥಾನದಲ್ಲಿದ್ದಾರೆ. ಶಫಾಲಿ ವರ್ಮಾ ಒಂದು ಸ್ಥಾನ ಕೆಳಗಿಳಿದು 10ನೇ ಸ್ಥಾನದಲ್ಲಿದ್ದಾರೆ. ದಕ್ಷಿಣ ಆಫ್ರಿಕಾ ತಂಡದ ನಾಯಕಿ ಲಾರಾ ವೋಲ್ವಾರ್ಟ್ ಅವರು ಏಕದಿನ ಪಂದ್ಯಗಳ ಬ್ಯಾಟರ್‌ಗಳ ವಿಭಾಗದಲ್ಲಿ ಸ್ಮೃತಿ ಮಂದಾನ ಅವರನ್ನು ಹಿಂದೆಹಾಕಿ ಅಗ್ರಸ್ಥಾನಕ್ಕೇರಿದ್ದಾರೆ.

ನೀರಜ್–ಮೋದಿ ಭೇಟಿ

ಪಿಟಿಐ ಚಿತ್ರ



ಒಲಿಂಪಿಕ್ ಪದಕ ವಿಜೇತ ಜಾವೆಲಿನ್ ತಾರೆ ನೀರಜ್ ಚೋಪ್ರಾ ಅವರು ಪತ್ನಿ, ಮಾಜಿ ಟೆನಿಸ್ ಆಟಗಾರ್ತಿ ಹಿಮಾನಿ ಮೋರ್ ಅವರೊಡನೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ನವದೆಹಲಿಯ ಅವರ ಅಧಿಕೃತ ನಿವಾಸದಲ್ಲಿ ಮಂಗಳವಾರ ಭೇಟಿಯಾದರು. 'ನಾವು ಕ್ರೀಡೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಸಂವಾದ ನಡೆಸಿದೆವು' ಎಂದು ಮೋದಿ ಎಕ್ಸ್‌ನಲ್ಲಿ ಬರೆದಿದ್ದಾರೆ.

ಮಾರ್ಕ್ ಭಾಗವಾದ ಖುಷಿಯಲ್ಲಿ ಅರ್ಚನಾ

• ಅಭಿಲಾಷ್ ಪಿ.ಎಸ್.

ನಟಿ ಅರ್ಚನಾ ಕೊಟ್ಟಿಗೆ ಚಂದನವನದಲ್ಲಿ ಹಲವು ಅವಕಾಶಗಳನ್ನು ಬಾಚಿಕೊಳ್ಳುತ್ತಿರುವ ಬೆಡಗಿ. ಸಾಲು ಸಾಲು ಸಿನಿಮಾಗಳಲ್ಲಿ ಪುಟ್ಟ ಪಾತ್ರಗಳಾದರೂ ಪ್ರೇಕ್ಷಕರು ಮೆಚ್ಚಿಕೊಳ್ಳುವಂಥ ಪಾತ್ರಗಳನ್ನು ಅವರು ಆಯ್ಕೆ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಇದಕ್ಕೆ ಹೊಸ ಸೇರ್ಪಡೆ 'ಮಾರ್ಕ್'. ಸಿನಿಮಾ ಡಿ.25ರಂದು ತೆರೆಕಾಣುತ್ತಿದ್ದು ಅರ್ಚನಾ ಈ ಗಳಿಗೆಗೆ ಕಾಯುತ್ತಿದ್ದಾರೆ.

2018ರಲ್ಲಿ ಚಂದನವನಕ್ಕೆ ಹೆಜ್ಜೆ ಇಟ್ಟ ಅರ್ಚನಾ 'ವಾಸು ನಾನ್ ಪಕ್ಕಾ ಕಮರ್ಷಿಯಲ್', 'ಮೇಡ್ ಇನ್ ಬೆಂಗಳೂರು', 'ಡಿಯರ್ ಸತ್ಯ', 'ಕಟಿಂಗ್ ಶಾಪ್', 'ಹೊಂದಿಸಿ ಬರೆಯಿರಿ', 'ವಿಜಯಾನಂದ', 'ಫಾರೆಸ್ಟ್' ಮುಂತಾದವುಗಳಲ್ಲಿ ನಟಿಸಿದ್ದಾರೆ. ಯುವ ರಾಜ್‌ಕುಮಾರ್ ನಟನೆಯ 'ಎಕ್ಕ' ಸಿನಿಮಾದಲ್ಲಿನ ಅವರ ಪಾತ್ರ ಪರಿಣಾಮಕಾರಿಯಾಗಿ ತೆರೆಗೆ ಬಂದಿತ್ತು. ಇನ್ನಷ್ಟೇ ಬಿಡುಗಡೆಯಾಗಬೇಕಿರುವ ರಾಜ್ ಬಿ.ಶೆಟ್ಟಿ ನಟನೆಯ 'ರಕ್ಕಸಪುರದೋಳ್'ನಲ್ಲೂ ಬಣ್ಣಹಚ್ಚಿದ್ದಾರೆ.

ತೆರೆ ಹಂಚಿಕೊಂಡ ಖುಷಿ

'ಸುದೀಪ್ ಅವರ ಜೊತೆ ತೆರೆ ಹಂಚಿಕೊಳ್ಳುವ ಖುಷಿಯಿಂದಲೇ 'ಮಾರ್ಕ್' ಸಿನಿಮಾ ಒಪ್ಪಿಕೊಂಡೆ. ಸುದೀಪ್ ಅವರ ಮ್ಯಾನೇಜರ್ ಕಡೆಯಿಂದಲೇ ಈ ಪಾತ್ರಕ್ಕೆ ಕರೆ ಬಂದಿತ್ತು. ಒಂದೊಳ್ಳೆಯ ಪಾತ್ರ ಈ ಸಿನಿಮಾದಲ್ಲಿ ದೊರಕಿದೆ. ಸುದೀಪ್ ಅವರು ನಿರ್ವಹಿಸುತ್ತಿರುವ 'ಅಜಯ್ ಮಾರ್ಕಂಡೆ' ಎಂಬ ಪೊಲೀಸ್ ಅಧಿಕಾರಿಯ ತಂಡದಲ್ಲಿರುವ ಓರ್ವ ಮಹಿಳಾ ಅಧಿಕಾರಿಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ. ಇದನ್ನೊಂದು ಪಾತ್ರವಾಗಿ ನಾನು ಒಪ್ಪಿಕೊಳ್ಳದೆ, ನುರಿತ ಕಲಾವಿದರಿಂದ ನಟನೆಯ ಪಾಠ ಕಲಿಯುವ ಅವಕಾಶ ಸಿಕ್ಕಿತೆಂದು ಒಪ್ಪಿಕೊಂಡೆ. ನಾನು ಈಗೀಗಷ್ಟೇ ಸಣ್ಣಪುಟ್ಟ ಸಿನಿಮಾ ಮಾಡಿದ್ದೇನೆ. ನನ್ನ ಪಾತ್ರ ಎಷ್ಟು ಪರಿಣಾಮಕಾರಿಯಾಗಿ ಮೂಡಿಬಂದಿದೆ ಎನ್ನುವುದನ್ನು ಪ್ರೇಕ್ಷಕರೇ ಹೇಳಬೇಕು. ನಾನೊಂದು ದೊಡ್ಡ ಪ್ರಾಜೆಕ್ಟ್‌ನ ಭಾಗವಾಗುತ್ತಿದ್ದೇನೆ ಎನ್ನುವ ದೃಷ್ಟಿಯಲ್ಲಿ ನನ್ನ ಆಲೋಚನೆಯಿತ್ತು' ಎನ್ನುತ್ತಾರೆ ಅರ್ಚನಾ.

'ಪ್ರತಿಯೊಂದು ದೃಶ್ಯದ ಚಿತ್ರೀಕರಣದ ಸಂದರ್ಭದಲ್ಲೂ ಕಾಫಿ ಹೀರುತ್ತಾ ನಮ್ಮ ಜೊತೆ ಸುದೀಪ್ ಅವರು ಮಾತನಾಡುತ್ತಿದ್ದರು. ಜೊತೆಗೆ ಕ್ಯಾಮೆರಾ ಏಕೆ ಇಲ್ಲಿದೆ? ಆ ಭಾಗದಿಂದ ಶೂಟ್ ಆಗಬೇಕಲ್ಲವೇ ಎಂದು ತಂತ್ರಜ್ಞರನ್ನು ಕೇಳುತ್ತಿದ್ದರು. ನಮ್ಮ ಸಂಭಾಷಣೆಯನ್ನು ಮತ್ತಷ್ಟು ಚುರುಕುಗೊಳಿಸಲು ಸಲಹೆಗಳನ್ನೂ ನೀಡುತ್ತಿರುತ್ತಾರೆ. ಹೀಗೆ ಪ್ರತಿಕ್ಷಣವೂ ಇಡೀ ತಂಡದ ಜೊತೆಗೆ ಸಕ್ರಿಯವಾಗಿ ಅವರು ತೊಡಗಿಸಿಕೊಳ್ಳುತ್ತಿದ್ದರು. ಅವರ ಈ ಗುಣವನ್ನು ಹಿಂದೆ ಕೇವಲ ಕೇಳಿದ್ದೆವು, ಇದೀಗ ಸ್ವತಃ ಕಣ್ಣಾರೆ ಕಂಡು ಅನುಭವಿಸಿದೆವು' ಎಂದು ಚಿತ್ರೀಕರಣದ ಅನುಭವ ಹಂಚಿಕೊಂಡರು.

ಹಾಸ್ಯ ಪ್ರಧಾನ ಸಿನಿಮಾಗಳ ಆಸೆ

'ವಾರಕ್ಕೊಂದು ಸಿನಿಮಾದ ಆಫರ್‌ಗಳು ಬರುತ್ತಿದ್ದವು. ಆದರೆ ಮದುವೆಯಾದ ಬಳಿಕ ಯಾವ ಕರೆಗಳೂ ಬಂದಿರಲಿಲ್ಲ. ಮದುವೆಯಾದ ಮೇಲೆ ನಟಿಸುವುದಿಲ್ಲ ಎಂದು ಬೇರೆಯವರು ಅಂದುಕೊಂಡಿರಬಹುದು. ನಾನು ಯಾವತ್ತಿದ್ದರೂ ನಟನೆಗೆ ಸಜ್ಜಾಗಿರುವವಳು. ನನಗೆ ಹೀರೊಯಿನ್ ಪಾತ್ರವೇ ಬೇಕೆಂದಿಲ್ಲ. ನಾನು ಓರ್ವ ನಟಿ. ನನಗೆ ಪಾತ್ರ ಇಷ್ಟವಾದರೆ ಖಂಡಿತಾ ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಸಾಕ್ಷಿಯಾಗಿ 'ಎಕ್ಕ', 'ಅಯ್ಯನ ಮನೆ' ಪಾತ್ರಗಳು ನಿಮ್ಮ ಮುಂದಿವೆ. ನನಗೆ 'ರಾಮ ಶಾಮ ಭಾಮ'ದಂಥ ಹಾಸ್ಯ ಪ್ರಧಾನ ಸಿನಿಮಾಗಳಲ್ಲಿ ನಟಿಸಬೇಕು ಎನ್ನುವ ಆಸೆ ಇದೆ' ಎಂದು ಮಾತಿಗೆ ವಿರಾಮವಿತ್ತರು ಅರ್ಚನಾ.



ಯುದ್ಧ ಪೈರಸಿ ವಿರುದ್ಧ

ಹುಬ್ಬಳ್ಳಿಯಲ್ಲಿ ನಡೆದ 'ಮಾರ್ಕ್' ಸಿನಿಮಾದ ಪ್ರಿರಿಲೀಸ್ ಕಾರ್ಯಕ್ರಮದಲ್ಲಿ ನಟ ಸುದೀಪ್ ಆಡಿದ್ದ ಮಾತುಗಳು ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಗೆ ಒಳಗಾಗಿತ್ತು. 'ಡಿ.25ರಂದು ಚಿತ್ರಮಂದಿರದ ಒಳಗೆ 'ಮಾರ್ಕ್' ಬಿಡುಗಡೆಯಾದರೆ, ಹೊರಗಡೆ ಒಂದು ಪಡೆ ಯುದ್ಧಕ್ಕೆ ಸಿದ್ಧವಾಗಿ ನಿಂತಿರುತ್ತದೆ. ನಾವು ಯುದ್ಧಕ್ಕೂ ಸಿದ್ಧ, ಮಾತಿಗೂ ಬದ್ಧ' ಎಂದು ಸುದೀಪ್ ಉಲ್ಲೇಖಿಸಿದ್ದರು. ಈ ಬಗ್ಗೆ ಮಾಧ್ಯಮಗಳ ಮುಂದೆ ಮಾತನಾಡಿರುವ ಸುದೀಪ್, 'ನನ್ನ ಸಿನಿಮಾವನ್ನು ಉಳಿಸಿಕೊಳ್ಳಲು ಧೈರ್ಯವಾಗಿ ಮಾತನಾಡಿದೆ. ಮಾತನಾಡಲು ದೊಡ್ಡ ಕಾರಣವಿದೆ. ದೊಡ್ಡ ಮಟ್ಟದಲ್ಲಿ ಪೈರಸಿ ಆಗಲಿದೆ ಎನ್ನುವ ವರದಿ ನನಗೆ ಸಿಗುತ್ತದೆ. ಮಾರ್ಕ್ ಮುಗಿಸಿಯೇ ಬಿಡಬೇಕು ಎನ್ನುಷ್ಟರ ಮಟ್ಟಿಗೆ. ಸದ್ಯಕ್ಕೆ ಇವು ಕಣ್ಣಿಗೆ ಕಾಣದ ಮುಖಗಳು. ಪೈರಸಿ ಮಾಡಲು ಸಿದ್ಧವಾಗಿರುವವರಿಗೆ ನನಗೆ ಈ ವಿಷಯ ಗೊತ್ತಾಗಿದೆ ಎನ್ನುವುದನ್ನು ತಿಳಿಸಬೇಕಿತ್ತು. ಜೊತೆಗೆ ನಮ್ಮ ಕಾನೂನು ತಂಡ ಕಠಿಣವಾದ ಕ್ರಮ ತೆಗೆದುಕೊಳ್ಳಲಿದೆ. ವೇದಿಕೆಯಲ್ಲಿ ನಯವಾಗಿ ಮಾತನಾಡುವ ಕಲೆ ನನಗೆ ಗೊತ್ತಿರಲಿಲ್ಲವೇ. ನನಗೆ ಅಲ್ಲಿ ಒಂದು ವಿಷಯವನ್ನು ನೇರವಾಗಿ ಹೇಳಬೇಕಿತ್ತು. ಅದನ್ನು ಹೇಳಿದ್ದೇನೆ. ಚೆಸ್ ಆಡುವಾಗ 'ಚೆಕ್' ಎಂದು ಗಟ್ಟಿಯಾಗಿಯೇ ಹೇಳಬೇಕು. 'ಪೈರಸಿ' ಎಂದು ನೇರವಾಗಿ ಹೇಳುವ ಅವಶ್ಯಕತೆಯೇ ಇರಲಿಲ್ಲ' ಎಂದರು.



ಸುದೀಪ್

'ಸುಖೀಭವ' ಹಾಡಿಗೆ ಶರಣ್ ದನಿ

ಮಹೇಂದ್ರ ನಾಯಕನಾಗಿ ನಟಿಸಿರುವ ಎನ್.ಕೆ.ರಾಜೇಶ್ ನಾಯ್ಡು ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸಿರುವ 'ಸುಖೀಭವ' ಸಿನಿಮಾದ ಹಾಡೊಂದಕ್ಕೆ ನಟ ಶರಣ್ ದನಿಯಾಗಿದ್ದಾರೆ.

ಸಿನಿಮಾವನ್ನು ವೇದ್ ಆರ್ಯನ್ ಫಿಲಂಸ್ ಬ್ಯಾನರ್ ಅಡಿಯಲ್ಲಿ ಸಂತೋಷ್ ಕುಮಾರ್ ಹಾಗೂ ಭಾರ್ಗವಿ ಸಂತೋಷ್ ನಿರ್ಮಿಸಿದ್ದಾರೆ. ಶರಣ್ ಈ ಸಿನಿಮಾದಲ್ಲೂ ಮದ್ಯದ ಕುರಿತಾದ 'ಬೇಡ ಮಚ್ಚಾ ಬೇಡ' ಎಂಬ ಹಾಡನ್ನು ಹಾಡಿದ್ದಾರೆ. ಸಿನಿಮಾವು ಕೌಟುಂಬಿಕ ಕಥೆಯನ್ನು ಹೊಂದಿದ್ದು, ಹೆಚ್ಚಿನ ವಿವರಗಳನ್ನು ಮುಂದಿನ ದಿನಗಳಲ್ಲಿ ನೀಡುವುದಾಗಿ ನಿರ್ದೇಶಕರು ಹೇಳಿದ್ದಾರೆ. ನಾಯಕ ಮಹೇಂದ್ರಗೆ ಜೋಡಿಯಾಗಿ ಸುಶ್ಮಿತ ನಾಯಕ್ ಹಾಗೂ ವಿಯಾನ್ನಿ ಹೆಗ್ಡೆ ನಟಿಸಿದ್ದಾರೆ. ಗೌರವ್ ಶೆಟ್ಟಿ, ಶೋಭರಾಜ್, ರವಿಶಂಕರ್ ಗೌಡ, ಸುನಿಲ್ ಪುರಾಣಿಕ್, ತುಕಾಲಿಸಂತು, ಮೈತ್ರಿ ಜಗ್ಗಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಬಿ.ಜೆ. ಭರತ್-ಶುಭಂ ಸಂಗೀತ, ಮಂಜುನಾಥ್ ನಾಯಕ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.



ಸಂತೋಷ್ ಕುಮಾರ್, ಶರಣ್



ವಿಜಯ್ ದೇವರಕೊಂಡ

2026ರ ಡಿಸೆಂಬರ್‌ನಲ್ಲಿ 'ರೌಡಿ ಜನಾರ್ದನ'

ನಟ ವಿಜಯ್ ದೇವರಕೊಂಡ ನಾಯಕನಾಗಿ ನಟಿಸಲಿರುವ ಹೊಸ ಸಿನಿಮಾದ ಶೀರ್ಷಿಕೆ ಇತ್ತೀಚೆಗೆ ಅನಾವರಣಗೊಂಡಿತು.

ಶ್ರೀ ವೆಂಕಟೇಶ್ವರ ಕ್ರಿಯೇಷನ್ಸ್ ಬ್ಯಾನರ್‌ನ ಬಹುನಿರೀಕ್ಷಿತ ಚಿತ್ರ ಇದಾಗಿದ್ದು, ಚಿತ್ರಕ್ಕೆ 'ರೌಡಿ ಜನಾರ್ದನ' ಎಂಬ ಹೆಸರು ಇಡಲಾಗಿದೆ. ನಿರ್ಮಾಪಕರಾದ ದಿಲ್ ರಾಜು ಮತ್ತು ಶಿರೀಶ್ ನಿರ್ಮಾಣದ ಈ ಚಿತ್ರವನ್ನು 'ರಾಜಾ ವಾರು ರಾಣಿ ಗಾರು' ಖ್ಯಾತಿಯ ನಿರ್ದೇಶಕ ರವಿ ಕಿರಣ್ ಕೋಲಾ ನಿರ್ದೇಶಿಸುತ್ತಿದ್ದಾರೆ. ರಕ್ತಸಿಕ್ತವಾದ ಹಾಗೂ ರಾ ಆ್ಯಕ್ಷನ್‌ನಲ್ಲಿ ಕಾಣಿಸಿಕೊಂಡಿರುವ ವಿಜಯ್ ಪಾತ್ರದ ಲುಕ್ ಕುತೂಹಲವನ್ನು ಹೆಚ್ಚಿಸಿದೆ. ವಿಜಯ್ ದೇವರಕೊಂಡ ಈ ಹಿಂದೆಂದೂ ಕಾಣದ ಮಾಸ್ ಅವತಾರದಲ್ಲಿ ಈ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದಿದೆ ಚಿತ್ರತಂಡ.

1980ರ ಕಾಲಘಟ್ಟದ ಪೂರ್ವ ಗೋದಾವರಿ ಜಿಲ್ಲೆಯ ಹಿನ್ನೆಲೆಯಲ್ಲಿ ಈ ಸಿನಿಮಾದ ಕಥೆ ಸಾಗಲಿದ್ದು, ವಿಜಯ್ ಈ ಚಿತ್ರಕ್ಕಾಗಿ ವಿಶೇಷವಾಗಿ ಗೋದಾವರಿ ಭಾಷಾಸೊಗಡು ಕಲಿತಿದ್ದಾರೆ. ಚಿತ್ರಕ್ಕೆ ಆನೆಂಡ್ ಸಿ. ಚಂದ್ರನ್ ಛಾಯಾಚಿತ್ರಗ್ರಹಣ, ಕ್ರಿಸ್ಟೋ ಕ್ಸೇವಿಯರ್ ಸಂಗೀತ ಮತ್ತು ಸುಪ್ರೀಂ ಸುಂದರ್ ಸಾಹಸ ನಿರ್ದೇಶನವಿದೆ. ಸಿನಿಮಾ 2026ರ ಡಿಸೆಂಬರ್‌ನಲ್ಲಿ ತೆಲುಗು, ಕನ್ನಡ, ತಮಿಳು, ಹಿಂದಿ ಹಾಗೂ ಮಲಯಾಳ ಭಾಷೆಗಳಲ್ಲಿ ಏಕಕಾಲಕ್ಕೆ ಬಿಡುಗಡೆಯಾಗಲಿದೆ.

ಡೇವಿಸ್ ಕಪ್ ತಂಡದಿಂದ ಶ್ರೀರಾಮ್ ಬಾಲಾಜಿಗೆ ಕೊಕ್

ನವದೆಹಲಿ (ಪಿಟಿಐ): ನೆದರ್ಲೆಂಡ್ಸ್ ವಿರುದ್ಧ ಬೆಂಗಳೂರಿನಲ್ಲಿ ಮುಂದಿನ ವರ್ಷದ ಫೆಬ್ರುವರಿಯಲ್ಲಿ ನಡೆಯಲಿರುವ ಡೇವಿಸ್ ಕಪ್ ಮೊದಲ ಸುತ್ತಿನ ಕ್ವಾಲಿಫೈಯರ್ಸ್ ಪಂದ್ಯಕ್ಕೆ ಎಐಟಿಎ ಆಯ್ಕೆ ಸಮಿತಿ ಶ್ರೀರಾಮ್ ಬಾಲಾಜಿ ಅವರನ್ನು ಕೈಬಿಟ್ಟಿದೆ. ಉಳಿದ ಆಟಗಾರರು ಸ್ಥಾನ ಉಳಿಸಿಕೊಂಡಿದ್ದಾರೆ.

ಈ ಪಂದ್ಯ ಫೆಬ್ರುವರಿ 7 ಮತ್ತು 8 ರಂದು ನಡೆಯಲಿದೆ. ಸುಮೀತ್ ನಾಗಲ್ ಅವರು ಸಿಂಗಲ್ಸ್‌ನಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ. ಅನುಭವಿ ಡಬಲ್ಸ್ ಆಟಗಾರ ಬಾಲಾಜಿ ಸ್ಥಾನ ಕಳೆದುಕೊಂಡಿದ್ದಾರೆ. ದೀರ್ಘಾವಧಿ ಯೋಜನೆಯ ಭಾಗವಾಗಿ ಆಯ್ಕೆಸಮಿತಿ ಅವರನ್ನು ಕೈಬಿಟ್ಟಿದೆ. ಹೀಗಾಗಿ ಡಬಲ್ಸ್‌ನಲ್ಲಿ ಯುಕಿ ಭಾಂಬ್ರಿ ಜೊತೆಗೆ ರಿತ್ವಿಕ್ ಬೊಲ್ಲಿಪಳ್ಳಿ ಆಡುವ ಸಾಧ್ಯತೆಯಿದೆ.



'ಯುವ ಆಟಗಾರರ ಮೇಲೆ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡು ನಾವು ಬದಲಾವಣೆ ಮಾಡಿದ್ದೇವೆ' ಎಂದು ಭಾರತ ತಂಡದ ನಾಯಕ ರೋಹಿತ್ ರಾಜಪಾಲ್ ತಿಳಿಸಿದರು. ಕರ್ನಾಟಕದ ಪ್ರಜ್ವಲ್ ದೇವ್ ಜೊತೆಗೆ ಆರ್ಣವ್ ಪಪರ್ಕರ್ ಅವರನ್ನು ಅಭ್ಯಾಸಕ್ಕೆ ನೆರವಾಗಲು ತರಬೇತಿ ಶಿಬಿರಕ್ಕೆ ಕರೆಸಿಕೊಳ್ಳಲಾಗುತ್ತಿದೆ.

ತಂಡ ಇಂತಿದೆ: ಸುಮೀತ್ ನಾಗಲ್, ದಕ್ಷಿಣೇಶ್ವರ್ ಸುರೇಶ್, ಕರಣ್ ಸಿಂಗ್, ಯುಕಿ ಭಾಂಬ್ರಿ ಮತ್ತು ರಿತ್ವಿಕ್ ಬೊಲ್ಲಿಪಳ್ಳಿ. ಮೀಸಲು ಆಟಗಾರರು: ಆರ್ಯನ್ ಶಾ, ಅನಿರುದ್ಧ ಚಂದ್ರಶೇಖರ್ ಮತ್ತು ದಿಗ್ವಿಜಯ ಸಿಂಗ್.

ಎಸ್‌ಜಿ ಪೈಪರ್ಸ್ ತಂಡಕ್ಕೆ ಜಿಸಿಎಲ್ ಕಿರೀಟ

ಮುಂಬೈ (ಪಿಟಿಐ): ಎರಡು ಬಾರಿಯ ವಿಜೇತ ತ್ರಿವೇಣಿ ಕಾಂಟಿನೆಂಟಲ್ ಕಿಂಗ್ಸ್ ತಂಡಕ್ಕೆ ಮಂಗಳವಾರ ಫೈನಲ್‌ನಲ್ಲಿ ಆಘಾತ ನೀಡಿದ ಅಲ್ಪೈನ್ ಎಸ್‌ಜಿ ಪೈಪರ್ಸ್ ತಂಡ ಗ್ಲೋಬಲ್ ಚೆಸ್ ಲೀಗ್‌ನ ಮೂರನೇ ಆವೃತ್ತಿಯಲ್ಲಿ ಚಾಂಪಿಯನ್ ಕಿರೀಟ ಧರಿಸಿತು.

ಫ್ಯಾಬಿಯಾನೊ ಕರುವಾನ (ಅಮೆರಿಕ), ಅನೀಶ್ ಗಿರಿ (ನೆದರ್ಲೆಂಡ್ಸ್), ಹೌ ಇಫಾನ್ (ಚೀನಾ), ಪ್ರಜ್ಞಾನಂದ (ಭಾರತ), ನೀನೊ ಬಾಟ್ಸಿಯಾಶ್ವಿಲಿ (ಜಾರ್ಜಿಯಾ), ಲಿಯಾನ್ ಲ್ಯೂಕ್ ಮೆಂಡೋನ್ಸಾ (ಭಾರತ) ಅವರು ಅಲ್ಪೈನ್ ತಂಡವನ್ನು ಪ್ರತಿನಿಧಿಸಿದ್ದರು.

ಪೈಪರ್ಸ್ ತಂಡ ಮೊದಲ ರ್‍ಯಾಪಿಡ್ ಪಂದ್ಯವನ್ನು ಕಪ್ಪು ಕಾಯಿಗಳಲ್ಲಿ ಆಡಿ 4–2 ರಿಂದ ಜಯಿಸಿತು. ನಂತರ ಬಿಳಿ ಕಾಯಿಗಳಲ್ಲಿ 4.5–1.5 ಅಂತರದಿಂದ ಗೆಲುವು ಸಾಧಿಸಿತು. ಪಿಬಿಜಿ ಅಲಾಸ್ಕನ್ ನೈಟ್ಸ್ ತಂಡ ಮೂರನೇ ಸ್ಥಾನ ಪಡೆಯಿತು.

ದೇಶಿ ಕ್ರಿಕೆಟ್‌ನಲ್ಲಿ ವಿರಾಟ್ ಆಕರ್ಷಣೆ

ವಿಜಯ್ ಹಜಾರೆ ಟ್ರೋಫಿ ಏಕದಿನ ಟೂರ್ನಿ: ದೆಹಲಿ–ಆಂಧ್ರ ಪ್ರದೇಶ ಮುಖಾಮುಖಿ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಕೆಟ್ ತಾರೆ ವಿರಾಟ್ ಕೊಹ್ಲಿ ಅವರಿಗೆ ಬೆಂಗಳೂರು ಎಂದರೆ ಎರಡನೇ ತವರಿದ್ದಂತೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಕಳೆದ ಹತ್ತೊಂಬತ್ತು ವರ್ಷಗಳಿಂದ ಆಡುತ್ತಿರುವ ವಿರಾಟ್ ಒಂದು ಪೀಳಿಗೆಯನ್ನೇ ಪ್ರಭಾವಿಸಿರುವ ಆಟಗಾರ. ಅವರಿಗಾಗಿ ಮಿಡಿಯುವ ಅಭಿಮಾನಿ ಬಳಗವೇ ಉದ್ಯಾನನಗರಿಯಲ್ಲಿದೆ.

ಆದರೆ, ಜೂನ್ 4ರಂದು ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದಿದ್ದ ಕಾಲ್ತುಳಿತ ಪ್ರಕರಣದಿಂದಾಗಿ ಇಲ್ಲಿ ಯಾವುದೇ ಅಂತರರಾಷ್ಟ್ರೀಯ ಪಂದ್ಯಗಳು ನಡೆದಿಲ್ಲ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಬುಧವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಡಿ ಗುಂಪಿನ ಪಂದ್ಯ ನಡೆಯಬೇಕಿತ್ತು. ಅದರಲ್ಲಿ ಆಂಧ್ರಪ್ರದೇಶದ ಎದುರು ಆಡುವ ದೆಹಲಿ ತಂಡದಲ್ಲಿ ವಿರಾಟ್ ಕಣಕ್ಕಿಳಿಯಬೇಕಿತ್ತು. ಅದನ್ನು ನೋಡಲು ಅಭಿಮಾನಿಗಳು ತವಕಿಸಿದ್ದರು. ಆದರೆ ಸುರಕ್ಷತೆಯ ಕಾರಣದಿಂದಾಗಿ ಪಂದ್ಯವು ನಗರದ ಹೊರವಲಯ ದಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಕ್ರೀಡಾಂಗಣಕ್ಕೆ ಸ್ಥಳಾಂತರಗೊಂಡಿದೆ. ಅಲ್ಲಿ ಪ್ರೇಕ್ಷಕರಿಗೆ ಪ್ರವೇಶವಿಲ್ಲ.

ಆದರೆ ಬಿಸಿಸಿಐ ಈಚೆಗೆ ಮಾಡಿರುವ ನಿಯಮದ ಅನ್ವಯ ಅಂತರರಾಷ್ಟ್ರೀಯ ಪಂದ್ಯಗಳಿಂದ ಬಿಡುವು ಸಿಕ್ಕಾಗ ದೇಶಿ ಟೂರ್ನಿಗಳಲ್ಲಿ ಖ್ಯಾತನಾಮ ಆಟಗಾರರು ಆಡುವುದು ಕಡ್ಡಾಯ. ಟೂರ್ನಿಯಲ್ಲಿ ಕನಿಷ್ಠ ಎರಡು ಪಂದ್ಯಗಳನ್ನಾದರೂ ಆಡಲೇ ಬೇಕು. ಟೆಸ್ಟ್ ಮತ್ತು ಟಿ20 ಮಾದರಿಗಳಿಂದ ನಿವೃತ್ತರಾಗಿರುವ ಕೊಹ್ಲಿ ಏಕದಿನ ತಂಡದಲ್ಲಿದ್ದಾರೆ. ಆದ್ದರಿಂದ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಆಡುತ್ತಿದ್ದಾರೆ. ವಿರಾಟ್ ಅವರು ಈ ಪಂದ್ಯದಲ್ಲಿ ಒಂದು ರನ್ ಗಳಿಸಿದರೆ ಲಿಸ್ಟ್ ಎ ಕ್ರಿಕೆಟ್‌ನಲ್ಲಿ 16 ಸಾವಿರ ರನ್ ಪೇರಿಸಿದ ಆಟಗಾರರ ಸಾಲಿಗೆ ಸೇರಲಿದ್ದಾರೆ.

ವಿಕೆಟ್‌ಕೀಪರ್–ಬ್ಯಾಟರ್ ರಿಷಭ್ ಪಂತ್ ನಾಯಕತ್ವದಲ್ಲಿ ದೆಹಲಿ ತಂಡವು ಕಣಕ್ಕಿಳಿಯಲಿದೆ. ಆಂಧ್ರ ತಂಡವನ್ನು ಯುವ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಮುನ್ನಡೆಸುವರು.

ಆದರೆ ರಿಷಭ್ ಅವರು ಕಳೆದ ಒಂದು ವರ್ಷದಿಂದ ಸೀಮಿತ ಓವರ್‌ಗಳ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆಡಿಲ್ಲ. ದೆಹಲಿ ತಂಡದಲ್ಲಿ ಅನುಭವಿ ವೇಗಿ ಇಶಾಂತ್ ಶರ್ಮಾ, ನವದೀಪ್ ಸೈನಿ, ಬ್ಯಾಟರ್ ಆಯುಷ್ ಬಡೋನಿ, ಐಪಿಎಲ್‌ನಲ್ಲಿ ಮಿಂಚಿದ್ದ ಪ್ರಿಯಾಂಶ್ ಆರ್ಯ, ಯಶ್ ಧುಳ್ ಅವರೂ ಇದ್ದಾರೆ.

ಆಂಧ್ರ ತಂಡದಲ್ಲಿ ರಿಕಿ ಭುಯ್, ಅಶ್ವಿನ್ ಹೆಬ್ಬಾರ್, ಸೌರಭ್ ಕುಮಾರ್ ಅವರು ಪ್ರಮುಖರಾಗಿದ್ದಾರೆ. ಮೇಲ್ನೋಟಕ್ಕೆ ದೆಹಲಿ ತಂಡವೇ ಬಲಾಢ್ಯವಾಗಿದೆ. ವಿರಾಟ್ ಕೂಡ ಇರುವುದರಿಂದ ದೆಹಲಿ ತಂಡದ ಶಕ್ತಿ ದುಪ್ಪಟ್ಟಾಗುವ ನಿರೀಕ್ಷೆ ಇದೆ. 2010ರಲ್ಲಿ ವಿರಾಟ್ ಕೊನೆಯ ಬಾರಿ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಆಡಿದ್ದರು.

ಡಿ ಗುಂಪಿನ ಮೂರು ಪಂದ್ಯಗಳು (ಗುಜರಾತ್–ಸರ್ವಿಸಸ್, ಹರಿಯಾಣ–ರೈಲ್ವೆಸ್ ಹಾಗೂ ಒಡಿಶಾ–ಸೌರಾಷ್ಟ್ರ) ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯಲಿವೆ.

ಪಂದ್ಯ ಆರಂಭ: ಬೆಳಿಗ್ಗೆ 9

ಕಣದಲ್ಲಿ ರೋಹಿತ್

ಭಾರತ ತಂಡದ ಮಾಜಿ ನಾಯಕ ರೋಹಿತ್ ಶರ್ಮಾ ಅವರೂ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಆಡಲಿದ್ದಾರೆ. ಜೈಪುರದಲ್ಲಿ ನಡೆಯಲಿರುವ ಸಿ ಗುಂಪಿನ ಪಂದ್ಯದಲ್ಲಿ ಅವರು ಮುಂಬೈ ತಂಡದಲ್ಲಿ ಆಡಲಿದ್ದಾರೆ. ಸಿಕ್ಕಿಂ ಎದುರು ಪಂದ್ಯ ನಡೆಯಲಿದೆ.

ಶಾರ್ದೂಲ್ ಠಾಕೂರ್ ನಾಯಕತ್ವದ ಮುಂಬೈ ತಂಡದಲ್ಲಿ ಸರ್ಫರಾಜ್ ಖಾನ್, ಮುಷೀರ್ ಖಾನ್, ತನುಷ್ ಕೋಟ್ಯಾನ್, ಶಮ್ಸ್ ಮುಲಾನಿ ಅವರಂತಹ ಅನುಭವಿಗಳೂ ಆಡುತ್ತಿದ್ದಾರೆ. ಇದರಿಂದಾಗಿ ಲೀ ಯಾಂಗ್ ಲೆಪ್ಚಾ ನಾಯಕತ್ವದ ತಂಡವು ಮುಂಬೈಗೆ ಸುಲಭದ ತುತ್ತಾಗುವ ಸಾಧ್ಯತೆ ಇದೆ.



ದೆಹಲಿ ತಂಡದ ನಾಯಕ ರಿಷಭ್ ಪಂತ್ ಹಾಗೂ ಬ್ಯಾಟರ್ ಯಶ್ ಧುಳ್ ಅವರು ಬೆಂಗಳೂರಿನ ಹೊರವಲಯದಲ್ಲಿರುವ ಬಿಸಿಸಿಐ ಸಿಒಇ ಕ್ರೀಡಾಂಗಣದಲ್ಲಿ ಮಂಗಳವಾರ ಅಭ್ಯಾಸ ನಡೆಸಿದರು ಪಿಟಿಐ ಚಿತ್ರ

ಚಿನ್ನಸ್ವಾಮಿಯಲ್ಲಿ ಹಜಾರೆ ಟ್ರೋಫಿ ಪಂದ್ಯಕ್ಕೆ ನಕಾರ

ಒಂದನೇ ಪುಟದಿಂದ...

ಯಾಕೆ ನಿರಾಕರಣೆ ? : ಆರ್‌ಸಿಬಿ ವಿಜಯೋತ್ಸವದ ವೇಳೆ, ಕ್ರೀಡಾಂಗಣದ ಹೊರವಲಯಲ್ಲಿ ಸಂಭವಿಸಿದ ಕಾಲ್ತುಳಿತದ ಬಳಿಕ ಪೊಲೀಸ್ ಇಲಾಖೆ ನೀಡಿದ್ದ 17 ಅಂಶಗಳ ಸಲಹೆ ಸೂಚನೆಗಳನ್ನು ಕೆಎಸ್‌ಸಿಎ ಪಾಲಿಸಿಲ್ಲ. ಜತೆಗೆ ಅಗ್ನಿಶಾಮಕ ದಳದ ಸುರಕ್ಷತಾ ಕ್ರಮಗಳನ್ನು ಅನುಸರಿಸಿಲ್ಲ. ಪ್ರಮುಖವಾಗಿ ದೆಹಲಿ ತಂಡದಲ್ಲಿ ವಿರಾಟ್ ಕೊಹ್ಲಿ ಆಟವಾಡಲಿದ್ದಾರೆ. ಹೀಗಾಗಿ, ಅಭಿಮಾನಿಗಳು ಕ್ರೀಡಾಂಗಣದ ಹೊರಭಾಗದಲ್ಲಿ ಅಧಿಕ ಸಂಖ್ಯೆಯಲ್ಲಿ ಸೇರುವ ಸಾಧ್ಯತೆಯಿದೆ. ಗೇಟ್ ವಿಸ್ತರಣೆ ಮತ್ತು ಜನರು ಓಡಾಡಲು ಅನುಕೂಲವಾಗುವ ಹಾಗೆ ಕ್ರೀಡಾಂಗಣದಲ್ಲಿ ವ್ಯವಸ್ಥೆ ಮಾಡದ ಕಾರಣ ಪಂದ್ಯದ ಆಯೋಜನೆಗೆ ಅನುಮತಿ ನೀಡಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸರ್ಕಾರದ ನಿರ್ಧಾರವನ್ನು ಗೌರವಿಸುತ್ತೇವೆ– ಕೆಎಸ್‌ಸಿಎ: ‘ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಪಂದ್ಯಗಳ ಆಯೋಜನೆಗೆ ರಾಜ್ಯ ಸರ್ಕಾರವು ಅನುಮತಿ ನೀಡಿಲ್ಲ. ಸರ್ಕಾರದ ನಿರ್ಧಾರವನ್ನು ಗೌರವಿಸುತ್ತೇವೆ’ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ.

‘ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳ ಆಯೋಜನೆಗೆ ಅನುಮತಿಯ ಪಡೆಯಲು ನ್ಯಾಯಮೂರ್ತಿ ಡಿ’ಕುನ್ಹಾ ಸಮಿತಿಯು ಮಾಡಿರುವ ಶಿಫಾರಸುಗಳ ಅನುಷ್ಠಾನ ಅಗತ್ಯವಾಗಿದೆ ಎಂಬುದು ಸ್ಪಷ್ಟವಾಗಿದೆ. ಇದನ್ನು ನಮ್ಮ ಸಂಸ್ಥೆಯು ಗೌರವಪೂರ್ವಕವಾಗಿ ಅಂಗೀಕರಿಸುತ್ತದೆ’ ಎಂದು ಮಂಗಳವಾರ ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಸರ್ಕಾರವು ರಚಿಸಿರುವ ಪರಿಶೀಲನಾ ಸಮಿತಿಯ ಅಧಿಕಾರಿಗಳಿಂದ ವಿವರವಾದ ಮಾಹಿತಿಗಳು ಮತ್ತು ಶಿಫಾರಸುಗಳನ್ನು ಸ್ವೀಕರಿಸಲು ಸಂಸ್ಥೆಯು ಎದುರು ನೋಡುತ್ತಿದೆ. ಸಮಿತಿಯು ನೀಡುವ ಎಲ್ಲಾ ಶಿಫಾರಸುಗಳನ್ನು ರಚನಾತ್ಮಕ ಮತ್ತು ನಿಗದಿಯ ಕಾಲಮಿತಿಯೊಳಗೆ ಕಾರ್ಯಗತಗೊಳಿಸಲಾಗುವುದು ಭರವಸೆ ನೀಡುತ್ತೇವೆ. ಸಾಧ್ಯವಾದಷ್ಟು ಬೇಗ ಎಲ್ಲಾ ಸುರಕ್ಷತೆ, ಭದ್ರತೆ ಮತ್ತು ಮೂಲಸೌಕರ್ಯ ಸಂಬಂಧಿತ ಕ್ರಮಗಳನ್ನು ಕಾರ್ಯಗತಗೊಳಿಸಲು ಕೆಎಸ್‌ಸಿಎ ಸಂಪೂರ್ಣವಾಗಿ ಬದ್ಧವಾಗಿದೆ’ ಎಂದು ತಿಳಿಸಿದ್ದಾರೆ.



ಚಿನ್ನಸ್ವಾಮಿ ಕ್ರೀಡಾಂಗಣ

ಬೆಂಗಳೂರಿನಲ್ಲಿ ಕ್ರಿಕೆಟ್ ಪಂದ್ಯಗಳು ನಡೆಯಬೇಕು, ಗೌರವ ಉಳಿಯಬೇಕು ಎಂದು ಬಯಸುವವನು ನಾನು. ಮುಂದೆ ಅನಾಹುತ ಆಗದಂತೆ ಯಾವ ಮಾನದಂಡಗಳನ್ನು ಅನುಸರಿಸಬೇಕು ಎಂಬ ಬಗ್ಗೆ ಚರ್ಚಿಸಲಾಗುವುದು

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಮಯಂಕ್ ಪಡೆಗೆ ಜಾರ್ಖಂಡ್ ಸವಾಲು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಹಾಲಿ ಚಾಂಪಿಯನ್ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಎ ಗುಂಪಿನಲ್ಲಿ ಕಣಕ್ಕಿಳಿಯಲಿದೆ.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಬುಧವಾರ ನಡೆಯಲಿರುವ ಪಂದ್ಯದಲ್ಲಿ ಮಯಂಕ್ ಅಗರವಾಲ್ ಬಳಗವು ಇಶಾನ್ ಕಿಶನ್ ನಾಯಕತ್ವದ ಜಾರ್ಖಂಡ್ ತಂಡವನ್ನು ಎದುರಿಸಲಿದೆ.



ಮಯಂಕ್ ಅಗರವಾಲ್ ಮತ್ತು ದೇವದತ್ತ ಪಡಿಕ್ಕಲ್

ಈಚೆಗೆ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿಯಲ್ಲಿ ಜಾರ್ಖಂಡ್ ಚಾಂಪಿಯನ್ ಆಗಿತ್ತು. ಆದರೆ ಕರ್ನಾಟಕ ತಂಡವು ನಿರಾಶಾದಾಯಕ ಪ್ರದರ್ಶನ ನೀಡಿತ್ತು. ಏಕದಿನ ಮಾದರಿಯಲ್ಲಿ ಪುಟಿದೇಳುವ ಹುಮ್ಮಸ್ಸಿನಲ್ಲಿದೆ.

ಟೂರ್ನಿಯ ಮೂರು ಮತ್ತು ನಾಲ್ಕನೇ ಪಂದ್ಯದಲ್ಲಿ ಕೆ.ಎಲ್. ರಾಹುಲ್ ಅವರು ಆಡುವ ನಿರೀಕ್ಷೆ ಇದೆ. ಮೊದಲೆರಡು ಪಂದ್ಯಗಳಲ್ಲಿ ಅನುಭವಿ ದೇವದತ್ತ ಪಡಿಕ್ಕಲ್, ಕರುಣ್ ನಾಯರ್, ಯುವ ಆಟಗಾರ ಸ್ಮರಣ್ ರವಿಚಂದ್ರನ್, ಅಭಿನವ್ ಮನೋಹರ್ ಅವರ ಆಟದ ಮೇಲೆಯೇ ಬ್ಯಾಟಿಂಗ್ ವಿಭಾಗವು ಅವಲಂಬಿತವಾಗಿದೆ.

ಬೌಲಿಂಗ್ ಹೊಣೆಯು ವೈಶಾಖ ವಿಜಯಕುಮಾರ್, ಅಭಿಲಾಷ್ ಶೆಟ್ಟಿ ಅವರ ಮೇಲೆ ಇದೆ. ಸ್ಪಿನ್ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರು ಉತ್ತಮ ಲಯದಲ್ಲಿದ್ದಾರೆ. ಯುವ ಆಟಗಾರರಾದ ಎಲ್. ಮನ್ವಂತ್ ಕುಮಾರ್, ಶ್ರೀಶಾ ಆಚಾರ್ ಅವರಿಗೂ ಕಣಕ್ಕಿಳಿಯುವ ಅವಕಾಶ ಸಿಗಬಹುದು.

ಮುಂಬರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡದಲ್ಲಿ ಸ್ಥಾನ ಪಡೆದಿರುವ ಇಶಾನ್ ಕಿಶನ್ ಅಪಾರ ಆತ್ಮವಿಶ್ವಾಸದಲ್ಲಿದ್ದಾರೆ. ಬ್ಯಾಟಿಂಗ್‌ನಲ್ಲಿಯೂ ಉತ್ತಮ ಫಾರ್ಮ್‌ನಲ್ಲಿರುವ ಅವರ ತಂಡದಲ್ಲಿ ಪ್ರತಿಭಾನ್ವಿತ ಆಟಗಾರರಿದ್ದಾರೆ. ಕರ್ನಾಟಕ ತಂಡಕ್ಕೆ ಕಠಿಣ ಸವಾಲೊಡ್ಡಲು ಸಿದ್ಧರಾಗಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 9